ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME - 13 ಸಂಪುಟ-13 | ISSUE - 94 ಸಂಚಿಕೆ- 94 | PAGE-8 ಪುಟ-8 | ಮಂಗಳವಾರ 20.05.2025 | RS.2/- ಬೆಲೆ 2/-


ಕರ್ನಾಟಕ ಸರ್ಕಾರ



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

## ಸಾರಿಗೆಯ 2 ವರ್ಷದ ಸಾರ್ಥಕ ಸಾಧನೆಯ ಮೈಲಿಗಲ್ಲು



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

**ಹೊಸ ಬಸ್ಸುಗಳ ಸೇರ್ಪಡೆ**
- 5800 ಹೊಸ ಬಸ್ಸುಗಳ ಸೇರ್ಪಡೆಗೆ ಅನುಮೋದನೆ
- ಈಗಾಗಲೇ 5009 ಬಸ್ಸುಗಳ ಸೇರ್ಪಡೆ (ಕರಾರಸಾನಿ–1165, ಬಿಎಂಟಿಸಿ–1955, ವಾಕರಸಾಸಂ –856, ಕಕರಸಾನಿ –1033)

**ಹೊಸ ನೇಮಕಾತಿ**
- 10000 ಹುದ್ದೆಗಳ ನೇಮಕಾತಿಗೆ ಚಾಲನೆ
- ಈಗಾಗಲೇ 4700 ಹೊಸ ನೇಮಕಾತಿ ಮತ್ತು 1000 ಅನುಕಂಪದ ನೇಮಕಾತಿ ಪೂರ್ಣ
- ಉಳಿದ 4300 ನೇಮಕಾತಿಗಳು ಇನ್ನೆರಡು ತಿಂಗಳಲ್ಲಿ ಪೂರ್ಣಗೊಳ್ಳಲಿದೆ

**ಕೆಎಸ್‌ಆರ್‌ಟಿಸಿ ಆರೋಗ್ಯ**
- 350ಕ್ಕೂ ಹೆಚ್ಚು ಆಸ್ಪತ್ರೆಗಳು, 1.39 ಲಕ್ಷ ಸಿಬ್ಬಂದಿ ಹಾಗೂ ಅವಲಂಬಿತರಿಗೆ ವೆಚ್ಚದ ಮಿತಿಯಿಲ್ಲದೆ ನಗದು ರಹಿತ ವೈದ್ಯಕೀಯ ಚಿಕಿತ್ಸೆ, ಇಲ್ಲಿಯವರೆಗೆ ಒಟ್ಟು 69,185 ಕ್ಲೈಮುಗಳು
- ವಾಕರಸಾಸಂಸ್ಥೆಯ ಸಿಬ್ಬಂದಿಗಳಿಗೆ ಕಿಮ್ಸ್‌ನೊಂದಿಗೆ 'ನಗದು ರಹಿತ' ವೈದ್ಯಕೀಯ ಸೌಲಭ್ಯ

**ಸಾರಿಗೆ ಸುರಕ್ಷಾ ವಿಮಾ ಯೋಜನೆ**
- ಅಪಘಾತದಲ್ಲಿ (ಆನ್ ಡ್ಯೂಟಿ / ಆಫ್ ಡ್ಯೂಟಿ) ಮೃತಪಟ್ಟ ಸಿಬ್ಬಂದಿಯ ಅವಲಂಬಿತರಿಗೆ ರೂ.1 ಕೋಟಿ ಚೆಕ್ ವಿತರಣೆ
- ಇದೇ ಮೊದಲ ಬಾರಿಗೆ ಅಪಘಾತದಲ್ಲಿ ಕಾಲು ಕಳೆದುಕೊಂಡ ಸಿಬ್ಬಂದಿಗೆ ರೂ.25 ಲಕ್ಷ ಪರಿಹಾರ ಮೊತ್ತ ವಿತರಣೆ

**ಡಿಜಿಟಲ್ ಉಪಕ್ರಮಗಳು**
- ಬಸ್ಸುಗಳಲ್ಲಿ ಯುಪಿಐ ಡಿಜಿಟಲ್ ಪಾವತಿ
- ಸಾರಿಗೆ ಮಿತ್ರ (ಹೆಚ್‌ಆರ್‌ಎಂಎಸ್), ಇನ್ವೆಂಟರಿ ಮ್ಯಾನೇಜ್‌ಮೆಂಟ್ (ಇ–ಉಗ್ರಾಣ), 'ನಮ್ಮ ಬಿಎಂಟಿಸಿ' ಮೊಬೈಲ್ ಅಪ್ಲಿಕೇಶನ್

**ಕುಟುಂಬ ಕಲ್ಯಾಣ ವಿಮಾ ಯೋಜನೆ**
ಅಪಘಾತ ಹೊರತುಪಡಿಸಿ ಇತರೆ ಕಾರಣಗಳಿಂದ ಮೃತಪಟ್ಟ ಸಿಬ್ಬಂದಿಗಳ ಕುಟುಂಬಕ್ಕೆ ಪರಿಹಾರ ಮೊತ್ತ ರೂ. 3 ಲಕ್ಷದಿಂದ ರೂ. 10 ಲಕ್ಷಕ್ಕೆ ಏರಿಕೆ

**ಹೊಸ ಟ್ರಕ್ ಟರ್ಮಿನಲ್‌ಗಳು**
ಮೈಸೂರು, ದಾಸನಪುರ, ಹೊಸಪೇಟೆ, ರಾಯಚೂರು, ಗುಂಡ್ಲುಪೇಟೆ, ದಾಂಡೇಲಿ, ಹುಬ್ಬಳ್ಳಿಗಳಲ್ಲಿ ಟ್ರಕ್ ಟರ್ಮಿನಲ್‌ಗಳ ನಿರ್ಮಾಣ

**ಸಾರಿಗೆ ವಿದ್ಯಾ ಚೇತನ**
ಸಿಬ್ಬಂದಿಗಳ ಮಕ್ಕಳಿಗೆ ಅತ್ಯಧಿಕ ಮೊತ್ತದ ವಿದ್ಯಾರ್ಥಿ ವೇತನ, ಇಲ್ಲಿಯವರೆಗೆ ರೂ. 2.84 ಕೋಟಿ ಪಾವತಿ

**ಹೃದ್ರೋಗ ತಪಾಸಣೆ**
ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಅವರೊಂದಿಗೆ ಕರಾರಸಾ ನಿಗಮ, ಬಿಎಂಟಿಸಿ ಮತ್ತು ಕಕರಸಾ ನಿಗಮದ ಸಿಬ್ಬಂದಿಗಳಿಗಾಗಿ ಉಚಿತ ಹೃದ್ರೋಗ ತಪಾಸಣೆ




**ಹೊಸ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥ**
- 38 ಸ್ಥಳಗಳಲ್ಲಿ ರೂ. 274 ಕೋಟಿ ವೆಚ್ಚದಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳ ನಿರ್ಮಾಣ
- ರೂ.71 ಕೋಟಿ ವೆಚ್ಚದಲ್ಲಿ 11 ಸ್ಥಳಗಳಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿ ನಿರ್ಮಾಣ

**ನಮ್ಮ ಕಾರ್ಗೋ**
20 ಸರಕು ಸಾಗಣೆ ವಾಹನಗಳ ಮೂಲಕ ಲಾಜಿಸ್ಟಿಕ್ಸ್ ಸೇವೆ ಆರಂಭ

**ಬಸ್ಸುಗಳ ಪುನಶ್ಚೇತನ ಕಾರ್ಯ**
1748 ಹಳೆಯ ಬಸ್ಸುಗಳ ಪುನಶ್ಚೇತನ ಕಾರ್ಯ

**ಹೊಸ ಬಸ್ಸು ನಿಲ್ದಾಣ/ಘಟಕ ನಿರ್ಮಾಣ**
- ಮೈಸೂರು ನಗರದಲ್ಲಿ (ಬನ್ನಿಮಂಟಪ) ರೂ.120 ಕೋಟಿ ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಕ್ರಮ
- ರಾಜ್ಯಾದ್ಯಂತ 24 ಬಸ್ ನಿಲ್ದಾಣಗಳು, 08 ಬಸ್ ಘಟಕಗಳ ನಿರ್ಮಾಣ/ಮೇಲ್ದರ್ಜೆಗೇರಿಸಲಾಗಿದೆ

**ಮೊಬೈಲ್ ವ್ಯಾನ್/ಮೆಟ್ರೋ ಫೀಡರ್ ವ್ಯವಸ್ಥೆ**
- ಬೆಂಗಳೂರು ನಗರದಲ್ಲಿ ಬಸ್ ಆಕಸ್ಮಿಕ ಅವಘಡಕ್ಕೀಡಾದಾಗ ಸಂಚಾರಿ ಕಾರ್ಯಾಗಾರ ಪ್ರಮುಖ ಬಸ್ ನಿಲ್ದಾಣಗಳಿಗೆ ನಿಯೋಜನೆ
- 70 ಮೆಟ್ರೋ ಫೀಡರ್ ಬಸ್ಸುಗಳು, 212 ಅನುಸೂಚಿಗಳ ಕಾರ್ಯಾಚರಣೆ

**ಬಸ್ಸುಗಳ ಬ್ರಾಂಡಿಂಗ್/ಬಸ್ ಟ್ರಿಪ್‌ಗಳ ಹೆಚ್ಚಳ**
- ಅಶ್ವಮೇಧ, ಪಲ್ಲಕ್ಕಿ, ಅಂಬಾರಿ ಉತ್ಸವ, ಕಲ್ಯಾಣ ರಥ, ಐರಾವತ ಕ್ಲಬ್ ಕ್ಲಾಸ್ 2.0, ಅಮೋಘವರ್ಷ
- ಪ್ರತಿದಿನ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ 21,832 ಬಸ್ ಟ್ರಿಪ್‌ಗಳ ಹೆಚ್ಚಳ ಹಾಗೂ 32 ಲಕ್ಷ ಪ್ರಯಾಣಿಕರ ಏರಿಕೆ



ಶ್ರೀ ರಾಮಲಿಂಗಾರೆಡ್ಡಿ, ಮಾನ್ಯ ಸಾರಿಗೆ ಹಾಗೂ ಮುಜರಾಯಿ ಸಚಿವರು ರೂ.1 ಕೋಟಿ ಚೆಕ್ ಅನ್ನು ಮೃತ ಸಾರಿಗೆ ಸಿಬ್ಬಂದಿಗಳ ಅವಲಂಬಿತರಿಗೆ ವಿತರಣೆ ಮಾಡಿದ ಸಂದರ್ಭ

**ಅಪಘಾತ ಪರಿಹಾರ ನಿಧಿ**
ಬಸ್ಸಿನಲ್ಲಿ ಪ್ರಯಾಣಿಸುತ್ತಿರುವ ಪ್ರಯಾಣಿಕರು ಬಸ್ ಅಪಘಾತಕ್ಕೆ ಒಳಗಾಗಿ ಮೃತಪಟ್ಟಲ್ಲಿ ನೀಡಲಾಗುತ್ತಿದ್ದ ಪರಿಹಾರ ಮೊತ್ತ ರೂ.3 ಲಕ್ಷದಿಂದ ರೂ.10 ಲಕ್ಷಕ್ಕೆ ಏರಿಕೆ


ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಗೆ ಕಳೆದ 2 ವರ್ಷದಲ್ಲಿ 181 ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿರುತ್ತವೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು
ಸುರಕ್ಷತೆ, ವಿಶ್ವಾಸಾರ್ಹ ಪ್ರಯಾಣದ ಪ್ರತೀಕ

ನುಡಿದಂತೆ ನಡೆದಿದ್ದೇವೆ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

## ವಿವಿಧ ದಲಿತ ಸಂಘಟನೆಗಳ ವತಿಯಿಂದ ಒಂದು ದಿನದ ಸಾಂಕೇತಿಕ ಧರಣಿ ಸತ್ಯಾಗ್ರಹ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮೇ. 19 :– ಬ್ರೀಮ್ಸ್ ಭೋಧಕಆಸ್ಪತ್ರೆಯಲ್ಲಿಗ್ರೂಪ್(ಡಿ) ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವಮಹಿಳಾ ಸ್ವಚ್ಛತಾ ಕರ್ಮಿಗಳಾದ1) ಶ್ರೀಮತಿ ಲಕ್ಷ್ಮೀಗಂಡ ಅಂಬಾಜಿ ಅಷ್ಟೂರ 2) ಶ್ರೀಮತಿ ಯಶೋಧರ ಗಂಡ ಸುಂದರ 3) ಲಕ್ಷ್ಮೀ ಗಂಡ ರಮೇಶ 4) ಅಂಬಿಕಾ ಗಂಡ ರಾಜಕುಮಾರ 5) ಸುನೀತಾ ಗಂಡ ವಿಜಯಕುಮಾರ 6) ಶಾರದಮ್ಮಾ ಗಂಡ ರಾಜಕುಮಾರ ಇವರು ಸೇರಿಕೊಂಡು ಬ್ರೀಮ್ಸ್ ಬೋಧಕ ಆಸ್ಪತ್ರೆಬೀದರನಲ್ಲಿ ಪ್ರಥಮ ದರ್ಜೆ ಸಹಾಯಕ ಹಾಗೂ ಪ್ರಭಾರಿ ಸ್ವಚ್ಛತಾ ಮೇಲ್ವಿಚಾರಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಪ್ರಕಾಶ ಮಾಳಗೆ ಅವರ ಮೇಲೆ ಮಾನಸಿಕ ಮತ್ತು ದೈಹಿಕ ಕಿರುಕುಳ ಹಾಗೂ ದೌರ್ಜನ್ಯದ ಸುಳ್ಳು ಆರೋಪ ಮಾಡಿ ಅವರನ್ನು ತೇಜ್ಯೋವಧೆ ಮಾಡುವ ಷಡ್ಯಂತ್ರ ರಚಿಸಿ ಬೀದರ ಜಿಲ್ಲಾ ಬ್ರೀಮ್ಸ್ ಆಸ್ಪತ್ರೆಗೆ ಹಾಗೂ ಜಿಲ್ಲೆಗೆ ಕಪ್ಪು ಚುಕ್ಕೆ ಹಚ್ಚಿ ಇಡಿ ಜಿಲ್ಲೆಗೆ ಕೆಟ್ಟ ಹೆಸರು ತಂದಿರುತ್ತಾರೆ.

ಇದಕ್ಕೆ ಸಂಬಂಧಿಸಿದಂತೆ, ಬ್ರೀಮ್ಸ್ ನಿರ್ದೇಶಕರ ಆದೇಶದ ಮೇರೆಗೆ ವಿಚಾರಣೆ ನಡೆಸುವ ಸಲುವಾಗಿ ಪಾಶ್ ಕಮಿಟಿ (ಕಔಖಊ ಅಂಟಟಬಣಣಜಜ) ಯನ್ನು ನೇಮಕ ಮಾಡಲಾಗಿತ್ತು. ಡಾಕ್ಟರ್ ಉಮಾ ದೇಶಮುಖ ಹೆರಿಗೆ ವಿಭಾಗದ ಮುಖ್ಯಸ್ಥರು ಬೀದರ ರವರ ಅಧ್ಯಕ್ಷತೆಯಲ್ಲಿ ನಡೆಸಿದ ಎರಡು ಸರಣಿ ಸಭೆಗಳನ್ನು (ದಿನಾಂಕ:12/03/2025 ಹಾಗೂ 15/03/2025) ನಡೆಸಿ ತನಿಖೆ ಮಾಡಲಾಗಿದೆ. ಈ ತನಿಖಾ ಸಮಿತಿ ಸಭೆಯಲ್ಲಿ ಶ್ರೀಮತಿ ಲಕ್ಷ್ಮೀಗಂಡ ಅಂಬಾಜಿ ಮತ್ತು ಇನ್ನಿತರ 5 ಜನ ಮಹಿಳಾ ಸ್ವಚ್ಛತಾ ಕರ್ಮಿಗಳ ಸಿಬ್ಬಂಧಿಗಳು ಹಾಗೂ ಪ್ರಕಾಶ ಮಾಳಗೆ ರವರ ಹೇಳಿಕೆಗಳನ್ನು ಪ್ರತ್ಯೇಕವಾಗಿ ಪಡೆದು ಸಮಿತಿಯ ಸದಸ್ಯರು ಕುಲಂಕುಷವಾಗಿ ಪರಿಶೀಲನೆ ಮಾಡಿದ ನಂತರ ಈ ಪ್ರಕರಣದಲ್ಲಿ ಯಾವುದೇ ರೀತಿಯ ದೈಹಿಕ ಮತ್ತು ಮಾನಸಿಕ ಕಿರುಕುಳ ಹಾಗೂ ದೌರ್ಜನ್ಯದ ಬಗ್ಗೆ ಯಾವುದೇ ರೀತಿಯ ಪುರಾವೆಗಳು ಇಲ್ಲವೆಂದು ಕಂಡು ಬಂದಿರುತ್ತದೆ ಎಂದು ಸಮಿತಿಯ ಸರ್ವ ಸದಸ್ಯರ ಅಭಿಪ್ರಾಯದ ಮೇರೆಗೆ ಸಮಿತಿಯ ಅಧ್ಯಕ್ಷರು ವರದಿಯನ್ನು ನೀಡಿರುತ್ತಾರೆ.

ಆದ್ದರಿಂದ ಈ ಮೇಲಿನ ವರದಿ ಗಮನಿಸಿದ ನಂತರ ಶ್ರೀ ಪ್ರಕಾಶ ಮಾಳಗೆ ಅವರ ಮೇಲೆ 6 ಜನ ಮಹಿಳಾ ಸ್ವಚ್ಛತಾ ಕರ್ಮಿಗಳು ಉದ್ದೇಶಪೂರ್ವಕವಾಗಿ ಷಡ್ಯಂತ್ರ ರಚಿಸಿ ದೌರ್ಜನ್ಯದ ಸುಳ್ಳು ಆರೋಪ ಮಾಡಿರುವುದು ಕಂಡು ಬರುತ್ತದೆ. ಆದ್ದರಿಂದ ಶ್ರೀ ಪ್ರಕಾಶ ಮಾಳಗೆ ಅವರ ಮೇಲೆ ದೌರ್ಜನ್ಯದ ಸುಳ್ಳು ಆರೋಪ ಮಾಡಿರುವ ಶ್ರೀಮತಿ ಲಕ್ಷ್ಮೀಗಂಡ ಅಂಬಾಜಿ ಹಾಗೂ ಇತರರನ್ನು ಈ ಕೂಡಲೇ ತಮ್ಮ ಅಧ್ಯಕ್ಷತೆಯಲ್ಲಿರುವ ಬೀದರ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿದ್ದೋದ್ದೇಶ ಸಹಕಾರ ಸಂಘದಿಂದ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿದ ಈ 6 ಜನ ಮಹಿಳೆ ಕಾರ್ಮಿಕರನ್ನು ಈ ಕೂಡಲೇ ಸೇವೆಯಿಂದ ವಜಾಗೊಳಿಸಬೇಕು. ವಿನಃಕಾರಣ ಶ್ರೀ ಪ್ರಕಾಶ ಮಾಳಗೆ ಅವರ ಮೇಲೆ ಸುಳ್ಳು ಆರೋಪ ಮಾಡಿ ಬೀದರ ಜಿಲ್ಲೆಗೆ ಹಾಗೂ ಬ್ರೀಮ್ಸ್ ಆಸ್ಪತ್ರೆಗೆ ಹಾಗೂ ಜಿಲ್ಲೆಗೆ ಕಪ್ಪು ಚುಕ್ಕೆ ಹಚ್ಚಿ ಕೆಟ್ಟ ಹೆಸರು ತಂದಿರುವವರ ಮೇಲೆ ಸೂಕ್ತ ಕಾನೂನಿನ ಕಠಿಣ ಕ್ರಮ ಕೈಗೊಳ್ಳಬೇಕು ಮತ್ತು ಇವರ ಹಿಂದಿರುವ ಕಾಣದ ಕೈಗಳ ವ್ಯಕ್ತಿಗಳನ್ನು ಪತ್ತೆ ಹಚ್ಚಿ ಅವರ ಮೇಲೆಯು ಕಾನೂನಿನ ಕ್ರಮ ಕೈಗೊಳ್ಳಬೇಕೆಂದು

ಮಾನ್ಯ ಜಿಲ್ಲಾಧಿಕಾರಿ ಅವರಿಗೆ ದಿನಾಂಕ: 05/05/2025 ರಂದು ಸಲ್ಲಿಸಿದ ಮನವಿ ಪತ್ರದಲ್ಲಿ ಒಂದು ವಾರದ ಗಡುವು ನೀಡಲಾಗಿತ್ತು ಒಂದು ವೇಳೆ ನಮ್ಮ ಮನವಿಗೆ ಒಂದು ವಾರದಲ್ಲಿ ಸ್ಪಂಧಿಸದಿದ್ದರೆ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿ ಎದುರುಗಡೆ ಧರಣಿ ಸತ್ಯಗ್ರಹ ಮಾಡಲಾಗುವುದೆಂದು ತಿಳಿಸಲಾಗಿತ್ತು. ಆದರೆ ಇಲ್ಲಿಯವರೆಗೆ ಅವರ ಮೇಲೆ ಯಾವುದೇ ಕ್ರಮಕೈಗೊಂಡಿರುವುದಿಲ್ಲ.

ಆದ್ದರಿಂದ ಪಾಶ್ ಕಮಿಟಿ (POSH Committee) ತಿಯಿಂದ ನಡೆಸಲಾದ ವಿಚಾರಣಾ ವರದಿಯಲ್ಲಿ ಶ್ರೀ ಪ್ರಕಾಶ ಮಾಳಗೆ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳು, ಪೂರಾವೆಗಳು ಲಭ್ಯವಿಲ್ಲ ಎಂಬ ವರದಿ ನೀಡಿದ ಕಾರಣ ಶ್ರೀ ಪ್ರಕಾಶ ಮಾಳಗೆ ಅವರ ಮೇಲೆ ಮಾನಸಿಕ ಮತ್ತು ದೈಹಿಕ ಕಿರುಕುಳ ಹಾಗೂ ದೌರ್ಜನ್ಯದ ಸುಳ್ಳು ಆರೋಪ ಮಾಡಿ ಅವರನ್ನು ತೇಜ್ಯೋವಧೆ ಮಾಡುವ ಷಡ್ಯಂತ್ರ ರಚಿಸಿ ಬೀದರ ಜಿಲ್ಲಾ ಬ್ರೀಮ್ಸ್ ಆಸ್ಪತ್ರೆಗೆ ಹಾಗೂ ಜಿಲ್ಲೆಗೆ ಕಪ್ಪು ಚುಕ್ಕೆ ಹಚ್ಚಿ ಕೆಟ್ಟ ಹೆಸರು ತಂದಿರುವ ಶ್ರೀಮತಿ ಲಕ್ಷ್ಮೀಗಂಡ ಅಂಬಾಜಿ ಅಷ್ಟೂರ ಮತ್ತು ಇತರ 5 ಜನ ಮಹಿಳಾ ಸ್ವಚ್ಛತಾ ಕ್ರಮಿಗಳನ್ನು ಸೇವೆಯಿಂದ ವಜಾಗೊಳಿಸಿ ಅವರ ಮೇಲೆ ಸೂಕ್ತ ಕಾನೂನಿನ ಕಠಿಣ ಕ್ರಮ ಕೈಗೊಂಡು ಅವರನ್ನು ಶಿಕ್ಷೆಗೊಳಪಡಿಸಲು ಆಗ್ರಹಿಸಿ ವಿವಿಧ ದಲಿತ ಸಂಘಟನೆಗಳ ವತಿಯಿಂದ ಇಂದು ಜಿಲ್ಲಾಧಿಕಾರಿಗಳ ಕಛೇರಿ ಎದುಗಡೆ ಒಂದು ದಿನದ ಸಾಂಕೇತಿಕ ಧರಣಿ ಸತ್ಯಾಗ್ರಹ ಮಾಡುವುದರ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು ಒಂದು ವೇಳೆ ಸುಳ್ಳು ದೌರ್ಜನ್ಯದ ಆರೋಪ ಮಾಡಿರುವ ಈ 6 ಜನ ಮಹಿಳಾ ಸ್ವಚ್ಛತಾ ಕರ್ಮಿಗಳನ್ನು ಒಂದು ವಾರದಲ್ಲಿ ಸೇವೆಯಿಂದ ವಜಾಗೊಳಿಸದೇ ಇದ್ದಲ್ಲಿ ವಿವಿಧ ದಲಿತ ಸಂಘಟನೆಗಳು ಬೀದರ ವತಿಯಿಂದ ಬ್ರೀಮ್ಸ್ ಆಸ್ಪತ್ರೆ ಎದುರುಗಡೆ ಉಗ್ರವಾದ ಹೋರಾಟ ಮಾಡಲಾಗುವುದು ಎಚ್ಚರಿಸಲಾಯಿತು

ಈ ಸಂದರ್ಭದಲ್ಲಿ ದಲಿತ ಮುಖಂಡರಾದ ಚಂದ್ರಕಾಂತ ನಿರಾಟೆ, ರಾಜಕುಮಾರ ಮೂಲಭಾರತಿ, ರಾಜಕುಮಾರ ಗುನ್ನಳ್ಳಿ, ಶಿವಕುಮಾರ ತುಂಗಾ, ರಾಘವೇಂದ್ರ ಮಿನಕೇರಾ, ನರಸಿಂಗ್ ಸಾಮ್ರಾಟ್, ಸಂತೋಷ ಏಣ–ಕುರೆ, ಅಂಬೇಡ್ಕರ್ ಪಿ. ಬೌದ್ಧೆ, ರಾಹುಲ ಢಾಂಗೆ, ಅರವಿಂದ ದಯಾಳ, ಜಗನ್ನಾಥ ಹೋನ್ನಾ, ಡಿ. ಪ್ರಭಾಕರ ಏಕೆಂಬೇಕರ್, ನಿತೀಷ ಉಪ್ಪೆ, ಸಮಾಧಖಾನ್ ಗಾದಗಿ, ಪ್ರಲ್ಹಾದ ಬಿ. ಮಾಲೇಕರ್ ಹಾಗೂ ಇತರರು ಉಪಸ್ಥಿತರಿದ್ದರು.

## ವೇತನ ಬಾಕಿ ಪಾವತಿಗೆ ಆಗ್ರಹ ಪ್ಯಾರಿ ಶುಗರ್ಸ್ ಕಾರ್ಮಿಕರ ಪ್ರತಿಭಟನೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.19– ತಾಲೂಕಿನ ನಾಗರಾಳ–ನಾಯನೇಗಲಿ ಬಳಿಯ ಈಐಡಿ ಪ್ಯಾರಿ ಶುಗರ್ಸ ಕಾರ್ಮಿಕರು ತಮಗೆ ನೀಡಬೇಕಾದ ವೇತನ ಬಾಕಿ ಪಾವತಿಗೆ ಆಗ್ರಹಿಸಿ ಸೋಮವಾರ ಕಾರ್ಖಾನೆ ಬಳಿ ಸಾಂಕೇತಿಕ ಪ್ರತಿಭಟನೆ ನಡೆಸಿದರು.

ಶುಗರ್ಸ್ ನ ಟ್ರೇಡ್ ಯೂನಿಯನ್ ಕಾರ್ಮಿಕರ ಸಂಘದ ವತಿಯಿಂದ ನಡೆದ ಪ್ರತಿಭಟನೆಯಲ್ಲಿ ನೂರಾರು ಜನ ಕಾರ್ಮಿಕರು ಪಾಲ್ಗೊಂಡು ಕೂಡಲೇ ಆಡಳಿತ ಮಂಡಳಿ ತಮಗೆ ನೀಡಬೇಕಾದ ವೇತನ ಬಾಕಿಯನ್ನು ಪಾವತಿಸುವಂತೆ ಆಗ್ರಹಿಸಿದರು.

ಕೆಲಸ ಪ್ರಾರಂಭಕ್ಕೂ ಮೊದಲು ಬೆಳಿಗ್ಗೆ ಕಾರ್ಖಾನೆಯ ಮುಖ್ಯದ್ವಾರದ ಬಳಿ ಜಮಾಯಿಸಿದ ಕಾರ್ಮಿಕರು ಕೈಗೆ ಕಪ್ಪುಬಟ್ಟೆ ಧರಿಸಿ, ಸಾಂಕೇತಿಕ ಪ್ರತಿಭಟನೆ ನಡೆಸಿದರು. ಸಂಘಟನೆಯ ಅಧ್ಯಕ್ಷ ಮಲ್ಲಿಕಾರ್ಜುನ ಗಂಡೂಡಿ ಮಾತನಾಡಿ, ಕಾರ್ಮಿಕರಿಗೆ 2014 ರಿಂದ 2022 ರವೆಗೆ ಸಿಗಬೇಕಾದ 6 ಮತ್ತು 7 ನೇ ವೇತನದ ಬಾಕಿ ಹಣವನ್ನು ನೀಡದೇ ಆಡಳಿತ ಮಂಡಳಿ ಅನ್ಯಾಯ ಮಾಡುತ್ತಿದೆ ಎಂದು ದೂರಿದರು.

117 ಜನ ಕಾರ್ಮಿಕರಿಗೆ ಅನ್ಯಾಯವಾಗಿದ್ದು, ಇದನ್ನು ಸರಿಪಡಿಸಿ ನ್ಯಾಯ ದೊರಕಿಸಿಕೊಡುವಂತೆ ಎಲ್ಲ ಕಾರ್ಮಿಕರು ಮೊದಲ ಹಂತವಾಗಿ ಕೈಗೆ ಕಪ್ಪುಬಟ್ಟೆ ಧರಿಸಿ ಪ್ರತಿಭಟನೆ ವ್ಯಕ್ತಪಡಿಸಿದ್ದೇವೆ. ಹೀಗೆಯೇ ನಿತ್ಯ ಕಪ್ಪುಬಟ್ಟೆ ಧರಿಸಿ ಕೆಲಸ ಮಾಡುತ್ತೇವೆ. ಇದಕ್ಕೆ ಸ್ಪಂದನೆ ದೊರೆಯದೇ ಹೋದರೆ ಮುಂದಿನ ದಿನಗಳಲ್ಲಿ ಹೋರಾಟಕ್ಕೆ ಇಳಿಯುವುದು ಅನಿವಾರ್ಯವಾಗುತ್ತದೆ ಎಂದು ಮಲ್ಲಿಕಾರ್ಜುನ ಹೇಳಿದರು.

ಪ್ರತಿಭಟನೆಯಲ್ಲಿ ಟ್ರೇಡ್ ಯೂನಿಯನ್ ಉಪಾಧ್ಯಕ್ಷ ನಿಂಗಪ್ಪ ಗಣಿ, ಪ್ರಧಾನ ಕಾರ್ಯದರ್ಶಿ ಮಂಜುನಾಥ ವೀರಾಪೂರ, ಖಜಾಂಚಿ ಮುರಗೇಂದ್ರ ಮೇಟಿ, ನಾಗಪ್ಪ ಗಡೇದ, ನಾರಾಯಣ ಕಬಾಡೆ, ಕರಿಯಪ್ಪ ಮೇಟಿ, ಕೃಷ್ಣಗೌಡ ಪಾಟೀಲ, ಭೀಮನಗೌಡ ಗೌಡರ, ನಿಂಗಪ್ಪ ಗಂಡೂಡಿ, ಉಮೇಶ ನರೇಗಲ್ ಮತ್ತಿತರರು ಪಾಲ್ಗೊಂಡಿದ್ದರು.

ನಮ್ಮ ಶಾಲೆ ನಮ್ಮ ಜವಾಬ್ದಾರಿ ಕಾರ್ಯಕ್ರಮ

## ದಾಖಲಾತಿ ಹೆಚ್ಚಿಸಲು ಮುತುವರ್ಜಿ ವಹಿಸಿ:– ವೆಂಕಟೇಶ್ ಗುಡಾಳ್



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:– ಸರ್ಕಾರಿ ಶಾಲಾ–ಕಾಲೇಜುಗಳತ್ತ ವಿದ್ಯಾರ್ಥಿಗಳು ಅತ್ಮವಿಶ್ವಾಸದಿಂದ ಬರುವಂತೆ ಪ್ರೇರೇಪಿಸಲು ಹಾಗೂ ಸಮುದಾಯದಲ್ಲಿ ಗುಣಮಟ್ಟದ ಶಿಕ್ಷಣದ ಜಾಗೃತಿ ಮೂಡಿಸಲು ಶಿಕ್ಷಣ ಇಲಾಖೆಯು ನಮ್ಮ ಶಾಲೆ ನಮ್ಮ ಜವಾಬ್ದಾರಿ ಕಾರ್ಯಕ್ರಮ ಅನುಷ್ಠಾನಗೊಳಿಸಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ವೆಂಕಟೇಶ್ ಗುಡಾಳ್ ಹೇಳಿದರು. ಪಟ್ಟಣದ ಸರ್ಕಾರಿ ಕನ್ಯಾ ಮಾದರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ನಮ್ಮ ಶಾಲೆ ನಮ್ಮ ಜವಾಬ್ದಾರಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸರಕಾರಿ ಶಾಲೆಗಳು, ಖಾಸಗಿ ಶಾಲೆಗಳಿಗೆ ಸೆಡ್ಡು ಹೊಡೆಯುವಷ್ಟು ಸದೃಢವಾಗಿವೆ. ಗುಣಮಟ್ಟದ ಶಿಕ್ಷಣ, ವಿದ್ಯಾರ್ಥಿ ಸ್ನೇಹಿ ಯೋಜನೆಗಳ ಜಾರಿ ಸೇರಿದಂತೆ ಹಲವು ಸೌಲಭ್ಯಗಳನ್ನು ಸರಕಾರ ನೀಡುತ್ತಿದೆ. ಹಾಗಾಗಿ ವಿದ್ಯಾರ್ಥಿಗಳು ಸರಕಾರಿ ಶಾಲಾ–ಕಾಲೇಜಿಗೆ ಸೇರಿಸುವ ಕೆಲಸ ಆಗಬೇಕು. ಶಿಕ್ಷಕರ ಜತೆಗೆ ಪಾಲಕರು, ಎಸ್ಡಿಎಂಸಿ ಸದಸ್ಯರು, ಸಂಘ ಸಂಸ್ಥೆಗಳ ಮುಖಂಡರು ಸಹಕಾರ ನೀಡಿ ಹೆಚ್ಚೆಚ್ಚು ಸರ್ಕಾರಿ ಶಾಲಾ–ಕಾಲೇಜಿಗೆ ವಿದ್ಯಾರ್ಥಿಗಳನ್ನು ದಾಖಲಿಸಲು ವಿಶೇಷ ಮುತುವರ್ಜಿ ವಹಿಸಬೇಕು ಎಂದರು. ಶಾಲಾ ವಯಸ್ಸಿನ ಮಕ್ಕಳಿಗೆ ಯಾವುದೇ ದಾಖಲಾತಿ ಕೇಳದೆ ಶಾಲೆಗೆ ದಾಖಲಿಸಿಕೊಳ್ಳಿ ಹಾಗೂ ಶಾಲಾ ಪ್ರಾರಂಭೋತ್ಸವ ಅರ್ಥಪೂರ್ಣವಾಗಿ ಆಚರಿಸಿ ಎಂದು ಮುಖ್ಯ ಗುರುಗಳಿಗೆ ಸಲಹೆ ನೀಡಿದರು. ಅಕ್ಷರ ದಾಸೋಹ ಯೋಜನೆಯ ಸಹಾಯಕ ನಿರ್ದೇಶಕ ಮಹಾವೀರ ಜಮಖಂಡಿ ಮಾತನಾಡಿ, ಸರ್ಕಾರಿ ಶಾಲೆಯಲ್ಲಿ ಮಕ್ಕಳ ಅಪೌಷ್ಟಿಕತೆಯನ್ನು ಹೋಗಲಾಡಿಸಲು ಬಿಸಿಊಟ ಹಾಲು, ಮೊಟ್ಟೆ ಬಾಳೆಹಣ್ಣು ಹಾಗೂ ರಾಗಿ ನೀಡಲಾಗುತ್ತಿದ್ದು ಪಾಲಕರಿಗೆ ಸರ್ಕಾರದ ಯೋಜನೆ ಬಗ್ಗೆ ತಿಳಿಸಿ ಹೇಳಬೇಕು ಸರ್ಕಾರಿ ಶಾಲೆಗಳು ಮಕ್ಕಳ ಕಲಿಕೆಗೆ ತುಂಬಾ ಪ್ರೋತ್ಸಾಹ ನೀಡುತ್ತಿವೆ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲು ಮಾಡುವ ಮುಖಾಂತರ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಎಪಿಎಫ್ ನ ಕಾರ್ಯಕ್ರಮದ ವ್ಯವಸ್ಥಾಪಕ ಸಿದ್ರಾಮ ತೆ–ಙಂಟೆ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ವಾರದಲ್ಲಿ 4 ದಿನ ನಮ್ಮ ಫೌಂಡೇಶನ್ ವತಿಯಿಂದ ಮಕ್ಕಳಿಗೆ ಮೊಟ್ಟೆ ನೀಡಲಾಗುತ್ತಿದ್ದು ಜೊತೆಗೆ 1ನೇ ತರಗತಿಯಿಂದ 10ನೇ ತರಗತಿ ವರೆಗೆ ಸರ್ಕಾರಿ ಶಾಲೆಯಲ್ಲಿ ಅಭ್ಯಾಸ ಮಾಡಿಸಿ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿನಿಯರಿಗೆ 3000 ಶಿಷ್ಯವೇತನ ನೀಡಲಾಗುತ್ತಿದೆ ಎಂದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲುಕಾಧ್ಯಕ್ಷ ರಾಜಪ್ಪ ಜಮಾದರ್ ಮಾತನಾಡಿ, ಶಿಕ್ಷಣದಿಂದಲೇ ಸದೃಢ ಸಮಾಜ ನಿರ್ಮಿಸಲು ಸಾಧ್ಯ. ಆದ್ದರಿಂದ ಎಲ್ಲ ಮಕ್ಕಳಿಗೂ ಶಿಕ್ಷಣ ಪಡೆಯಲು ಯಾವುದೇ ತೊಂದರೆಯಾಗದಂತೆ ಕ್ಷೇತ್ರದಲ್ಲಿ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿ ಪಡಿಸುತ್ತಿದ್ದು, ಕಲಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ ಪೋಷಕರು ತಮ್ಮ ಮಕ್ಕಳಿಗೆ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಮಾಡಿಸಬೇಕು ಎಂದು ತಿಳಿಸಿದರು. ಶಾಲೆಯ ಮುಖ್ಯ ಶಿಕ್ಷಕಿ ಸುನೀತಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಸರ್ಕಾರಿ ನೌಕರರು ಸಂಘದ ತಾಲುಕಾಧ್ಯಕ್ಷ ರಾಜಶೇಖರ ಉಪ್ಪಿನ, ಸಾವಿತ್ರಿ ಬಾಯಿ ಫುಲೇ ಶಿಕ್ಷಕಿಯರ ಸಂಘದ ತಾಲುಕಾಧ್ಯಕ್ಷೆ ಪ್ರೇಮಿಳಾ ರೆಡ್ಡಿ, ಅಕ್ಷರ ದಾಸೋಹ ಯೋಜನೆಯ ಪ್ರಥಮ ದರ್ಜೆ ಸಹಾಯಕಿ ಸಿಂಧೋಜಾ, ಪ್ರಕಾಶ, ಸಿಆರ್ ಪಿ ನಾಜ್ಮಿನ್ ಸುಲ್ತಾನಾ, ಆರ್. ಎಸ್. ಪಾಟೀಲ್, ಸಂಜೀವನ ಭೋಸ್ಲೆ, ರಮೇಶ ಸಲಗರ್, ಸಂಗೀತಾ, ತನುಜಾ ಅಣದೂರೆ ಸೇರಿದಂತೆ ವಿವಿಧ ಶಾಲೆಯ ಮುಖ್ಯ ಶಿಕ್ಷಕರು, ಪಾಲಕರು ಉಪಸ್ಥಿತರಿದ್ದರು.

PAPER PUBLICATION
IN THE COURT OF THE II ADDL. SR. CIVIL JUDGE AT BIDAR
MVC NO. 53/2024.

Saleha and others .....Claimants
**Versus**
Vishwajeeta and others .....Respondents
**Sub: Claim petition U/s 166 of MV Act.**
**NOTICE TO:**
**Respondent No.2:**

Tulsiram s/o Sriranga, age about 51 years occupation: business R/o H.No.8-1180, near Gunj, Bambu Bazar, Basaveshwar Nagar, Kalaburagi, Karnataka state.

Whereas the above named claimants, have filed the claim petition U/s 166 of M.V. Act against the respondents for grant of compensation on account of death of the deceased in the road accident and this Honble court has issued the notices on several times to the respondent No.2 through the court and also through Regd. Post, which were got returned un-served, which shows that you are willfully and deliberately avoiding the service of notice.

Therefore you are hereby directed to appear before this court on 11/06/25 at 11.00 am, either in person or through your pleader duly instructed to answer the claim of claimant, failing which the claim petition will be heard and decided in you absence, in accordance with law.

Given under my hand and the seal of the court, this the 15 Day of 15 Day of May 2025.

**// By order of the court //**
**Chief Ministerial Officer**
**Prl. Sr. civil Judge at Bidar.**

## ಕಸಾಪ ನೂತನ ಪದಾಧಿಕಾರಿಗಳ ನೇಮಕ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿಗೆ ನೂತನ ಪದಾಧಿಕಾರಿಗಳ ನೇಮಕ ಮಾಡಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ಅನೀಲಕುಮಾರ ಸಿಂಧೆ ತಿಳಿಸಿದ್ದಾರೆ. ಗೌರವಾಧ್ಯಕ್ಷರಾಗಿ ಮಹಾರುದ್ರಪ್ಪಾ ಅಣದೂರೆ ಉಪಾಧ್ಯಕ್ಷರಾಗಿ ರೇವಶೆಟ್ಟಿ ತಂಗಾ, ಜಗನಾಥ ಗಾದಾ, ಗುಂಡಪ್ಪ ಕೋರಿ, ಮಹಮ್ಮದ್ ಅಸ್ಲಾಂಮಿಯ, ಸಂಜೀವನಭೋಸ್ಲೆ, ಗೌರವ ಕಾರ್ಯದರ್ಶಿಯಾಗಿ ಡಾ. ಶಾಂತಕುಮಾರ ಪಾಟೀಲ್, ರಾಮಕೃಷ್ಣ ಕೋಶಾಧ್ಯಕ್ಷ ಗುರುರಾಜ್ ಪಾಟೀಲ್, ಸಂಘಟನಾ ಕಾರ್ಯದರ್ಶಿಯಾಗಿ ಸುದರ್ಶನ ವಿಶ್ವಕರ್ಮ, ಜಗದೀಶ ಬಡಗೇರ್, ಚಂದ್ರಕಾಂತ, ಬಾಲಾಜಿ, ಸಂಚಾಲಕರಾಗಿ ಸಂತೋಷಕುಮಾರ ತಾಂಡೂರ, ಮಹಿಳಾ ಪ್ರತಿನಿಧಿಗಳಾಗಿ ಮೇರಿ ಮಾಗ್ರೇಟ, ಸಂಗೀತಾ ಪಾಟೀಲ್, ಭಾರತಿ ಪಾಟೀಲ್, ಪರಿಶಿಷ್ಟಜಾತಿ ಪ್ರತಿನಿಧಿಗಳಾಗಿ ಶಿವಕುಮಾರ ಶೇಹರವಾಲೆ, ಬಜರಂಗ, ಪಪಂ ಪ್ರತಿನಿಧಿಗಯಾಗಿ ಪಂಡಿತಕಲ್ಯಾಣಿ, ಹಿಂದುಳಿದ ವರ್ಗಗಳ ಪ್ರತಿನಿಧಿ ಪ್ರಕಾಶ ಡಾಂಗೆ, ಅಲ್ಪಸಂಖ್ಯಾತ ಪ್ರತಿನಿಧಿ ಹಸನ, ಸಂಘ ಸಂಸ್ಥೆಗಳ ಪ್ರತಿನಿಧಿಯಾಗಿ ಶಂಕರ ಭಯ್ಯಾ, ಮಲ್ಲಿಕಾರ್ಜುನಪಾಟೀಲ್, ರಮೇಶ ಪಾರಾ, ಸುರೇಶ ಕುಂಬಾರ, ಆಕಾಶ ಗುತ್ತೆದಾರ, ಬಸವರಾಜ ಡಂಬಳ, ರಂಗಾರೆಡ್ಡಿ ಗುಂಡುರೆಡ್ಡಿ, ಸಚಿನ್ ಮಠಪತಿ, ಗಡಿನಾಡು ಪ್ರತಿನಿಧಿ ಮುರಳಿಧರ ನಾಯಕ, ಮಾಧ್ಯಮ ಪ್ರತಿನಿಧಿ ನವೀನ ಗಂಜಿ, ಆರೋಗ್ಯ ಪ್ರತಿನಿಧಿ ಡಾ. ವಿಜಯ ಹಿರಾಸ್ಕರ್, ಕಾರ್ಯಕಾರಣಿ ಸದಸ್ಯರಾಗಿ ರಾಜಕುಮಾರ ಬೇಲೂರೆ, ಆರ್ ಎಸ್ ಪಾಟೀಲ, ಡಾ. ಜಯಕುಮಾರ ಸಿಂಧೆ, ವಿಜಯಕುಮಾರ ಬೊಮ್ಮಣಿ, ರಾಜಶೇಖ ಉಪ್ಪಿನ, ಅಶೋಕಕುಮಾರ್ ಮಹೇಂದ್ರಕರ, ರಾಜಪ್ಪಾ ಜಮಾದಾರ, ಪ್ರೇಮಿಳಾ ರೆಡ್ಡಿ, ನಗರ ಘಟಕ ಅಧ್ಯಕ್ಷರಾಗಿ ರಾಜಕುಮಾರ ಆರ್. ಹಡಪದ, ಮಹಿಳಾ ಘಟಕ ಅಧ್ಯ–ಕ್ಷೆಯಾಗಿ ಸುವರ್ಣ, ಯುವ ಘಟಕ ಅಧ್ಯಕ್ಷರಾಗಿ ಲಕ್ಷ್ಮಿಕಾಂತ, ಕೊಡಂಬಲ ವಲಯ ಅಧ್ಯಕ್ಷರಾಗಿ ರಮೇಶ ಪಂಚಾಳ, ನಿರ್ಣಾ ವಲಯ ಅಧ್ಯಕ್ಷರಾಗಿ ದೀಲಿಪ ಪಸಾರೆ ಅವರನ್ನು ನೇಮಕ ಮಾಡಲಾಗಿದೆ. ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇವಿ ಕಾಲೋನಿಯಲ್ಲಿ ಸಾಧು ಸಂಗಮ ಮೇಳ ಸಂಪನ್ನ

## ಶ್ರೀ ಶಬರಿಮಾತಾ ಆಸ್ತಾನ ಉದ್ಘಾಟನೆ ನೆರವೇರಿಸಿದ ಸಾಧು–ಸಂತರು



ಬೀದರ. ಮೇ. 19 :– ಧರ್ಮರಕ್ಷಣೆಗಾಗಿ ಮಕ್ಕಳನ್ನು ಸನ್ಮಾರ್ಗದಲ್ಲಿ ನಡೆಸುವ ಅವಶ್ಯಕತೆಯಿದೆ. ಕೆಟ್ಟ ಸ್ನೇಹಿತ ದುರ್ಮಾರ್ಗ ಹೊಂದಿರುವ ಸ್ಥಳಕ್ಕೆ ಕರೆದುಕೊಂಡು ಹೋಗುತ್ತಾನೆ. ಒಳ್ಳೆಯ ಸ್ನೇಹಿತ ಧಾರ್ಮಿಕ ಕ್ಷೇತ್ರಗಳಿಗೆ ಕೊಂಡೊಯ್ಯುತ್ತಾನೆ. ಅಂಬರೀಶ ಮತ್ತು ಅರವಿಂದ ಶೀಲವಂತ ಅವರು ಸನ್ಮಾರ್ಗದಲ್ಲಿ ನಡೆದು ಆಧ್ಯಾತ್ಮಿಕ ಮತ್ತು ಧಾರ್ಮಿಕ ಕಾರ್ಯಗಳನ್ನು ಮಾಡುತ್ತಿರುವುದು ಧರ್ಮರಕ್ಷಣೆಯ ಕಾರ್ಯವಾಗಿದೆ ಎಂದು ಉಜ್ಜಯಿನಿಯ ಶ್ರೀ ಅಘೋರ್ ಪೀಠದೇಶ್ವರ ಅಚಲನಾಥ ಮಹಾರಾಜ ನುಡಿದರು.

ನಗರದ ದೇವಿ ಕಾಲೋನಿಯಲ್ಲಿ ದೇವಿ ಗ್ರೂಪ್ ಮತ್ತು ಶ್ರೀ ಶಬರಿ ಮಾತಾ ಭಕ್ತಮಂಡಳಿ ಬೀದರ ವತಿಯಿಂದ ಶ್ರೀ ಸದ್ಗುರು ಶಬರಿ ಮಾತಾ ಜೀವಂತ ಸಮಾಧಿ 25ನೇ ಬ್ರಹ್ಮೈಕ್ಯ ಕಾರ್ಯಕ್ರಮದ ಪ್ರಯುಕ್ತ ಸಾಧು ಸಂಗಮ ಮೇಳ ಮತ್ತು ಶ್ರೀ ಶಬರಿ ಮಾತಾ ಆಸ್ತಾನ ಉದ್ಘಾಟನಾ ಸಮಾರಂಭ ಹಾಗೂ ಸಾಧು ಸಂತರ ಮೆರವಣಿಗೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ರಾಗಾಪುರ ಸರಸ್ವತಿ ಮಂದಿರದ ಶ್ರೀ ಕಾಶಿನಾಥ ಬಾಬಾ ಮಾತನಾಡಿ ನಗರಗಳಲ್ಲಿ ಯುವಕರಿಂದ ಆಧ್ಯಾತ್ಮಿಕ ಮತ್ತು ಧಾರ್ಮಿಕ ಕಾರ್ಯಗಳಾದಾಗ ದುರ್ಗುಣ ದುಶ್ಚಟಗಳಿಂದ ಯುವಕರು ಮುಕ್ತತೆ ಹೊಂದಿ ಸನ್ಮಾರ್ಗದೆಡೆಗೆ ಸಾಗುತ್ತಾರೆ ಎಂದರು. ಕಾರ್ಯಕ್ರಮದ ಆಯೋಜಕರಾದ ಅಂಬರೀಶ ಶೀಲವಂತ ಮತ್ತು ಅರವಿಂದ ಶೀಲವಂತ ಮಾತನಾಡಿ ಇಂದಿನ ಕಾಲದಲ್ಲಿ ಯುವಕರು ಯಾವುದೇ ತತ್ವದಡಿಯಲ್ಲಿ ಸಾಗಲಿ. ಅವರು ಪ್ರತಿದಿನ ದೇವರ ಧ್ಯಾನ, ಶ್ಲೋಕ, ವಚನ ಮತ್ತು ಮಂತ್ರಪಠಣ ಮಾಡಿದರೆ ಅವರ ಹೃದಯದಲ್ಲಿ ಶಾಂತಿ, ಸೌಹಾರ್ದತೆ ಮತ್ತು ತಾಳ್ಮೆ ಮೂಡುತ್ತದೆ. ಅವರ ಬದುಕು ಹಸನಾಗುವುದರ ಜೊತೆಗೆ ಸಮಾಜ ದೇಶದಲ್ಲಿ ಸಮೃದ್ಧಿ ಮತ್ತು ಶಾಂತಿ ನೆಲೆಸುತ್ತದೆ. ಈ ಕಾರಣಕ್ಕಾಗಿ ಯುವಕಯುವತಿಯರನ್ನು ಧರ್ಮ ಮಾರ್ಗದ ಕಡೆಗೆ ಕರೆತರಲು ನಾವು ಶ್ರೀ ಶಬರಿಮಾತಾ ಆಸ್ತಾನ ಸ್ಥಾಪಿಸಿದ್ದೇವೆ. ಜನರು ದರ್ಶನ ಪಡೆದು ಪುನೀತರಾಗಬೇಕೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಶಂಕರೆಪ್ಪ ಮಾತಂ, ಪೂಜ್ಯ ಹವಾ ಮಲ್ಲಿನಾಥ ಮಹಾರಾಜರು, ರೋಶನ್ ಮಹಾರಾಜ್ ಹರಿಯಾಣ, ವೀರೇಶ್ವರ ಶಿವಾಚಾರ್ಯರು ಧನಶ್ರೀ, ವಿಠಲಪುರದ ಶ್ರೀ ಶಾಂತಿ ಬಾಬಾ, ವಿಜಯವಾಡದ ವಿಜಯಲಕ್ಷ್ಮಿ ಮಠ, ಸಿದ್ದೇಶ್ವರಂನ ನರಸಿಂಗ ಸ್ವಾಮಿ, ಸಂತ ಭಾನುದಾಸ್ ಮಹಾರಾಜರು, ಮಹೇಶ ಸ್ವಾಮಿ ರಾಜಪುಡಿ, ವೆಂಕಟ ಸ್ವಾಮೀಜಿ, ಅಘೋರಿ ಆನಂದ ಮಹಾರಾಜರು, ಮಲ್ಲಯ್ಯ ಸ್ವಾಮಿ, ಪೂಜ್ಯ ವಿಜಯನಾಗಲಿಂಗೇಶ್ವರ ಶ್ರೀಗಳು ಸೇರಿದಂತೆ ಹಲವು ಸಾಧು ಸಂತರು ಉಪಸ್ಥಿತರಿದ್ದರು. ಇದೇ ವೇಳೆ ಅಂಬರೀಶ ಮತ್ತು ಅರವಿಂದ ಶೀಲವಂತ ಅವರ ಸಂಗೀತ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದಲ್ಲಿ ನಗರದ ಸಾವಿರಾರು ಭಕ್ತಾದಿಗಳು ಪಾಲ್ಗೊಂಡು ಮಹಾಪ್ರಸಾದ ಸೇವಿಸಿ ಧನ್ಯರಾದರು.

## ಒಳ ಮೀಸಲು: ಸಮೀಕ್ಷಾ ಅವಧಿ ವಿಸ್ತರಣೆ



ರಾಯಚೂರು ಮೇ.19 : ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಮತ್ತು ಸರ್ಕಾರಿ ಸೇವೆಗಳಲ್ಲಿ ಪರಿಶಿಷ್ಟಜಾತಿಯ ಪಟ್ಟಿಯಲ್ಲಿರುವ 101 ಜಾತಿಗಳಿಗೆ ಸೇರಿದವರ ಪ್ರಾತಿನಿಧ್ಯತೆ ಕುರಿತು ಎಂಪಿರಿಕಲ್ ಡಾಟಾ (Empirical Data) ಪಡೆದು ಪರಿಶಿಷ್ಟಜಾತಿಯಲ್ಲಿ ಒಳ ಮೀಸಲಾತಿ (ಉಪವರ್ಗೀಕರಣ) ಕುರಿತಾಗಿ ವರದಿ ಸಲ್ಲಿಸಲು ಮಾನ್ಯ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಡಾ. ಹೆಚ್.ಎನ್. ನಾಗಮೋಹನ್ ದಾಸ್ ಅವರ ಅಧ್ಯಕ್ಷತೆಯಲ್ಲಿ ಏಕ ಸದಸ್ಯ ಆಯೋಗವನ್ನು ರಚಿಸಲಾಗಿರುತ್ತದೆ.

ದಿನಾಂಕ 27–03–2025 ರಂದು ಈ ಆಯೋಗವು ಸಲ್ಲಿಸಿದ ಮಧ್ಯಂತರ ವರದಿಯ ಆಧಾರದ ಮೇರೆಗೆ ವೈಜ್ಞಾನಿಕವಾದ ದತ್ತಾಂಶವನ್ನು (Empirical Data) ಸಂಗ್ರಹಿಸಲು 2025ರ ಮೇ 05 ರಿಂದ ಕರ್ನಾಟಕ ಸರ್ಕಾರದಿಂದ ನಡೆಸಲಾಗುತ್ತಿರುವ ಸಮೀಕ್ಷಾ ಅವಧಿಯನ್ನು ವಿಸ್ತರಿಸಲಾಗಿದೆ.

ಮನೆ ಮನೆ ಭೇಟಿ ನೀಡಿ ನಡೆಸುವ ಸಮೀಕ್ಷೆ ದಿನಾಂಕನ್ನು ಮೇ 25ರವರೆಗೆ ವಿಸ್ತರಿಸಲಾಗಿದೆ. ವಿಶೇಷ ಶಿಬಿರ (ಸಮೀಕ್ಷಾ ಬ್ಲಾಕ್ ವ್ಯಾಪ್ತಿಯಲ್ಲಿ) 3 ದಿನಗಳ ಕಾಲ ದಿನಾಂಕನ್ನು ಮೇ 26 ರಿಂದ ಮೇ 28ರವರೆಗೆ ಮರು ನಿಗದಿಪಡಿಸಲಾಗಿದೆ. ಆನ್‌ಲೈನ್ ಮೂಲಕ ಸ್ವಯಂ ಘೋಷಣೆಯನ್ನು ಮೇ 19 ರಿಂದ ಮೇ 28ರವರೆಗೆ ನಿಗದಿಪಡಿಸಲಾಗಿದೆ. ಆದಕಾರಣ ಸಾರ್ವಜನಿಕರು ಈ ಸಮೀಕ್ಷಾ ಅಭಿಯಾನದಲ್ಲಿ ಭಾಗವಹಿಸಿ, ಸಮೀಕ್ಷೆಗೆ ಸಹಕರಿಸಲು ಮತ್ತು ಗಣತಿದಾರರಿಗೆ ಅಗತ್ಯ ಮಾಹಿತಿ ನೀಡಲು ಕೋರಿದೆ ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ನುಡಿಮುತ್ತು**

ಯಾರ ಬಗ್ಗೆ ಆಗಲಿ ತಪ್ಪು ತಿಳಿಯುವ ಮುನ್ನ ಒಮ್ಮೆ ಅವರ ಪರಿಸ್ಥಿತಿ ಅರಿಯಲು ಪ್ರಯತ್ನಿಸಿ

ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME - 13 ಸಂಪುಟ-13 | ISSUE - 94 ಸಂಚಿಕೆ- 94 | PAGE- 8 ಪುಟ-8 | ಮಂಗಳವಾರ 20.05.2025 | RS.2/- ಬೆಲೆ 2/-

# ವೈಫಲ್ಯ ಮರೆಮಾಚಲು ಸಾಧನಾ ಸಮಾವೇಶ



ಮೈಸೂರು:ಮೇ.19: ಸಿಎಂ ಸಿದ್ದರಾಮಯ್ಯನೇತೃತ್ವದ ಕಾಂಗ್ರೆಸ್ ಸರ್ಕಾರ 2 ವರ್ಷಗಳನ್ನುಪೂರೈಸಿಸಿದ ಹಿನ್ನಲೆಯಲ್ಲಿ ಕಾಂಗ್ರೆಸ್ ಸಾಧನಾ ಸಮಾವೇಶವನ್ನುಹಮ್ಮಿಕೊಂಡಿದ್ದು, ಇದೇ ಸಮಾವೇಶದ ವಿರುದ್ಧ ವಿಧಾನಪರಿಷತ್ ಸದಸ್ಯಎಚ್.ವಿಶ್ವನಾಥ್ ಟೀಕಾ ಪ್ರಹಾರವನ್ನೇ ನಡೆಸಿದ್ದಾರೆ.

ಮೈಸೂರಿನಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ರಾಜ್ಯ ಸರ್ಕಾರವು ತನ್ನ ವೈಫಲ್ಯ ಹಾಗೂ ಭ್ರಷ್ಟಾಚಾರದ ಆರೋಪ ಮುಚ್ಚಿಹಾಕಲು ಸರ್ಕಾರದ ದುಡ್ಡಿನಲ್ಲಿ ಸಾಧನಾ ಸಮಾವೇಶ ಮಾಡುತ್ತಿದೆ. ಯಾವ ಸಾಧನೆ ಮಾಡಿದ್ದಕ್ಕಾಗಿ ಸಮಾವೇಶ ಹಮ್ಮಿಕೊಳ್ಳುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಲಿಕಾಪ್ಟರ್‌ನಲ್ಲಿ ಓಡಾಡಿರುವುದೇ ಸಾಧನೆಯೇ? ಎಂದು ಪ್ರಶ್ನಿಸಿದರು.

ಇದೇ ವೇಳೆ ಆಪರೇಷನ್ ಸಿಂಧೂರ ಕುರಿತು ಮಾತನಾಡಿದ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ ದಿನಕ್ಕೊಂದು ಹೇಳಿಕೆ ನೀಡುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ಎಲ್ಲರೂ ಒಗ್ಗಟ್ಟಾಗಿರಬೇಕು. ಪಕ್ಷಕ್ಕಿಂತ ದೇಶ ದೊಡ್ಡದು, ದೇಶ ಇದ್ದರೆ ನಾವು ಎಂಬುದನ್ನುಅರಿಯಬೇಕು' ಎಂದು ಹೇಳಿದರು.

ಅಭಿವೃದ್ಧಿಗೆ ಏನು ಅನುದಾನ ನೀಡಿದ್ದಾರೆ?

'ಸಾಧನಾ ಸಮಾವೇಶದಲ್ಲಿ ಮುಖ್ಯಮಂತ್ರಿಗಳು ತಮ್ಮ ತವರು ಜಿಲ್ಲೆಯ ಅಭಿವೃದ್ಧಿಗೆ ಏನು ಅನುದಾನ ನೀಡಿದ್ದಾರೆ? ಹೆಲಿಕಾಪ್ಟರ್‌ನಲ್ಲಿ ಓಡಾಡಲು ಎಷ್ಟು ಖರ್ಚು ಮಾಡಿದ್ದೀರಿ? ಮುಡಾ ಹಗರಣದಲ್ಲಿ ನಿಮ್ಮ ಕುಟುಂಬದ ಪಾತ್ರವೇನು? ನಿಮ್ಮ ಕಟು ನುಡಿಗಳಿಂದ ಎಷ್ಟು ಸರ್ಕಾರಿ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದನ್ನೂ ತಿಳಿಸಬೇಕು ಎಂದು ಕಿಡಿಕಾರಿದರು.

'ಆಸ್ತಿ ವಿವರ ಜನರ ಮುಂದಿಡಿ'

'ಮುಖ್ಯಮಂತ್ರಿಯೂ ಸೇರಿದಂತೆ ಎಲ್ಲಾ ಮಂತ್ರಿಗಳ ಆಸ್ತಿ ವಿವರವನ್ನು ಸಮಾವೇಶದಲ್ಲಿಜನರಮುಂದಿಡಬೇಕು. ಇಲ್ಲದಿದ್ದರೆ ನಾವೇ ಮೈಸೂರಿನಲ್ಲಿ ಸಮಾವೇಶಮಾಡಿ ವಿವರನೀಡುತ್ತೇವೆ. ಜಿಲ್ಲಾ ಮಂತ್ರಿ ಗುತ್ತಿಗೆದಾರರಿಗೆ ಹಾಗೂ ಸರ್ಕಾರಿ ಅಧಿಕಾರಿಗಳ ವರ್ಗಾವಣೆಗೆ ಸೀಮಿತವಾಗಿದ್ದಾರೆ. ಅಭಿವೃದ್ಧಿಯ ಬಗ್ಗೆ ಯೋಚನೆಯನ್ನೂ ಮಾಡುತ್ತಿಲ್ಲ. ಇದು ಜನರಿಗೆ ಟೋಪಿ ಹಾಕುವ ಪ್ರಚಾರದ ಸರ್ಕಾರ ಎಂದು ವಿಶ್ವನಾಥ್ ಕುಟುಕಿದರು.

'ಬಿಜೆಪಿಗೂ ಕಾಂಗ್ರೆಸ್ ಗೂ ವ್ಯತ್ಯಾಸವೇ ಇಲ್ಲ'

'ಬಿಜೆಪಿ ಸರ್ಕಾರದ ಅವಧಿಯಲ್ಲಿ ಯಡಿಯೂರಪ್ಪಜಿಂದಾಲ್ ಕಂಪೆನಿಗೆ ಭೂಮಿ ನೀಡುವುದನ್ನುನಾವು ತಡೆದೆವು. ಆದರೆ ಸಿದ್ದರಾಮಯ್ಯ ಅಧಿಕಾರಕ್ಕೆ ಬಂದ ಕೂಡಲೇ ಅನುಮತಿ ನೀಡಿದರು. ಹೀಗಾಗಿ ಬಿಜೆಪಿಗೂ ಕಾಂಗ್ರೆಸ್‌ಗೂ ವ್ಯತ್ಯಾಸವಿಲ್ಲದಂತಾಗಿದೆ. ಕಾಂಗ್ರೆಸ್ ಜನರ ವಿಶ್ವಾಸ ಕಳೆದುಕೊಂಡಿದೆ. ಬಿಜೆಪಿಯು ಸುಳ್ಳು ಹೇಳಿ ಅಧಿಕಾರ ಕಳೆದುಕೊಂಡಿತು. ಈಗಿನ ಸರ್ಕಾರಕ್ಕೂ ಅದೇ ಪರಿಸ್ಥಿತಿ ಬರುತ್ತದೆ. ಗ್ರೇಟರ್ ಬೆಂಗಳೂರಿನಿಂದ ಸೈಟ್‌ಗಳ ಬೆಲೆ ಮೂರುಪಟ್ಟು ಹೆಚ್ಚಾಗುತ್ತದೆ. ಮಂತ್ರಿಗಳು ರಿಯಲ್ ಎಸ್ಟೇಟ್‌ನಡಿ ಸಿಲುಕಿದ್ದಾರೆ. ಈ ಬಗ್ಗೆ ಸರಿದಾರಿಯಲ್ಲಿ ಹೋಗಿ ಎಂದು ತಿಳಿಸಿದರೆ ಮಾನಹಾನಿ ಪ್ರಕರಣ ದಾಖಲಿಸುತ್ತಾರೆ. ಈ ಸರ್ಕಾರಕ್ಕೆ ಟೀಕೆ ಎದುರಿಸುವ ಸೌಜನ್ಯ ಹಾಗೂ ಧೈರ್ಯ ಇಲ್ಲ ಎಂದು ಕಿಡಿಕಾರಿದರು.

ಗ್ಯಾರಂಟಿ ಯೋಜನೆ ಕಾಂಗ್ರೆಸ್ ಸರ್ಕಾರದ ಹುಚ್ಚು ನಿರ್ಧಾರ

ಗ್ಯಾರಂಟಿಯಿಂದ ಸರ್ಕಾರಕ್ಕೆ ಉತ್ತಮ ಹೆಸರು ಬಂದಿದೆ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆಗೆ ಪ್ರತಿಕ್ರಿಯಿಸಿ, 'ಗ್ಯಾರಂಟಿಯು ಸರ್ಕಾರದ ಹುಚ್ಚು ನಿರ್ಧಾರ. ರಾಜ್ಯದಲ್ಲಿ ನೀರಾವರಿ ಕೆಲಸ ಕುಂಟುತ್ತಿದೆ. ಉದ್ಯೋಗ ಸೃಷ್ಟಿಸುತ್ತಿದ್ದ ಸಕ್ಕರೆ ಕಾರ್ಖಾನೆಗಳು ಮುಚ್ಚುತ್ತಿವೆ. ಇದರ ನಡುವೆ ಯಾವುದೇ ಮಾನದಂಡವಿಲ್ಲದೆ ಉಚಿತ ಯೋಜನೆಗಳನ್ನು ಜಾರಿ ಮಾಡಿ ಜನರ ಹಣ ಪೋಲು ಮಾಡಲಾಗುತ್ತಿದೆ. ಬಡವರ ಆರ್ಥಿಕ ಚಟುವಟಿಕೆಗೆ ವಿರೋಧ ಮಾಡುವುದಿಲ್ಲ. ಆದರೆ ಉಚಿತವಾಗಿ ನೀಡಿದಾಗ ಅದರ ಮೌಲ್ಯ ಅರಿವಾಗುವುದಿಲ್ಲ. ಸಿದ್ದರಾಮಯ್ಯ ಎರಡು ಬಾರಿ ಮುಖ್ಯಮಂತ್ರಿ ಆಗಿದ್ದಾರಷ್ಟೇ, ಅವರ ಆಡಳಿತದಲ್ಲಿ ಗಂಭಿರತೆಯೇ ಇಲ್ಲ' ಎಂದು ಟೀಕಿಸಿದರು.

# ಭಾರತ ನಿರಾಶ್ರಿತರಿಗೆ ಆಶ್ರಯ ನೀಡುವ ಧರ್ಮಶಾಲೆಯಲ್ಲ : ಸುಪ್ರೀಂ

ಮಲ್ಲಮ್ಮ ನುಡಿ ವಾರ್ತೆ ನವದೆಹಲಿ:ಮೇ.19: ಭಾರತವು ಪ್ರಪಂಚದಾದ್ಯಂತದ ನಿರಾಶ್ರಿತರಿಗೆ ಆಶ್ರಯ ನೀಡುವ ಧರ್ಮಶಾಲೆಯಲ್ಲ ಎಂದು ಹೇಳುವ ಮೂಲಕ ಸುಪ್ರೀಂ ಕೋರ್ಟ್ ಶ್ರೀಲಂಕಾದ ತಮಿಳು ಪ್ರಜೆಯೊಬ್ಬರ ಬಂಧನದಲ್ಲಿ ಮಧ್ಯಪ್ರವೇಶಿಸಲು ನಿರಾಕರಿಸಿದೆ.

ಯುಎಪಿಎ ಪ್ರಕರಣದಲ್ಲಿ ವಿಧಿಸಲಾದ 7 ವರ್ಷಗಳ ಶಿಕ್ಷೆ ಮುಗಿದ ತಕ್ಷಣ ಅರ್ಜಿದಾರ ಶ್ರೀಲಂಕಾ ಪ್ರಜೆಯು ಭಾರತವನ್ನು ತೊರೆಯಬೇಕು ಎಂದು ನಿರ್ದೇಶಿಸಿದ ಮದ್ರಾಸ್ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಯನ್ನುಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಮೂರ್ತಿ ದೀಪಂಕರ್ ದತ್ತ ಮತ್ತು ನ್ಯಾಯಮೂರ್ತಿ

(2ನೇ ಪುಟ ನೋಡಿ)

# ಬೀದರ್ ಜಿಲ್ಲೆಗೆ ಶೇ 65ರಷ್ಟು ಪಠ್ಯ ಪುಸ್ತಕ ಪೂರೈಕೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮೇ. 19 : ರಾಜ್ಯ ಸರ್ಕಾರವು 2025-26ನೇ ಶೈಕ್ಷಣಿಕ ಸಾಲಿನಲ್ಲಿ ಮೇ 29ರಿಂದ ಶಾಲೆಗಳನ್ನು ಆರಂಭಿಸಲು ನಿರ್ಧರಿಸಿದ್ದು, ಅದಕ್ಕೆ ಪೂರಕವಾಗಿ ಭರದ ಸಿದ್ಧತೆಗಳು ಸಹ ಶುರುವಾಗಿದೆ.

ಬೀದರ್ ಜಿಲ್ಲೆಗೆ ಈಗಾಗಲೇ ಶೇ 65ರಷ್ಟು ಪಠ್ಯ ಪುಸ್ತಕಗಳು ಬಂದಿವೆ. ಇದರಲ್ಲಿ ಒಂದರಿಂದ ಹತ್ತನೇ ತರಗತಿಯ ಪಠ್ಯ ಪುಸ್ತಕಗಳು ಸೇರಿವೆ.

ಎರಡ್ಮೂರು ದಿನಗಳಲ್ಲಿ ಮಿಕ್ಕುಳಿದ ಶೇ 35ರಷ್ಟು ಕೂಡ ಬರಲಿದೆ.

ಮೇ 29ರಂದು ಶಾಲಾ ಪ್ರಾರಂಭದ ಉತ್ಸವ ಆಚರಿಸುತ್ತಿರುವ ಹಿನ್ನೆಲೆಯಲ್ಲಿ ಅದಕ್ಕೂ ಮುನ್ನವೇ ಎಲ್ಲ ಶಾಲೆಗಳಿಗೆ ಪಠ್ಯ ಪುಸ್ತಕಗಳನ್ನು ತಲುಪಿಸಲು ನಿರ್ಧರಿಸಲಾಗಿದೆ. ಮೇ 25 ಅಥವಾ ಮೇ 26ರಿಂದ ಜಿಲ್ಲೆಯ ಎಲ್ಲ ಶಾಲೆಗಳಿಗೆ ಪಠ್ಯ ಪುಸ್ತಕಗಳನ್ನು ತಲುಪಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಈ ಜವಾಬ್ದಾರಿ ವಹಿಸಲಾಗಿದ್ದು, ಮೇ 29ರೊಳಗೆ ಎಲ್ಲ ಪ್ರಕ್ರಿಯೆಯನ್ನು ಕಡ್ಡಾಯವಾಗಿ ಮುಗಿಸಬೇಕೆಂದು ನಿರ್ದೇಶನ ನೀಡಲಾಗಿದೆ. ಈಗಾಗಲೇ ಶಾಲೆಗಳ ರೂಟ್ ಮಾಡಿಕೊಂಡಿದ್ದು, ವಾಹನಗಳ ಮೂಲಕ ತಲುಪಿಸುವ ಕಾರ್ಯ ಮಾಡಲಾಗುತ್ತದೆ.

ಖಾಸಗಿಯವರಿಗೆ ಶುಲ್ಕ:

ಪಠ್ಯ ಪುಸ್ತಕಗಳನ್ನು ಸರ್ಕಾರದ ಎಲ್ಲ ಶಾಲೆಗಳಿಗೆ ತಲುಪಿಸಲಾಗುತ್ತದೆ. ಆಸಕ್ತ ಖಾಸಗಿ ಸಂಸ್ಥೆಗಳವರು ನಿಗದಿತ ಶುಲ್ಕ ಭರಿಸಿ, ಬೇಡಿಕೆ ಸಲ್ಲಿಸಿದರೆ ಅವರಿಗೂ ಪೂರೈಸಲಾಗುತ್ತದೆ. ಆಯಾ ಬ್ಲಾಕ್ ಹಂತದ ನೋಡಲ್ ಅಧಿಕಾರಿಗಳ ಬಳಿ ಖಾಸಗಿ ಶಾಲೆಗಳವರು ಖರೀದಿಸಬಹುದು. ರಾಜ್ಯ ಸರ್ಕಾರವು ಇದಕ್ಕಾಗಿ ಶುಲ್ಕ ನಿಗದಿಪಡಿಸಿದ್ದು, ಅದನ್ನು ಆನ್‌ಲೈನ್ ಭರಿಸಿ ಪಠ್ಯ ಪುಸ್ತಕಗಳನ್ನುಪಡೆಯಲು ಅನುಕೂಲ

(2ನೇ ಪುಟ ನೋಡಿ)

# ಅಮೆರಿಕ ಕದನ ವಿರಾಮಕ್ಕೆ ಮಧ್ಯಸ್ಥಿಕೆ ವಹಿಸಿಲ್ಲ: ವಿದೇಶಾಂಗ ಕಾರ್ಯದರ್ಶಿ



ಮಲ್ಲಮ್ಮನುಡಿವಾರ್ತೆ ನವದೆಹಲಿ:ಮೇ.19: ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷ ಯಾವಾಗಲೂ ಸಾಂಪ್ರದಾಯಿಕ ಕ್ಷೇತ್ರದಲ್ಲಿದೆ ಮತ್ತು ನೆರೆಯ ದೇಶದಿಂದ ಯಾವುದೇ ಪರಮಾಣು ಬೆದರಿಕೆ ಇಲ್ಲ ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರಿ ಸೋಮವಾರ ಸಂಸದೀಯ ಸಮಿತಿಗೆ ತಿಳಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಆಪರೇಷನ್? ಸಿಂಧೂರ ಮತ್ತು ಭಾರತ ಮತ್ತು ಪಾಕಿಸ್ತಾನ ನಡುವಿನ ಇತ್ತೀಚಿನ ಉದ್ವಿಗ್ನತೆಯ ಕುರಿತು ಸಂಸದೀಯ ಸ್ಥಾಯಿ ಸಮಿತಿಗೆ ವಿವರಣೆ ನೀಡಿದ ವಿಕ್ರಮ್ ಮಿಶ್ರಿ, ಸೇನಾ ಕಾರ್ಯಾಚರಣೆ ನಿಲ್ಲಿಸುವ ನಿರ್ಧಾರವನ್ನು ದ್ವಿಪಕ್ಷೀಯ ಮಟ್ಟದಲ್ಲಿ ತೆಗೆದುಕೊಳ್ಳಲಾಗಿದೆ ಎಂಬ ಸರ್ಕಾರದ ನಿಲುವನ್ನು ಪುನರುಚ್ಚರಿಸಿದರು. ಪಹಲ್ಗಾಮ್? ಉಗ್ರ ದಾಳಿಗೆ ಪ್ರತಿಯಾಗಿ ಭಾರತೀಯ ಸೇನೆ ಗಡಿಯಾಚೆಗಿನ ಭಯೋತ್ಪಾದಕ ನೆಲೆಗಳನ್ನು ಗುರಿಯಾಗಿಸಿಕೊಂಡು ಆಪರೇಷನ್ ಸಿಂಧೂರ ನಡೆಸಿತ್ತು. ಇದರ ಬಳಿಕ ಭಾರತ ಮತ್ತು ಪಾಕಿಸ್ತಾನದ ನಡುವೆ ನಾಲ್ಕು ದಿನಗಳ ಕಾಲ ಸೇನಾ ಸಂಘರ್ಷ ನಡೆಯಿತು. ತದನಂತರ, ಮೇ 10ರಂದು

(2ನೇ ಪುಟ ನೋಡಿ)

# ಖುರೇಷಿ ವಿರುದ್ಧ ಅವಹೇಳನಕಾರಿ ಹೇಳಿಕೆ : ವಿಜಯ್ ಶಾ ವಿರುದ್ಧ ಎಸ್‌ಐಟಿ ತನಿಖೆ: ಸುಪ್ರೀಂ



ನವದೆಹಲಿ:ಮೇ.19: ಆಪರೇಷನ್ ಸಿಂಧೂರದಲ್ಲಿ ಪ್ರಮುಖ ಪಾತ್ರವಹಿಸಿದ್ದ ಕರ್ನಲ್ ಖುರೇಷಿಯವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದ ಮಧ್ಯಪ್ರದೇಶದ ಸಚಿವ ವಿಜಯ್ ಶಾ ಅವರ ಕ್ಷಮೆಯಾಚನೆಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ. ಈ ಪ್ರಕರಣವನ್ನು ವಿಶೇಷ ತನಿಖಾ ತಂಡ ತನಿಖೆ ನಡೆಸಲಿ ಎಂದು ನ್ಯಾಯಮೂರ್ತಿ ಸೂರ್ಯ ಕಾಂತ್ ಅವರಿದ್ದ ಏಕ ಸದಸ್ಯ ಪೀಠ ತಿಳಿಸಿದೆ.

ವಿಜಯ್ ಶಾ ಅವರನ್ನು ತೀವ್ರವಾಗಿ ತರಾಟೆಗೆ ತೆಗೆದು- ಕೊಂಡ ನ್ಯಾಯಾಲಯ, ನೀವು ಯಾವ ರೀತಿ ಕ್ಷಮೆಯಾಚಿಸಿದ್ದೀರಿ? ಕ್ಷಮೆಯಾಚನೆಗೆ ಸ್ವಲ್ಪ ಅರ್ಥವಿದೆ. ಕೆಲವೊಮ್ಮೆ ಜನರು ವಿಚಾರಣೆಯಿಂದ ಹೊರಬರಲು ಮಾತ್ರ ಸೌಮ್ಯ ಭಾಷೆ ಬಳಸುತ್ತಾರೆ. ಅಲ್ಲದೇ ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ನಿಮ್ಮದು ಯಾವ ರೀತಿಯ ಕ್ಷಮೆಯಾಚನೆ? ನ್ಯಾಯಾಲಯ ಹೇಳಿದೆ ಎಂಬ ಕಾರಣಕ್ಕೆ ಕ್ಷಮೆ ಕೇಳಿದ್ದೀರಿ, ಇಲ್ಲಿಯವರೆಗೆ ನಿಮ್ಮ ಅಸಭ್ಯ ಹೇಳಿಕೆಗಳಿಗೆ ಪ್ರಾಮಾಣಿಕವಾಗಿ ಕ್ಷಮೆಯಾಚಿಸಲು ನಿಮ್ಮನ್ನು ಏನು ತಡೆದಿತ್ತು ಎಂದು ಪೀಠ ಛೀಮಾರಿ ಹಾಕಿತು.

ಸಚಿವರ ವಿರುದ್ಧದ ಪ್ರಕರಣವನ್ನು ತನಿಖೆ ಮಾಡಲು ಮಂಗಳವಾರ ಬೆಳಗ್ಗೆ

(2ನೇ ಪುಟ ನೋಡಿ)

# ನ್ಯಾಯಕ್ಕಾಗಿ ವಿಷ ಹಿಡಿದು ದಂಪತಿ ಪ್ರತಿಭಟನೆ




ಕಲಬುರಗಿ:ಮೇ,19:ಮಲ್ಲಯ್ಯ ಸ್ವಾಮಿ ಹಾಗು ಲಕ್ಷ್ಮೀ ದಂಪತಿ ಕೈಯಲ್ಲಿ ವಿಷದ ಬಾಟಲಿ ಹಿಡಿದು ಕಲಬುರಗಿ ನಗರ ಪೊಲೀಸ್ ಕಮಿಷನರ್ ಕಚೇರಿ ಮುಂದೆ

(2ನೇ ಪುಟ ನೋಡಿ)

# ರಾಜ್ಯದಲ್ಲಿ ಮುಂದಿನ 1 ವಾರ ಭಾರೀ ಮಳೆ

ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:ಮೇ.19: ರಾಜ್ಯದಲ್ಲಿ ಮುಂದಿನ ಒಂದು ವಾರ ಭಾರೀ ಮಳೆಯಾಗುವ ಸಾಧ್ಯತೆಯಿದ್ದು, ಬೆಂಗಳೂರಿಗೆ ಯೆಲ್ಲೋ ಅಲರ್ಟ್ ಹಾಗೂ ಕರಾವಳಿಗೆ ರೆಡ್ ಅಲರ್ಟ್ ಘೋಷಿಸಲಾಗಿದೆ.

ಬೆಂಗಳೂರಿನಲ್ಲಿ ಇನ್ನೂ ಎರಡು ದಿನ ಭಾರೀ ಮಳೆಯಾಗುವ ಸಾಧ್ಯತೆಯಿದ್ದು, ಮಂಗಳವಾರ (ಮೇ 20) ಯಲ್ಲೋ ಅಲರ್ಟ್ ಘೋಷಿಸಲಾಗಿದೆ. ಕರಾವಳಿ ಜಿಲ್ಲೆಗಳಿಗೆ ಇಂದಿನಿಂದ ಮೂರು ದಿನ ರೆಡ್ ಅಲರ್ಟ್, ನಂತರದ ನಾಲ್ಕು ದಿನ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಇನ್ನೂ ಉತ್ತರ, ದಕ್ಷಿಣ ಒಳನಾಡಿಗೆ ರೆಡ್ ಅಲರ್ಟ್ ಘೋಷಿಸಲಾಗಿದೆ.

ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಬಾಗಲಕೋಟೆ, ಬೆಳಗಾವಿ, ಧಾರವಾಡ, ಹಾವೇರಿ, ಬಳ್ಳಾರಿ, ಹಾಸನ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಿಗೆ ಆರೆ- ಂಜ್ ಅಲರ್ಟ್ ಹಾಗೂ ಗದಗ, ಕೊಪ್ಪಳ, ವಿಜಯಪುರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಮೈಸೂರು, ಮಂಡ್ಯ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಜಿಲ್ಲೆಗಳಿಗೆ ಯಲ್ಲೋ ಅಲರ್ಟ್ ಘೋಷಿಸಲಾಗಿದೆ. ರಾಜ್ಯಾದ್ಯಂತ ಗುಡುಗು, ಸಿಡಿಲು ಸಹಿತ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

# ಅಪರಾಧ ತಡೆಗೆ ಕಠಿಣ ಕ್ರಮ ಜರುಗಿಸಿ:ಸಚಿವ ಈಶ್ವರ ಬಿ.ಖಂಡ್ರೆ




ಮಲ್ಲಮ್ಮ ನುಡಿ ವಾರ್ತೆ ಬೀದರ : ಮೇ.19: ಅಪರಾಧಿಗಳ ವಿರುದ್ಧ ಕಠಿಣ ಕ್ರಮ ಜರುಗಿಸುವ ಮೂಲಕ ಪೊಲೀಸ್ ಇಲಾಖೆ ಕಾನೂನು ಸುವ್ಯವಸ್ಥೆ ಕಾಪಾಡಲು ಮುಂದಾಗಬೇಕು. ಅಪರಾಧ ತಡೆಗೆ ಪೊಲೀಸ್ ಇಲಾಖೆಗೆ ಎಲ್ಲಾ ರೀತಿಯಲ್ಲಿ ಸಹಕಾರ ನೀಡಲಾಗುವುದು ಎಂದು ಅರಣ್ಯ ಪರಿಸರ ಹಾಗೂ ಜೈವಿಕ ಮತ್ತು ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಹೇಳಿದರು.

ಅವರು ಇಂದು ಎಸ್ಪಿ ಕಚೇರಿ ಆವರಣದಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ 1.25 ಕೋಟಿ ರೂ. ಅನುಧಾನದಲ್ಲಿ ಖರೀದಿಸಲಾದ 7 ಬುಲೆರೋ ಹಾಗೂ 2 ಸ್ಕಾರ್ಪಿಯೋ ವಾಹನಗಳನ್ನು ಪೊಲೀಸ್ ಇಲಾಖೆಗೆ ಹಾಸ್ತಾಂತರಿಸಿ ಮಾತನಾಡಿದರು.

ಕಾನೂನು ಸುವ್ಯವಸ್ಥೆ ಚೆನ್ನಾಗಿದ್ದಾರೆ ಮಾತ್ರ ಜನರು ನೆಮ್ಮದಿಯ ನಿದ್ದೆ ಮಾಡಲು ಸಾಧ್ಯ. ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಇತ್ತೀಚಿಗೆ ಕೆಕೆಆರ್ ಡಿಬಿ ಅನುಧಾನದಲ್ಲಿ ಎಐ ಕ್ಯಾಮೆರಾ ಒಳಗೊಂಡ ಕಮಾಂಡ್ ಸೆಂಟರ್ ಸ್ಥಾಪನೆ ಮಾಡಲಾಗಿದೆ ಮುಂದೆಯೂ ಕಾನೂನು ಸುವ್ಯವಸ್ಥೆಗೆ ಎಲ್ಲಾ ರೀತಿಯಲ್ಲಿ ಕ್ರಮವಹಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಪೌರಾಡಳಿತ ಹಾಗೂ ಹಜ್ ಖಾತೆ ಸಚಿವ ರಹೀಂ ಖಾನ್, ನಗರಸಭೆ ಅಧ್ಯಕ್ಷ ಮೊಹ್ಮದ್ ಗೌಸ್, ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪ್ರದೀಪ್ ಗುಂಟಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಸೇವೆಯೇ ಉತ್ತಮ ನಾಗರಿಕನ ನಿಜ ಕರ್ತವ್ಯ: ಸತೀಶ ಪಾಟೀಲ



ಮಲ್ಲಮ್ಮ ನುಡಿ ವಾರ್ತೆ ಬೀದರ. ಮೇ. 19 : ಸೇವೆಯೇ ಉತ್ತಮ ನಾಗರಿಕನ ನಿಜವಾದ ಕರ್ತವ್ಯವಾಗಿದೆ. ಈ ಕರ್ತವ್ಯವನ್ನು ರಾಷ್ಟ್ರೀಯ ಸೇವಾ ಯೋಜನೆ ಕಲಿಸಿಕೊಡುತ್ತದೆ. ಶಿಸ್ತು, ತಾಳ್ಮೆ, ಸಹಕಾರ, ಸ್ವಚ್ಛತಾಭಾವ ಮತ್ತು ದೇಶಭಕ್ತಿಯನ್ನುಮೈಗೂಡಿಸಿಕೊಂಡು ಮಕ್ಕಳು ಬದುಕಬೇಕೆಂದು ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಸತೀಶ ಪಾಟೀಲ

(2ನೇ ಪುಟ ನೋಡಿ)

ಒಂದನೇ ಪುಟದಿಂದ

## ನಿಜ ಕರ್ತವ್ಯ: ಸತೀಶ ಪಾಟೀಲ

ತಿಳಿಸಿದರು. ನಗರದ ಲಾಡಗೇರಿ ಹಿರೇಮಠದ ಆವರಣದಲ್ಲಿ ಕರ್ನಾಟಕ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ ವತಿಯಿಂದ ಆಯೋಜಿಸಿದ ರಾಷ್ಟ್ರೀಯ ಸೇವಾ ಯೋಜನೆ ಶಿಬಿರ: 2024–25 ಉದ್ಘಾಟಿಸಿ ಮಾತನಾಡಿದರು. ಇಂದಿನ ಮಕ್ಕಳು ಬುದ್ಧಿವಂತರಾದಂತೆ ಪಾಲಕರನ್ನು ವೃದ್ಧಾಶ್ರಮಕ್ಕೆ ಕಳುಹಿಸುತ್ತಿದ್ದಾರೆ. ರಸ್ತೆಯಲ್ಲಿ ಒಬ್ಬ ನಿಸ್ಸಹಾಯಕರನ್ನು ದಾಟಿಸಿದರೆ, ಬಸ್‌ನಲ್ಲಿ ಅಂಗವಿಕಲರನ್ನು ಆಸನ ಬಿಟ್ಟುಕೊಟ್ಟರೆ ಅದೇ ದೊಡ್ಡ ಸೇವೆ. ಇಂತಹ ಉತ್ತಮ ಮನೋಭಾವನೆಗಳನ್ನು ವಿದ್ಯಾರ್ಥಿಗಳು ಶಿಬಿರದ ಮೂಲಕ ಮೈಗೂಡಿಸಿಕೊಳ್ಳಬೇಕೆಂದು ಪಾಟೀಲ ಕರೆ ನೀಡಿದರು. ಕಾಲೇಜಿನ ಪ್ರಾಚಾರ್ಯರಾದ ಡಾ. ಮಲ್ಲಿಕಾರ್ಜುನ ಹಂಗರಗಿ ಮಾತನಾಡಿ ಕರ್ನಾಟಕ ಕಾಲೇಜಿನಲ್ಲಿ ಮಕ್ಕಳಿಗೆ ಕೇವಲ ಶಿಕ್ಷಣ ನೀಡದೆ ಮಕ್ಕಳು ತಮ್ಮ ನಿಜಜೀವನದಲ್ಲಿ ಯಾರೊಂದಿಗೆ ಹೇಗೆ ನಡೆದುಕೊಳ್ಳಬೇಕು? ಹೇಗೆ ಬದುಕಬೇಕೆಂಬ ನೈತಿಕ ಮೌಲ್ಯಗಳನ್ನು ಅವರ ಹೃದಯದಲ್ಲಿ ಬಿತ್ತಲಾಗುತ್ತಿದೆ. ಕರ್ತವ್ಯ ನಿರ್ವಹಿಸಲು ಸಹಕಾರ ನೀಡುತ್ತಿರುವ ಸಂಸ್ಥೆಯ ಅಧ್ಯಕ್ಷರಾದ ಬಸವರಾಜ ಜಾಬಶೆಟ್ಟಿಯವರಿಗೂ, ಕಾರ್ಯದರ್ಶಿ ಸತೀಶ ಪಾಟೀಲ ಅವರಿಗೂ ಧನ್ಯವಾದ ಸಲ್ಲಿಸುತ್ತೇನೆ ಎಂದರು.

ಉಪಪ್ರಾಚಾರ್ಯರಾದ ಪ್ರೊ.ಸೋಮನಾಥ ಬಿರಾದಾರ ಸ್ವಾಗತಿಸಿದರು. ಎನ್‌ಎಸ್‌ಎಸ್ ಅಧಿಕಾರಿ ಡಾ. ದಿಲಿಪ ಮಾಲೆ ನಿರೂಪಿಸಿದರು. ಐಕ್ಯೂಎಸಿ ಸಂಯೋಜಕ ಡಾ.ರಾಜಮೋಹನ ಪರದೇಶಿ ವಂದಿಸಿದರು. ಇದೇ ವೇಳೆ "ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವದಲ್ಲಿ ಯುವಕರ ಪಾತ್ರ" ಎಂಬ ಧ್ಯೇಯವಾಕ್ಯದಡಿಯಲ್ಲಿ ಎನ್‌ಎಸ್‌ಎಸ್ ಶಿಬಿರವನ್ನು ಲಾಡಗೇರಿಯ ಹಿರೇಮಠದ ಆವರಣದಲ್ಲಿ ಆಯೋಜಿಸಲಾಗಿತ್ತು. ಮಕ್ಕಳು ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದರು. ಕಾರ್ಯಕ್ರಮದಲ್ಲಿ ಕರ್ನಾಟಕ ಕಾಲೇಜಿನ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ವಿಜಯ್ ಶಾ ವಿರುದ್ಧ ಎಸ್‌ಐಟಿ ತನಿಖೆ: ಸುಪ್ರೀಂ

ಮೂವರು ಐಪಿಎಸ್ ಅಧಿಕಾರಿಗಳನ್ನು ಒಳಗೊಂಡ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಬೇಕು. ಅದು ಮಹಿಳಾ ಅಧಿಕಾರಿಯನ್ನು ಹೊಂದಿರಬೇಕು ಮತ್ತು ಮೇ 28 ರೊಳಗೆ ವರದಿಯನ್ನು ಸಲ್ಲಿಸಬೇಕು. ಅಲ್ಲದೇ ಅಧಿಕಾರಿಗಳು ಮಧ್ಯಪ್ರದೇಶ ಮೂಲದವರಾಗಿರಬಾರದು ಎಂದು ನ್ಯಾಯಾಲಯ ಆದೇಶದಲ್ಲಿ ಷರತ್ತು ವಿಧಿಸಿದೆ.

ಶಾ ಬಂಧನದಿಂದ ವಿನಾಯಿತಿ ನೀಡಿದ ನ್ಯಾಯಾಲಯ, ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿತು. ಅಲ್ಲದೇ ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಬೇಕಿತ್ತು, ಈ ಬಗ್ಗೆ ಉತ್ತರಿಸುವಂತೆ ಮಧ್ಯಪ್ರದೇಶ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿ, ಇದನ್ನು ಪೀಠ ಗಮನಿಸುತ್ತದೆ. ನಿಮಗೆ ಇದೊಂದು ಅಗ್ನಿ ಪರೀಕ್ಷೆ ಎಂದು ಸರ್ಕಾರಕ್ಕೆ ಸೂಚಿಸಿದೆ.

ಇಂದೋರ್ ಜಿಲ್ಲೆಯ ಮಾಹುವಿನ ರಾಯ್ಕುಂಡ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಜಯ್ ಶಾ ಮಾತಾಡಿದ್ದರು. ಭಾಷಣದಲ್ಲಿ ಭಯೋತ್ಪಾದಕರು ನಮ್ಮ ಸಹೋದರಿಯರು ಮತ್ತು ಹೆಣ್ಣುಮಕ್ಕಳ ಸಿಂಧೂರವನ್ನು ಅಳಿಸಿದ್ದರು. ಆ ಉಗ್ರರಿಗೆ ಪಾಠ ಕಲಿಸಲು ಅವರ ಸಹೋದರಿಯನ್ನು ನಾವು ಕಳುಹಿಸಿದ್ದೇವೆ ಎಂದು ಹೇಳಿದ್ದರು. ಈ ಸಂಬಂಧ ಮಧ್ಯಪ್ರದೇಶದ ಹೈಕೋರ್ಟ್ ಎಫ್‌ಐಆರ್ ದಾಖಲಿಸುವಂತೆ ಸೂಚಿಸಿತ್ತು. ಇದಾದ ಬೆನ್ನಲ್ಲೇ ಕರ್ನಲ್ ಸೋಫಿಯಾ ಜಾತಿ ಮತ್ತು ಧರ್ಮವನ್ನು ಮೀರಿ ಭಾರತಕ್ಕೆ ಕೀರ್ತಿ ತಂದಿದ್ದಾರೆ. ನನ್ನ ಮಾತುಗಳು ಸಮಾಜ ಮತ್ತು ಧರ್ಮಕ್ಕೆ ನೋವುಂಟು ಮಾಡಿದ್ದರೆ, ನಾನು ಹತ್ತು ಬಾರಿ ಕ್ಷಮೆಯಾಚಿಸಲು ಸಿದ್ಧನಿದ್ದೇನೆ ಎಂದಿದ್ದರು. ಬಳಿಕ ಹೈಕೋರ್ಟ್ ಆದೇಶದ ರದ್ದು ಕೋರಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

## ವಿಷ ಹಿಡಿದು ದಂಪತಿ ಪ್ರತಿಭಟನೆ

ಪ್ರತಿಭಟನೆ ಮಾಡಿದರು.ಶ್ರೀರಾಮ ಸೇನೆ ರಾಷ್ಟ್ರೀಯ ಗೌರವ ಅಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಆಯುಕ್ತರ ಕಚೇರಿಗೆ ಮುತ್ತಿಗೆ ಹಾಕಲು ತೆರಳಿದಾಗ

ಅರ್ಧಕ್ಕೆ ತಡೆದ ಪೊಲೀಸರು ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿ ಕ್ರಮದ ಭರವಸೆ ನೀಡಿದರು.

ಕಳೆದ ಮಾರ್ಚ್ 22 ರಂದು ಕಿಡ್ನಾಪ್, ಹಲ್ಲೆ ಮತ್ತು ಸುಲಿಗೆ ಕೇಸ್ ಫರಹತಾಬಾದ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿತ್ತು.ನಂದಿಕೂರ್ ಗ್ರಾಮದ ಮಲ್ಲಯ್ಯ ಸ್ವಾಮಿ ಯನ್ನ ಕಿಡ್ನಾಪ್ ಮಾಡಿ ಹಲ್ಲೆಗೈದು 20 ಲಕ್ಷ ರೂಪಾಯಿ ದರೋಡೆ ಮಾಡಲಾಗಿದ್ದರ ಕುರಿತಂತೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು

ದರೋಡೆಕೊರರನ್ನ ಬಂಧಿಸಿದ್ದಾರೆ. ಆದರೆ ದರೋಡೆಕೋರರಿಂದ ದರೋಡೆಯಾದ ಹಣವನ್ನು ರಿಕವರಿ ಮಾಡುತ್ತಿಲ್ಲ, ಈ ಬಗ್ಗೆ ಪೊಲೀಸರಿಗೆ ಕೇಳಿದರೇ ಯಾವುದೇ ಮಾಹಿತಿ ನೀಡುತ್ತಿಲ್ಲ ಎಂದು ದಂಪತಿಗಳು ಆರೋಪಿಸಿದರು.ಕೂಡಲೇ 20 ಲಕ್ಷ ರೂಪಾಯಿಗಳನ್ನು ರಿಕವರಿ ಮಾಡಿಕೊಡುವಂತೆ ಒತ್ತಾಯಿಸಿದರು.

ಸಚಿವ ಪ್ರಿಯಾಂಕ ಖರ್ಗೆ, ಶಾಸಕ ಅಲ್ಲಮಪ್ರಭು ಪಾಟೀಲ್ ರ ಕುಮ್ಮಕ್ಕಿನಿಂದ ಪೊಲೀಸರು ಸರಿಯಾಗಿ ತನಿಖೆ ನಡೆಸುತ್ತಿಲ್ಲ ಎಂದು ಆರೋಪಿಸಿದ ಪ್ರತಿಭಟನಾಕಾರರು ಸಚಿವ ಪ್ರಿಯಾಂಕ ಖರ್ಗೆ, ಪೊಲೀಸರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು

## ಪಠ್ಯ ಪುಸ್ತಕ ಪೂರೈಕೆ

ಮಾಡಿಕೊಡಲಾಗಿದೆ.ಪೋಷಕರ ವಿರೋಧ: ಇನ್ನು, ಖಾಸಗಿ ಶಾಲಾ ಆಡಳಿತ ಮಂಡಳಿಯವರು ದಿಢೀರನೆ ಶೇ 15ರಿಂದ 20ರಷ್ಟು ಶುಲ್ಕ ಹೆಚ್ಚಿಸಿರುವುದಕ್ಕೆ ಪೋಷಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಈಗಾಗಲೇ ಹಲವು ಪೋಷಕರು ಆಯಾ ಶಾಲೆಗಳ ಆಡಳಿತ ಮಂಡಳಿಯವರಿಗೆ ಕರೆ ಮಾಡಿ, ವಿರೋಧ ದಾಖಲಿಸಿದ್ದಾರೆ.

'ಖಾಸಗಿ ಶಾಲಾ ಆಡಳಿತ ಮಂಡಳಿಯವರು ಶುಲ್ಕ ಹೆಚ್ಚಿಸಿರುವುದನ್ನು ಗಮನಿಸಿದ್ದೇನೆ. ಪೋಷಕರು ಈ ಸಂಬಂಧ ಲಿಖಿತ ರೂಪದಲ್ಲಿ ದೂರು ಕೊಟ್ಟರೆ, ಜಿಲ್ಲಾಧಿಕಾರಿಯೊಂದಿಗೆ ಸಭೆ ನಡೆಸಿ, ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಡಿಡಿಪಿಐ ಸಲೀಂ ಪಾಶಾ ಪ್ರತಿಕ್ರಿಯಿಸಿದ್ದಾರೆ.

ಸಲೀಂ ಪಾಶಾ, ಉಪನಿರ್ದೇಶಕ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಬೀದರ್‌ಕೆಲವು ಟೈಟಲ್‌ಗಳ ಪುಸ್ತಕಗಳು ಇನ್ನೂ ಬಂದಿಲ್ಲ. ಅವುಗಳು ಬಂದ ನಂತರ ಎಲ್ಲ ಟೈಟಲ್‌ಗಳ ಪುಸ್ತಕಗಳನ್ನು ಒಟ್ಟಿಗೆ ಶಾಲೆಗಳಿಗೆ ವಿತರಿಸಲಾಗುತ್ತದೆ.ಶಾಲಾ ಪ್ರಾರಂಭೋತ್ಸವಕ್ಕೆ ಸಿದ್ಧತೆ

ಬೀದರ್ ಜಿಲ್ಲೆಯಲ್ಲಿ ಒಟ್ಟು 257 ಸರ್ಕಾರಿ ಶಾಲೆಗಳಿವೆ. ಶಿಥಿಲಗೊಂಡಿರುವ ಕೊಠಡಿಗಳ ದುರಸ್ತಿ ಕಾರ್ಯ ಭರದಿಂದ ನಡೆದಿದೆ. 735 ಶಾಲಾ ಕೊಠಡಿಗಳು ಅಪಾಯದ ಸ್ಥಿತಿಯಲ್ಲಿವೆ ಎಂದು ಗುರುತಿಸಲಾಗಿದ್ದು ಈ ಪೈಕಿ ಶೇ 50ರಷ್ಟು ದುರಸ್ತಿಗೊಳಿಸಲಾಗಿದೆ. ಇನ್ನುಳಿದವುಗಳ ದುರಸ್ತಿ ಕಾರ್ಯ ಕೂಡ ಪ್ರಗತಿಯಲ್ಲಿದೆ. ಆದರೆ ಮೇ 29ರಿಂದಲೇ ಶಾಲಾ ಪ್ರಾರಂಭದ ಉತ್ಸವ ನಡೆಯಲಿದ್ದು ಅಷ್ಟರೊಳಗೆ ಕಾಮಗಾರಿ ಪೂರ್ಣಗೊಳ್ಳುವುದು ಅನುಮಾನ. ಆದರೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಕೆಲಸ ಪೂರ್ಣಗೊಳಿಸುವ ವಿಶ್ವಾಸ ಹೊಂದಿದೆ. ಶಾಲಾ ಆರಂಭಕ್ಕೆ ಕೆಲವೇ ದಿನಗಳು ಬಾಕಿ ಉಳಿದಿದ್ದು ಮೇ 28ರೊಳಗೆ ಎಲ್ಲ ರೀತಿಯಿಂದಲೂ ಶಾಲೆಗಳನ್ನು ಸ್ವಚ್ಛಗೊಳಿಸಿ ಸಜ್ಜುಗೊಳಿಸುವಂತೆ ಆಯಾ ಶಾಲೆಗಳ ಮುಖ್ಯಶಿಕ್ಷಕರಿಗೆ ನಿರ್ದೇಶನ ನೀಡಲಾಗಿದೆ. 'ಶಾಲೆಗಳ ಕೊಠಡಿಗಳು ಶೌಚಾಲಯಗಳು ನೀರಿನ ಟ್ಯಾಂಕ್ ಸಂಪ್ ಸೇರಿದಂತೆ ಇಡೀ ಪರಿಸರ ಸ್ವಚ್ಛಗೊಳಿಸಬೇಕು. ಶಾಲಾ ಆರಂಭೋತ್ಸವಕ್ಕೆ ಸಿದ್ಧತೆ ಮಾಡಿಕೊಂಡು ಮೇ 29ರಂದು ಮಕ್ಕಳನ್ನು ಕರೆತರಲು ಸೂಚಿಸಲಾಗಿದೆ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಸಲೀಂ ಪಾಶಾ ತಿಳಿಸಿದ್ದಾರೆ.

## ಮಧ್ಯಸ್ಥಿಕೆ ವಹಿಸಿಲ್ಲ: ವಿದೇಶಾಂಗ ಕಾರ್ಯದರ್ಶಿ

ಎರಡೂ ದೇಶಗಳು ಕದನ ವಿರಾಮ ಒಪ್ಪಂದ ಮಾಡಿಕೊಂಡಿದ್ದು, ತಾನು ಮಧ್ಯಸ್ಥಿಕೆ ವಹಿಸಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇಳಿದ್ದರು. ಆದರೆ ಪ್ರತಿಪಕ್ಷಗಳು ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಸ್ಪಷ್ಟನೆ ನೀಡಬೇಕು ಎಂದು ಆಗ್ರಹಿಸಿದ್ದವು.

ಭಾರತ ಮತ್ತು ಪಾಕಿಸ್ತಾನ ಯುದ್ಧವನ್ನು ನಿಲ್ಲಿಸಲು ನಿರ್ಧರಿಸಿದ ನಂತರ ಟ್ರಂಪ್ ಅವರ ಹಲವಾರು ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳ ಬಗ್ಗೆ ವಿರೋಧ ಪಕ್ಷದ ಸದಸ್ಯರೊಬ್ಬರು ಕೇಳಿದಾಗ, ಅಮೆರಿಕ ಅಧ್ಯಕ್ಷರು ಹಾಗೆ ಮಾಡಲು ತಮ್ಮ ಅನುಮತಿ ಪಡೆದಿಲ್ಲ ಎಂದು ವಿದೇಶಾಂಗ ಕಾರ್ಯದರ್ಶಿ ವ್ಯಂಗ್ಯವಾಡಿದರು.

ಮಿಲಿಟರಿ ಕ್ರಮಗಳನ್ನು ನಿಲ್ಲಿಸಿದ ನಂತರ ಮಿಶ್ರಿಯನ್ನು ಟ್ರೋಲ್ ಮಾಡಿದ್ದನ್ನು ಸಮಿತಿ ಸದಸ್ಯರು ಸರ್ವಾನುಮತದಿಂದ ಖಂಡಿಸಿದರು ಮತ್ತು ಅವರ ವೃತ್ತಿಪರ ನಡವಳಿಕೆಯನ್ನು ಶ್ಲಾಘಿಸಿದರು ಎಂದು ಮೂಲಗಳು ತಿಳಿಸಿವೆ.

ಭಾರತದ ವಿರುದ್ಧ ಟರ್ಕಿಯ ಪ್ರತಿಕೂಲ ನಿಲುವಿನ ಕುರಿತ ಪ್ರಶ್ನೆಗೆ ಉತ್ತರಿಸಿದ ಮಿಶ್ರಿ, ಆ ದೇಶವು ಸಾಂಪ್ರದಾಯಿಕವಾಗಿ ಭಾರತದ ಬೆಂಬಲಿಗನಲ್ಲ ಎಂದು ಹೇಳಿದರು.

ಕಾಂಗ್ರೆಸ್ ಸಂಸದ ಶಶಿ ತರೂರ್ ಅಧ್ಯಕ್ಷತೆಯಲ್ಲಿ ನಡೆದ ವಿದೇಶಾಂಗ ವ್ಯವಹಾರಗಳ ಸಂಸತ್ತಿನ ಸ್ಥಾಯಿ ಸಮಿತಿಯ ಸಭೆಯಲ್ಲಿ ಟಿಎಂಸಿಯ ಅಭಿಷೇಕ್ ಬ್ಯಾನರ್ಜಿ, ಕಾಂಗ್ರೆಸ್‌ನ ರಾಜೀವ್ ಶುಕ್ಲಾ ಮತ್ತು ದೀಪೇಂದರ್ ಹೂಡಾ, ಎಐಎಂಐಎಂ ಮುಖ್ಯಸ್ಥ ಅಸದುದ್ದೀನ್ ಓವೈಸಿ ಮತ್ತು ಬಿಜೆಪಿಯ ಅಪರಾಜಿತ ಸಾರಂಗಿ ಹಾಗೂ ಅರುಣ್ ಗೋವಿಲ್ ಸೇರಿದಂತೆ ಹಲವಾರು ಸಂಸದರು ಭಾಗವಹಿಸಿದ್ದರು.

### ನೀಡುವ ಧರ್ಮಶಾಲೆಯಲ್ಲ : ಸುಪ್ರೀಂ

ಕೆ. ವಿನೋದ್ ಚಂದ್ರನ್ ಅವರಿದ್ದ ದ್ವಿಸದಸ್ಯ ಪೀಠ ವಿಚಾರಣೆ ನಡೆಸಿತು.

ಈ ವೇಳೆ ಭಾರತವು ಪ್ರಪಂಚದಾದ್ಯಂತದ ನಿರಾಶ್ರಿತರಿಗೆ ಆಶ್ರಯ ನೀಡಬೇಕೇ? ನಾವು 140 ಕೋಟಿ ಜನಸಂಖ್ಯೆ ಹೊಂದಿದ್ದು ಕಷ್ಟಪಡುತ್ತಿದ್ದೇವೆ. ಇದು ಎಲ್ಲೆಡೆಯಿಂದ ಬಂದ ವಿದೇಶಿ ಪ್ರಜೆಗಳಿಗೆ ಆಶ್ರಯ ನೀಡಬಹುದಾದ ಧರ್ಮ ಛತ್ರವಲ್ಲ ಎಂದು ಕೋರ್ಟ್ ಹೇಳಿತು. ಏನಿದು ಪ್ರಕರಣ?ಈ ಹಿಂದೆ ಶ್ರೀಲಂಕಾದಲ್ಲಿ ಸಕ್ರೀಯವಾಗಿದ್ದ ಭಯೋತ್ಪಾದಕ ಸಂಘಟನೆಯಾದ ಲಿಬರೇಶನ್ ಟೈಗರ್ಸ್ ಆಫ್ ತಮಿಳು ಈಳಂ (ಎಲ್‌ಟಿಟಿಇ) ಜೊತೆ ಸಂಪರ್ಕ ಹೊಂದಿದ್ದಾರೆ ಎಂಬ ಅನುಮಾನದ ಮೇಲೆ ವಿದೇಶಿ ಪ್ರಜೆಯನ್ನು 2015 ರಲ್ಲಿ ಬಂಧಿಸಲಾಗಿತ್ತು. 2018 ರಲ್ಲಿ ಕಾನೂನುಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯ್ದೆಯ (ಯುಎಪಿಎ) ಸೆಕ್ಷನ್–10ರ ಅಡಿಯಲ್ಲಿ ಅಪರಾಧಕ್ಕಾಗಿ ವಿಚಾರಣಾ ನ್ಯಾಯಾಲಯವು ಅರ್ಜಿದಾರನನ್ನ ದೋಷಿ ಎಂದು ಘೋಷಿಸಿತು, 10 ವರ್ಷಗಳ ಕಾಲ ಜೈಲು ಶಿಕ್ಷೆಯನ್ನೂ ವಿಧಿಸಿತ್ತು. ಕೊನೆಗೆ 2022 ರಲ್ಲಿ, ಮದ್ರಾಸ್ ಹೈಕೋರ್ಟ್ ಆತನ ಶಿಕ್ಷೆಯನ್ನು 7 ವರ್ಷಗಳಿಗೆ ಇಳಿಸಿತು. ಶಿಕ್ಷೆ ಅವಧಿ ಮುಗಿದ ಬಳಿಕ ಅವನು ಭಾರತವನ್ನ ತೊರೆಯಬೇಕು, ಅಲ್ಲಿಯವರೆಗೆ ನಿರಾಶ್ರಿತರ ಶಿಬಿರದಲ್ಲೇ ಇರಬೇಕು ಎಂದು ನಿರ್ದೇಶನ ನೀಡಿತ್ತು.ಇದಾದ ಬಳಿಕ ವೀಸಾದಲ್ಲಿ ಭಾರತಕ್ಕೆ ಬಂದಿದ್ದ ಅರ್ಜಿದಾರ, ಅವರ ತಾಯ್ನಾಡಿನಲ್ಲಿ ಜೀವಕ್ಕೆ ಅಪಾಯವಿದೆ ಎಂದು ಅರ್ಜಿದಾರನ ಪರ ವಕೀಲರು ತಿಳಿಸಿದ್ದರು. ಅಲ್ಲದೇ ಅವರು ಕಳೆದ ಮೂರು ವರ್ಷಗಳಿಂದ ಬಂಧನದಲ್ಲಿದ್ದಾರೆ, ಗಡೀಪಾರು ಪ್ರಕ್ರಿಯೆ ಕೂಡ ಆರಂಭವಾಗಿಲ್ಲ ಎಂದು ನ್ಯಾಯಾಲಯದ ಗಮನ ಸೆಳೆದರು. ಅಲ್ಲದೇ ಬಹು ಕಾಯಿಲೆಗಳಿಂದ ಬಳಲುತ್ತಿರುವ ಅರ್ಜಿದಾರನ ಪತ್ನಿ ಮತ್ತು ಹೃದಯ ಸಂಬಂಧಿ ಕಾಯಿಲೆ ಹೊಂದಿರುವ ಅವರ ಮಗ ಭಾರತದಲ್ಲಿ ನೆಲೆಸಿದ್ದಾರೆ ಎಂದು ಕೋರ್ಟ್ ಗಮನಕ್ಕೆ ತಂದರು.

ಇದಕ್ಕೆ ಮಧ್ಯಪ್ರವೇಶಿಸಿದ ನ್ಯಾ. ದತ್ತ ಅವರು, ಇಲ್ಲಿ ನೆಲೆಸಲು ನಿಮಗೆ ಏನು ಹಕ್ಕಿದೆ? ಎಂದು ಪ್ರಶ್ನಿಸಿದರು..

## ಬರದ ನಾಡು ಬೀದರ್ ನಲ್ಲಿ ಶ್ರೀಗಂಧದ ಘಮ: ಹೇರಳವಾಗಿ ಬೆಳೆದು ನಿಂತ ಮರಗಳು



ಮಲ್ಲಮ್ಮ ನುಡಿ ವಾರ್ತೆ

ಬೀದರ.ಮೇ.19 : ಕರ್ನಾಟಕ ಶ್ರೀಗಂಧಕ್ಕೆ ಹೆಸರುವಾಸಿಯಾಗಿದೆ. ದೇಶದಲ್ಲಿಯೇ ಅತಿ ಹೆಚ್ಚು ಶ್ರೀಗಂಧವನ್ನು ಕರ್ನಾಟಕದಲ್ಲಿ ಬೆಳೆಯಲಾಗುತ್ತದೆ. ಬೀದರ್ ತಾಲೂಕಿನ ಹೊನ್ನಿಕೇರಿ ಗುಡ್ಡದಲ್ಲಿ ಲಕ್ಷಾಂತರ ಶ್ರೀಗಂಧದ ಮರಗಳು ಬೆಳೆದು ನಿಂತಿದ್ದು, ಎಲ್ಲಿ ನೋಡಿದರೂ ಶ್ರೀಗಂಧ ಕಾಣ ಸಿಗುತ್ತದೆ.

ಇಲ್ಲಿ ಸುಮಾರು 1776 ಎಕರೆ ಪ್ರದೇಶದಲ್ಲಿ ಲಕ್ಷಾಂತರ ಶ್ರೀಗಂಧದ ಮರಗಳು ಬೆಳೆದಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಪ್ರತಿ ನಿತ್ಯ ಗಸ್ತು ತಿರುಗುವುದರ ಮೂಲಕ ಮರಗಳ ಪಾಲನೆ, ಪೋಷಣೆ ಜೊತೆಗೆ ರಕ್ಷಣೆ ಮಾಡುತ್ತಿದ್ದಾರೆ.

ಬೀದರ್ ಜಿಲ್ಲೆಯಲ್ಲಿ ಶ್ರೀಗಂಧ ಬೆಳೆಯುವುದಕ್ಕಾಗಿ ಮತ್ತು ಅದರ ಪೋಷಣೆಗಾಗಿ ಅರಣ್ಯ ಇಲಾಖೆ ಸಿರಿಗಂಧ ಎಂಬ ಉಪಕ್ರಮವನ್ನು ಆರಂಭಿಸಿದೆ. ಇದಕ್ಕಾಗಿಯೇ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಶ್ರೀಗಂಧವಿರುವ ಅರಣ್ಯ ಪ್ರದೇಶದ ಸುತ್ತಲೂ ತಂತಿ ಬೇಲಿ ಹಾಕಿ, ಸಿಬ್ಬಂದಿಗಳನ್ನು ನೇಮಿಸಿದೆ. ಇನ್ನು ಶ್ರೀಗಂಧ ಕಳ್ಳರನ್ನು ಹಿಡಿಯಲು ಮೂರು ಮುಧೋಳ ನಾಯಿಗಳನ್ನು ಅರಣ್ಯ ಇಲಾಖೆ ಸಾಕಿದೆ.

ಹೊನ್ನಿಕೇರಿಯ ಕಾಯ್ದಿಟ್ಟ ಅರಣ್ಯದಲ್ಲಿ ಶ್ರೀಗಂಧ ಬೆಳೆದ ಪ್ರದೇಶದ ಸುತ್ತ ಸುಮಾರು 19 ಕಿಮೀವರೆಗೆ ತಂತಿ ಬೇಲಿ ಹಾಕಲಾಗಿದೆ.ಹಗಲು–ರಾತ್ರಿಎನ್ನದೆ ಅರಣ್ಯ ಇಲಾಖೆ ಸಿಬ್ಬಂದಿಗಳು ಗಸ್ತು ತಿರುಗುತ್ತಿದ್ದಾರೆ. ಈ ಮೂಲಕ ಶ್ರೀಗಂಧ ರಕ್ಷಣೆಗೆ ಅರಣ್ಯ ಇಲಾಖೆ ಪಣತೊಟ್ಟಿದೆ. ಇನ್ನು, ಆಸಕ್ತ ರೈತರಿಗೂ ಕೂಡಾ ಶ್ರೀಗಂಧ ಬೆಳೆಯಲು ಅರಣ್ಯ ಇಲಾಖೆಯ ಅಧಿಕಾರಿಗಳು ಪ್ರೋತ್ಸಾಹಿಸುತ್ತಿದ್ದಾರೆ. ಬೀದರ್ ಜಿಲ್ಲೆಯಲ್ಲಿ ಎಲ್ಲ ತಾಲೂಕಿನಲ್ಲಿಯೂ ಅಂದಾಜು ಸುಮಾರು 50 ಸಾವಿರದವರೆಗೂ ಶ್ರೀಗಂಧದ ಗಿಡಗಳನ್ನು ರೈತರು ನಾಟಿ ಮಾಡಿದ್ದಾರೆ. ಈಗ ಶ್ರೀಗಂಧದ ಮರಗಳು ಬೆಳೆದು ನಿಂತಿವೆ.

ಬೀದರ್ ತಾಲೂಕಿ ಚಿಟ್ಟಾ ಗ್ರಾಮದ ಮಹ್ಮದ್ ಜಾಫರ್ ಎಂಬುವರು ತಮ್ಮ 7 ಎಕರೆ ಜಮೀನಿನಲ್ಲಿ ಶ್ರೀಗಂಧದ ಸಸಿಗಳನ್ನು ನೆಟ್ಟಿದ್ದಾರೆ. 10 ವರ್ಷದ ನಂತರ ಶ್ರೀಗಂಧದಿಂದ 10 ರಿಂದ 15 ಕೋಟಿ ರೂಪಾಯಿ ಆದಾಯ ಗಳಿಸುವ ಲೆಕ್ಕಾಚಾರದಲ್ಲಿ ರೈತ ಮಹ್ಮದ್ ಜಾಫರ್ ಇದ್ದಾರೆ. ಮಹ್ಮದ್ ಜಾಫರ್ ಅವರು ತಮ್ಮ ಹೊಲದಲ್ಲಿ ಒಂದೂವರೆ ಸಾವಿರ ಶ್ರೀಗಂಧದ ಗಿಡಗಳು, ಎರಡುವರೆ ಸಾವಿರ ಮಾವು ಮತ್ತು ಹೆಬ್ಬೇವು, ಐದುನೂರು ಬಾಳೆ ಮತ್ತು ಪಪ್ಪಾಯಿ ಗಿಡಗಳನ್ನು ನೆಟ್ಟಿದ್ದಾರೆ.

ಇದರ ನಡುವೆ ನಮಗೆ ಬೇಕಾದ ಎಲ್ಲಾ ಬೆಳೆಗಳನ್ನ ಬೆಳೆದುಕೊಳ್ಳುತ್ತೇವೆ. ಹೀಗಾಗಿ ಶ್ರೀಗಂಧ ನಾಟಿ ಮಾಡಿದರೆ ರೈತರು ಲಾಭ ಗಳಿಸಬಹುದು ಎಂದು ರೈತ ಮಹ್ಮದ್ ಜಾಫರ್ ಹೇಳಿದ್ದಾರೆ. ಈ ಹಿಂದೆ ಶ್ರೀಗಂಧದ ಮರಗಳನ್ನು ಯಾವುದೇ ಪ್ರದೇಶದಲ್ಲಿ ಬೆಳೆದರೂ ಅದು ಸರ್ಕಾರದ ಸ್ವತ್ತಾಗಿರುತ್ತಿತ್ತು. ಆದರೆ, ಕರ್ನಾಟಕ ಅರಣ್ಯ ಕಾಯಿದೆ 2001 ಸೆಕ್ಷನ್ 83ರ ಪ್ರಕಾರ ಯಾರ ಜಮೀನಿನಲ್ಲಿ ಶ್ರೀಗಂಧದ ಮರವಿರುತ್ತೋ, ಅದು ಜಮೀನಿನ ಮಾಲೀಕನ ಸ್ವತ್ತು ಎಂದು ತಿದ್ದುಪಡಿ ಮಾಡಲಾಗಿದೆ.

ಇದರಿಂದ ರೈತರು ಯಾವುದೇ ಆತಂಕವಿಲ್ಲದೆ ಶ್ರೀಗಂಧ ಬೆಳೆಯಬಹುದು. ಜೊತೆಗೆ ಶ್ರೀಗಂಧ ಬೆಳೆಯಲು ಇಚ್ಛಿಸುವ ರೈತರಿಗೆ ಅರಣ್ಯ ಇಲಾಖೆಯಿಂದ ಸಹಕಾರ ಸಿಗುತ್ತದೆ. ಇದರಿಂದ ರೈತರು ತೋಟಗಳಲ್ಲಿ ಮಿಶ್ರಬೆಳೆಯಾಗಿ ಶ್ರೀಗಂಧ ಬೆಳೆಯಬಹುದು. ನೀಲಗಿರಿ ಮರಗಳ ಹಾವಳಿ ತಪ್ಪಿಸಿ ಶ್ರೀಗಂಧ ಮರ ಬೆಳೆಸುವುದಕ್ಕೆ ಸರ್ಕಾರ ಉತ್ತೇಜನ ನೀಡುತ್ತಿದೆ ಎಂದರು.

ಅರಣ್ಯ ಇಲಾಖೆಯ ಅಧಿಕಾರಿಗಳು ಮನಸ್ಸು ಮಾಡಿದರೇ ಎಂತಹ ಪ್ರದೇಶದಲ್ಲಿಯೂ ಗಿಡಗಳನ್ನು ನೆಟ್ಟು ಸಮೃದ್ಧವಾಗಿ ಬೆಳೆಸಬಹುದೆಂದು ಬೀದರ್?ನ ಅರಣ್ಯ ಇಲಾಖೆಯ ಅಧಿಕಾರಿಗಳು ತೋರಿಸಿಕೊಟ್ಟಿದ್ದಾರೆ. ಬೀದರ್?ನಲ್ಲಿ ಇರುವ ಲಕ್ಷಾಂತರ ಶ್ರೀಗಂಧದ ಗಿಡಗಳ ಪಾಲನೆ, ಪೋಷಣೆ ಮತ್ತು ಉಳಿಸಿಕೊಳ್ಳುವುದು ನಮ್ಮೆಲ್ಲರ ಹೊಣೆಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

## ಜೆಡಿಎಸ್ ಕಚೇರಿಯಲ್ಲಿ ಉದ್ಯಮಿ ಸುಭಾಷ ಗಂಗಾ ಆರೋಪ

## ಗೌಡರ ವಯಕ್ತಿಕ ಪ್ರತಿಷ್ಠೆ; ಜನ ಕಂಗಾಲು




ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್ : ಕ್ಷೇತ್ರ ವ್ಯಾಪ್ತಿಯಲ್ಲಿ ಹಾಲಿ ಶಾಸಕ ಸಿದ್ದು ಗೌಡರ ಹಾಗೂ ಮಾಜಿ ಸಚಿವ ರಾಜಶೇಖರ ಗೌಡರಾದ ಸಹೋದರ ಸಂಬಂಧಿಗಳ ವಯಕ್ತಿ ಪ್ರತಿಷ್ಠೆಗಾಗಿ ಮಾಡುತ್ತಿರುವ ಗುಂಡಾಗಿರಿಯಿಂದ ಕ್ಷೇತ್ರದ ಜನರು ಕಂಗಾಲಾಗಿದ್ದಾರೆ ಎಂದು ಜೆಡಿಎಸ್ ಮುಖಂಡ, ಉದ್ಯಮಿ ಸುಭಾಷ ಗಂಗಾ ಆರೋಪಿಸಿದರು.

ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ಪಕ್ಷದ ವತಿಯಿದ ಭಾನುವಾರ ನಡೆದ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ 93ನೇ ಜನ್ಮದಿನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕ್ಷೇತ್ರವ್ಯಾಪ್ತಿಯಲ್ಲಿ ಸರಕಾರದ ಕಾರ್ಯಕ್ರಮ ಆಯೋಜನೆ ಮಾಡಿದ್ದ ಸಂದರ್ಭದಲ್ಲಿ ಸರಕಾರದ ಯೋಜನೆ ಮತ್ತು ಕಾರ್ಯಕ್ರಮದ ಉದ್ದೇಶ ಜನಸಾಮಾನ್ಯರಿಗೆ ತಿಳಿಸಿಕೊಡಬೇಕು. ಆದರೆ ಇಲ್ಲಿ ಮಾತ್ರ ಎಲ್ಲಾ ಕೆಲಸ ಕಾರ್ಯಗಳು ಉಲ್ಟಾ ಇವೆ. ಇವರ ವಯಕ್ತಿಕ ನಿಂಧನೆಗಳು, ಟೀಕೆ, ಟಿಪ್ಪಣಿ ಮಾಡಿಕೊಳ್ಳಲು ಸರಕಾರಿ ಕಾರ್ಯಕ್ರಮವೇ ಬೇಕಾ ಎಂದು ಪ್ರಶ್ನಿಸಿದರು.

ಹುಮನಾಬಾದ್ ಪಟ್ಟಣ ಬಹಳ ದೊಡ್ಡದಿದೆ. ಹೀಗಾಗಿ ಪಾಟೀಲ್ ಪರಿವಾರದ ಸಹೋದರ ಸಂಬಂಧಿಗಳು ಯಾವುದಾದರೂ ಸ್ಥಳದಲ್ಲಿ ಒಬ್ಬರಿಗೊಬ್ಬರು ಟೀಕೆ, ಟಿಪ್ಪಣಿ ಹಾಗೂ ವಯಕ್ತಿಕ ನಿಂದನೆ ಮಾಡಿಕೊಳ್ಳಿ ಯಾವ ಅಭ್ಯಂತರ ಇರುವುದಿಲ್ಲ. ಖಾಸಗಿ ಸ್ಥಳದಲ್ಲಿದ್ದು, ನಿಮ್ಮ ಮನಸ್ಸಿಗೆ ತೃಪ್ತಿ ಆಗುವಷ್ಟು ನಿಂದನೆ ಮಾಡಿಕೊಳ್ಳಿ. ಆದರೆ ಸರಕಾರದಿಂದ ನಡೆಯುವ ಕಾರ್ಯಕ್ರಮ ಸರಕಾರದ ನಿರ್ದೇಶನದಂತೆ ನಡೆಯುವಂತೆ ನೋಡಿಕೊಳ್ಳುವುದು ಚುನಾಯಿತ ಜನಪ್ರತಿನಿಧಿಗಳ ಜವಾಬ್ದಾರಿಯಾಗಿದೆ ಎಂದು ಸಲಹೆ ನೀಡಿದರು.

ಜೆಡಿಎಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಪುತ್ರ ಮಾಳಗೆ, ಪುರಸಭೆ ಮಾಜಿ ಅಧ್ಯಕ್ಷ ಶೇಖ್ ನಜೀಬೋದ್ದಿನ್, ಮುಖಂಡ ನಿಸಾರ ಅಹ್ಮದ್ ಗಡವಂತಿ, ಜೆಡಿಎಸ್ ಜಿಲ್ಲಾ ಕೋರ್ ಕಮಿಟಿ ಉಪಾಧ್ಯಕ್ಷ ಎಂ.ಡಿ.ಮೈನೋದ್ದಿನ್ ಮಂಜಾ, ಮುಖಂಡ ಪ್ರಭು ಮಾಲೆ ಇದ್ದರು.

## ಪಾಂಡಿಚೇರಿ ವಾಹನ ನೋಂದಣಿ ರದ್ದುಪಡಿಸಿ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಮೇ.19: ಬೀದರ್ ಜಿಲ್ಲೆಯಾದ್ಯಂತ ಓಡಾಟ ನಡೆಸಿರುವ ಪಾಂಡಿಚೇರಿ ವಾಹನಗಳ ನೋಂದಣಿ ರದ್ದುಪಡಿಸಿ ಅವುಗಳ ಓಡಾಟ ನಿಷೇಧಿಸಬೇಕು ಎಂದು ನಮ್ಮ ಕರ್ನಾಟಕ ಸೇನೆ ಜಿಲ್ಲಾ ಘಟಕ ಒತ್ತಾಯಿಸಿದೆ.

ಈ ಕುರಿತು ಪಟ್ಟಣದ ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಸೋಮವಾರ ನಮ್ಮ ಕರ್ನಾಟಕ ಸೇನೆಯ ಜಿಲ್ಲಾಧ್ಯಕ್ಷ ಗಣೇಶ ಪಾಟೀಲ್ ನೇತೃತ್ವದಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಮೂಲಕ ಪ್ರಾದೇಶಿಕ ಸಾರಿಗೆ ಅಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಬೀದರ್ ಜಿಲ್ಲೆಯಲ್ಲಿ ಪಾಂಡಿಚೇರಿ ಪರವಾನಿಗೆ ಹೊಂದಿರುವ ವಾಹನಗಳು ರಾಜರೋಷವಾಗಿ ಓಡಾಟ ನಡೆಸಿವೆ. ಪಾಂಡಿಚೇರಿ ಪರವಾನಿಗೆ ಹೊಂದಿರುವ ವಾಹನ ಮಾಲೀಕರು ನಮ್ಮ ರಾಜ್ಯಕ್ಕೆ ತೆರಿಗೆ ಕಟ್ಟದೆ ವಂಚನೆ ಮಾಡುತ್ತಿದ್ದಾರೆ.

ಸುಳ್ಳು ದಾಖಲೆ ಸೃಷ್ಟಿಸಿ ಪಾಂಡಿಚೇರಿ ಪರವಾನಿಗೆ ಹೊಂದಿರುವ ವಾಹನಗಳನ್ನು ಖರೀದಿಸಿ ಮಾಲೀಕರು ನಮ್ಮ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದ್ದಾರೆ.

ಸಾರಿಗೆ ಅಧಿಕಾರಿಗಳು ಪಾಂಡಿ–ಚೇರಿ ಪರವಾನಿಗೆ ಹೊಂದಿರುವ ವಾಹನಗಳನ್ನು ವಶಕ್ಕೆ ಪಡೆದು ಸಂಬಂಧಿತರ ವಿರುದ್ಧ ಕ್ರಮ ಜರುಗಿಸಬೇಕು. ಪಾಂಡಿಚೇರಿ ವಾಹನಗಳ ಓಡಾಟ ನಿಷೇಧಕ್ಕೆ ವಿಳಂಬ ನೀತಿ ಅನುಸರಿಸಿದರೆ ಮುಂಬರುವ ದಿನಗಳಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಮನವಿ ಪತ್ರದಲ್ಲಿ ಎಚ್ಚರಿಕೆ ನೀಡಲಾಗಿದೆ.

ಈ ಸಂದರ್ಭದಲ್ಲಿ ನಮ್ಮ ಕರ್ನಾಟಕ ಸೇನೆಯ ಯುವ ಘಟಕದ ಜಿಲ್ಲಾಧ್ಯಕ್ಷ ಸುದೀಪ ತೂಗಾವೆ, ತಾಲೂಕು ಅಧ್ಯಕ್ಷ ಬಸವರಾಜ ಕಾರಬಾರಿ, ಪ್ರಧಾನ ಕಾರ್ಯದರ್ಶಿ ಭದ್ರಯ್ಯಸ್ವಾಮಿ, ಸಹ ಕಾರ್ಯದರ್ಶಿಗಳಾದ ಜಗದೀಶ ಪಾಟೀಲ್, ಸಂಗಮೇಶ ಮಾರ್ಗೆ, ಪ್ರಮುಖರಾದ ಸಚಿನ ಪಾಟೀಲ್, ಅನಿಲ ಮಮದಾಗಾವೆ, ಓಂಕಾರ ಪಾಟೀಲ್, ಶಂಕರ ಡೊಂಗರಗೆ, ನಾಗೇಶ ಡೊಂಗರಗೆ, ಶಿವಶಂಕರ ಪಾಟೀಲ್, ಪ್ರವೀಣ ಮದರಗಾಂವೆ ಸೇರಿದಂತೆ ಹಲವರು ಇದ್ದರು.

## ಬೆಂಬಲ ಬೆಲೆ ಯೋಜನೆಯಡಿ ಎಫ್.ಎ.ಕ್ಯೂ.ಗುಣಮಟ್ಟದ ಸೂರ್ಯಕಾಂತಿ ಖರೀದಿ: ರೈತರು ನೋಂದಣಿಗೆ ಸೂಚನೆ

ಕಲಬುರಗಿ,ಮೇ.19:2024–25ನೇ ಸಾಲಿನ ಬೆಂಬಲ ಬೆಲೆ ಯೋಜನೆಯಡಿ ಎಫ್.ಎ.ಕ್ಯೂ. ಗುಣಮಟ್ಟದ ಸೂರ್ಯಕಾಂತಿ ಖರೀದಿಸಲು ಕಲಬುರಗಿ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿಗೆ 01 ಖರೀದಿ ಕೇಂದ್ರದಂತೆ ಜಿಲ್ಲೆಯಲ್ಲಿ ಒಟ್ಟು 11 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಖರೀದಿ ಕೇಂದ್ರಗಳಾಗಿ ಗುರುತಿಸಿದ್ದು, ರೈತ ಭಾಂದವರು ತಮ್ಮ ಸಮೀಪದ ಖರೀದಿ ಕೇಂದ್ರಕ್ಕೆ ಭೇಟಿ ನೀಡಿ ತಾವು ಬೆಳೆದ ಸೂರ್ಯಕಾಂತಿ ಮಾರಾಟಕ್ಕೆ ನೊಂದಾಯಿಸಿಕೊಂಡು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಕಲಬುರಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ತಿಳಿಸಿದ್ದಾರೆ.

ಎಫ್.ಎ.ಕ್ಯೂ. (ಈಂಕಿ) ಗುಣಮಟ್ಟದ ಸೂರ್ಯಕಾಂತಿ ಪ್ರತಿ ಎಕರೆಗೆ 04 ಕ್ವಿಂಟಾಲ್‌ನಂತೆ ಹಾಗೂ ಪ್ರತಿ ರೈತರಿಂದ ಗರಿಷ್ಠ 20 ಕ್ವಿಂಟಾಲ್‌ವರೆಗೆ ಖರೀದಿಸಲು ಬೆಂಬಲ ಬೆಲೆ 7280ರೂ.ನಿಗದಿಪಡಿಸಲಾಗಿದೆ. ಮಾರಾಟದ ಮೊತ್ತವನ್ನು ಡಿ.ಬಿ.ಟಿ. ಮೂಲಕ ರೈತರ ಬ್ಯಾಂಕ ಖಾತೆಗೆ ಜಮಾ ಮಾಡಲಾಗುತ್ತದೆ. ತಕ್ಷಣದಿಂದ ಜಾರಿಗೆ ಬರುವಂತೆ ರೈತರ ನೊಂದಣಿ ಕಾರ್ಯವನ್ನು ಸರ್ಕಾರದ ಆದೇಶದ ದಿನಾಂಕದಿಂದ 80 ದಿನಗಳವರೆಗೆ ಹಾಗೂ ಖರೀದಿ ಪ್ರಕ್ರಿಯೆ ಸರ್ಕಾರದ ಆದೇಶದ ದಿನಾಂಕದಿಂದ 90 ದಿನಗಳವರೆಗೆ ಜರುಗುತ್ತದೆ.

ಸರ್ಕಾರದ ದಿನಾಂಕ: 16–05–2025ರ ಆದೇಶದನ್ವಯ ಮೇ 19 ರಂದು ಸೋಮವಾರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ಮಟ್ಟದ ಟಾಸ್ಕಫೋರ್ಸ್ ಸಭೆಯಲ್ಲಿ ಬೆಂಬಲ ಬೆಲೆ ಯೋಜನೆಯಡಿ ಎಫ್.ಎ.ಕ್ಯೂ ಗುಣಮಟ್ಟದ ಸೂರ್ಯಕಾಂತಿ ಖರೀದಿ ಮಾಡಲು ಸರ್ಕಾರಿ ಆದೇಶದಲ್ಲಿ ಕರ್ನಾಟಕ ಸಹಕಾರ ಎಣ್ಣೆಬೀಜ ಬೆಳೆಗಾರರ ಮಹಾಮಂಡಳ ನಿಯಮಿತ (ಏಔಈ) ಸಂಸ್ಥೆಗೆ ನೋಡಲ್ ಏಜೆನ್ಸಿಗಳನ್ನಾಗಿ ನೇಮಿಸಿದೆ ಎಂದು ಅವರು ತಿಳಿಸಿದ್ದಾರೆ.

### ಶೈಕ್ಷಣಿಕ ಸಾಲಿನ ಬೀಳ್ಕೊಡುಗೆ ಕಾರ್ಯಕ್ರಮ

# ವಿದ್ಯಾರ್ಥಿನಿಯರು ತಮ್ಮ ಭಾವಿ ಜೀವನ ಆನಂದನವನ್ನಾಗಿ ಮಾಡಿಕೊಳ್ಳಲು ಶಿಕ್ಷಣ ದಾರಿದೀಪವಾಗಿದೆ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಮೇ 19–: 2024–25ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ ಕ್ರೀಡಾ ಮತ್ತು ರಾ.ಸೇ.ಯೋ, ಹಾಗೂ ವಿವಿಧ ಘಟಕಗಳ ಕಾರ್ಯ ಚಟುವಟಿಕೆಗಳ ಸಮಾರೋಪ ಸಮಾರಂಭ ಬೀಳ್ಕೊಡುಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಇತ್ತೀಚಿನ ನಡೆದ ಶೈಕ್ಷಣಿಕ ಸಾಲಿನ ಬೀಳ್ಕೊಡುಗೆ ಸಮಾರಂಭದಲ್ಲಿ ಕರ್ನಾಟಕ ಸರ್ಕಾರ ಅಕ್ಕ ಮಹಾದೇವಿ ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀಮತಿ ಶಾಂತಾದೇವಿ.ಟಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇಂದಿನ ಯುವತಿಯರು ಸರಿಯಾದ ಮನೋಭಾವ, ಸರಿಯಾದ ಅವಕಾಶಗಳ ಉಪಯೋಗ, ಹಾಗೂ ಪರಿಶ್ರಮ, ಶ್ರದ್ದೆ, ತಾಳ್ಮೆ, ಜಾಣ್ಮೆ ವಹಿಸಬೇಕೆಂದು ಯುವತಿಯರಿಗೆ ಸಲಹೆ ನೀಡಿದರು. ಸಂಕೋಚದಿಂದ ವಿದ್ಯಾರ್ಥಿನಿಯರು ಹೊರಬಂದು ಕಲಿಕೆಯನ್ನು ಪೂರ್ಣಗೊಳಿಸಿ ವಿದ್ಯಾವಂತ ಜೀವನ ನಡೆಸಬೇಕು ಹಾಗೂ ತನ್ನ ಅರಿವೇ ತನ್ನ ಗುರು ಎಂಬ ಮನೋಭಾವನೆಯನ್ನು ಬೆಳೆಸಿಕೊಳ್ಳಲು ಕರೆ ನೀಡಿದರು.

ಗ್ರಾಮೀಣ ವಿದ್ಯಾರ್ಥಿನಿಯರು ಮನಸ್ಸು ಮಾಡಿದರೆ ಅಸಾಧ್ಯವಾದದ್ದು ಸಾಧಿಸುವ ಕಲೆ ಅವರಲ್ಲಿರುತ್ತದೆ. ಎಲ್ಲಿ ವಿದ್ಯಾರ್ಥಿನಿಯರು ಮೂಡ ನಂಬಿಕೆ ಮತ್ತು ಸಮಾಜದ ಕಟ್ಟಳೆಗಳನ್ನು ಬದಿಗಿಟ್ಟು ಅಧ್ಯಯನ ಮಾಡಿ ಜೀವನದಲ್ಲಿ ಯಶಸ್ವಿ ಹೊಂದಬೇಕೆಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಡಾ.ಹರೀಶ ರಾಥೋಡ ರವರು ವಿದ್ಯಾರ್ಥಿನಿಯರು ಹುಟ್ಟಿದ ಮನೆಗೆ ಕಾಲೇಜಿಗೆ ಹಾಗೂ ಊರಿಗೆ ಕೀರ್ತಿ ತರಬೇಕೆಂದು ತಿಳಿಸಿದರು. ಹಾಗೆಯೆ ವಿದ್ಯಾರ್ಥಿನಿಯರು ತಮ್ಮ ಭಾವಿ ಜೀವನ ಆನಂದನವನ್ನಾಗಿ ಮಾಡಿಕೊಳ್ಳಲು ಶಿಕ್ಷಣ ದಾರಿದೀಪವಾಗಿದೆ. ಹೆಣ್ಣೊಂದು ಕಲಿತರೆ ಸಮಾಜದಲ್ಲಿರುವ ಅನಿಷ್ಟ & ಮೂಡನಂಭಿಕೆಗಳು ಹೋಗ ಲಾಡಿಸಿದಂತೆ ಎಂದು ವಿದ್ಯಾರ್ಥಿನಿಯರಿಗೆ ಕಿವಿಮಾತು ಹೇಳಿದರು. ಕಾರ್ಯಕ್ರಮದಲ್ಲಿ ವಿದ್ಯಾಸಾಗರ.ಬಿ.ಹೂಗಾರ ಸ್ವಾಗತಿಸಿದರು,

ಡಾ.ಅನುಸೂಯಾ ಪಾಟೀಲ್ ನಿರೂಪಿಸಿದರು, ಡಾ.ಉದಯಕುಮಾರ ದೊಡ್ಮನಿ ವಂದಿಸಿದರು. ಈ ಸಂದರ್ಭದಲ್ಲಿ ಉಪನ್ಯಾಸಕರಾದ ಡಾ.ಖಲೀಲ್ ಮಸೂದ್, ರಾಘವೇಂದ್ರ ಭೀಮನಹಳ್ಳಿ ಗುಲಾಬ್ ಸಿಂಗ್, ಶಿವಗಂಗಾ, ವಿಜಯಲಕ್ಷ್ಮೀ, ಉಪಸ್ಥಿತರಿದ್ದರು.

## ಸಾಧನಾ ಸಮಾವೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಶಾಸಕ ನಾಡಗೌಡ ಮನವಿ

ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ:ಕಾಂಗ್ರೆಸ್ ಸರ್ಕಾರದ ಎರಡು ವರ್ಷಗಳ ಅವಧಿಯ ಸಾಧನೆಯ ಸಮರ್ಪಣೆ, ಲಕ್ಷ ಕುಟುಂಬಗಳಿಗೆ ಕಂದಾಯ ಗ್ರಾಮ ಹಕ್ಕು ಪತ್ರ ವಿತರಣೆ ಸಮಾರಂಭ ಮೇ 20ರಂದು ಹೊಸಪೇಟೆಯಲ್ಲಿ ನಡೆಯಲಿದೆ ನಮ್ಮ ಪಕ್ಷದ ಕಾರ್ಯಕರ್ತರು ಹಾಗೂ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಬೇಕು ಎಂದು ಕೆಎಸ್‌ಡಿಎಲ್ ಅಧ್ಯಕ್ಷ, ಶಾಸಕ ಸಿ.ಎಸ್.ನಾಡಗೌಡ (ಅಪ್ಪಾಜಿ) ಮನವಿ ಮಾಡಿಕೊಂಡರು. ಸೋಮವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆದ ಕಾರ್ಯಕರ್ತರ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ ಈ ಸಮಾವೇಶದಲ್ಲಿ ನಮ್ಮ ರಾಷ್ಟ್ರೀಯ ನಾಯಕರಾದ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ರಾಜ್ಯ ಉಸ್ತುವಾರಿ ಸುರ್ಜೆವಾಲಾಜಿ, ಜನಪ್ರಿಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ರಾಜ್ಯ ಹಾಗೂ ರಾಷ್ಟ್ರೀಯ ನಾಯಕರು ಭಾಗವಹಿಸಲಿದ್ದಾರೆ ಎಂದು ತಿಳಿಸಿದ ಅವರು ಮುದ್ದೇಬಿಹಾಳ ಮತಕ್ಷೇತ್ರದಿಂದ



ಸುಮಾರು 5000 ಜನ ಈ ಸಮಾವೇಶದಲ್ಲಿ ಭಾಗವಹಿಸುವ ನಿರೀಕ್ಷೆ ಇದೆ ಇದಕ್ಕಾಗಿ ನಮ್ಮ ಎಲ್ಲ ಕಾರ್ಯಕರ್ತರು ಮುಖಂಡರು ವಿವಿಧ ಘಟಕಗಳ ಮುಖ್ಯಸ್ಥರು ಮಹಿಳಾ ಪದಾಧಿಕಾರಿಗಳು ಹೆಚ್ಚಿನ ಆಸಕ್ತಿ ವಹಿಸಿ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮಾಡಬೇಕು ಎಂದರು. ಸಭೆಯಲ್ಲಿ ಮುಸ್ಲಿಂ ಧಾರ್ಮಿಕ ಮುಖಂಡ ಸೈಯದ್ ಶಕೀಲ್ ಅಹಮದ್ ಖಾಜಿ, ಮುಖಂಡರಾದ ವಿ.ಸಿ.ಹಿರೇಮಠ, ಸಿ.ಬಿ.ಅಸ್ಕಿ, ಸಿದ್ದನಗೌಡ ಪಾಟೀಲ ನಾವದಗಿ, ಪ್ರಭುಗೌಡ ಮದರಕಲ್ಲ, ಬಸನಗೌಡ ಬಗಲಿ, ಶರಣಗೌಡ ದೇಶಮುಖ, ಮಲ್ಲಿಕಾರ್ಜುನ ಪಟ್ಟಣಶೆಟ್ಟಿ, ನೀಲಮ್ಮ ಪಾಟೀಲ, ಪರಶುರಾಮ ತಂಗಡಗಿ, ವೀರೇಶ ಬಾಗೇವಾಡಿ, ಪ್ರಕಾಶ ಪಾಟೀಲ, ಹುಸೇನ ಜಮಾದಾರ, ಪ್ರಕಾಶ ಕಶಟ್ಟಿ, ಸಂಗನಗೌಡ ಅಸ್ಕಿ, ಶಿವರಾಜ ಗುಂಡಕನಾಳ, ಸಿಕಂದರ ವಠಾರ, ಆರ್.ಐ.ಒಂಟಿ, ಎ.ಡಿ.ಯಕೀನ, ಮೆಹಬೂಬ್ ಕೆಂಭಾವಿ, ಕಾಶಿನಾಥ ದೇಸಾಯಿ, ಮುನ್ನಾ ಅರ್ಜುಣಗಿ, ಆಸಿಫ್ ಕೆಂಭಾವಿ, ಗೋಪಾಲ್ ಕಟ್ಟಿಮನಿ, ಬಸ್ಸು ಮಾದರ ಇದ್ದರು.

ಅಫಜಲಪುರ 01 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 02

## ಸಹಾಯಕಿಯರ ಹುದ್ದೆಗಳ ತಾತ್ಕಾಲಿಕ ಪಟ್ಟಿ ಪ್ರಕಟ: ಆಕ್ಷೇಪಣೆ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮೇ.19–2022–23ನೇ ಸಾಲಿಗೆ ಅಫಜಲಪೂರ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಖಾಲಿ ಇರುವ 01 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 02 ಸಹಾಯಕಿಯರ ಹುದ್ದೆಗಳಿಗೆ ಮಹಿಳಾ ಅಭ್ಯರ್ಥಿಗಳಿಂದ ಆಫ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ, ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಅಫಜಲಪೂರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಪ್ರಕಟಿಸಲಾಗಿದೆ ಎಂದು ಅಫಜಲಪೂರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಿಳಿಸಿದ್ದಾರೆ.

ಈ ತಾತ್ಕಾಲಿಕ ಆಯ್ಕೆಪಟ್ಟಿಗೆ ಆಕ್ಷೇಪಣೆಗಳಿದ್ದಲ್ಲಿ 2025ರ ಮೇ 28ರ ಮಧ್ಯಾಹ್ನ 1.30 ಗಂಟೆಯೊಳಗಾಗಿ ಅಫಜಲಪೂರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಬೇಕೆಂದು ಅವರು ತಿಳಿಸಿದ್ದಾರೆ.

ಅಫಜಲಪುರ 16 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 25

## ಸಹಾಯಕಿಯರ ಹುದ್ದೆಗಳ ತಾತ್ಕಾಲಿಕ ಪಟ್ಟಿ ಪ್ರಕಟ: ಆಕ್ಷೇಪಣೆ ಆಹ್ವಾನ

ಕಲಬುರಗಿ,ಮೇ.19–2024–25ನೇ ಸಾಲಿಗೆ ಅಫಜಲಪೂರ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಖಾಲಿ ಇರುವ 16 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 25 ಸಹಾಯಕಿಯರ ಹುದ್ದೆಗಳಿಗೆ ಮಹಿಳಾ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ, ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಅಫಜಲಪುರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯ ಸೂಚನಾಫಲಕದಲ್ಲಿ ಪ್ರಕಟಿಸಲಾಗಿದೆ ಎಂದು ಅಫಜಲಪುರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಿಳಿಸಿದ್ದಾರೆ.

ಸದರಿ ತಾತ್ಕಾಲಿಕ ಆಯ್ಕೆಪಟ್ಟಿಗೆ ಆಕ್ಷೇಪಣೆಗಳಿದ್ದಲ್ಲಿ 2025ರ ಮೇ 28ರ ಮಧ್ಯಾಹ್ನ 1.30 ರೊಳಗಾಗಿ ಅಫಜಲಪುರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಬೇಕೆಂದು ಅವರು ತಿಳಿಸಿದ್ದಾರೆ.

# ಮೇ 21 ರಿಂದ ಶ್ರೀ ದುರ್ಗಾ ದೇವಿ ಜಾತ್ರಾ ಮಹೋತ್ಸವ

ಮಲ್ಲಮ್ಮ ನುಡಿ ವಾರ್ತೆ

ಕುಕನೂರ:ತಾಲೂಕಿನ ಮಂಡಲಗಿರಿ ಗ್ರಾಮದ ಶ್ರೀ ದುರ್ಗಾದೇವಿ ಜಾತ್ರಾ ಮಹೋತ್ಸವ ದಿನಾಂಕ 21 ಮೇ 2025ರಿಂದ 23 ಮೇ 2025 ತನಕ 3 ದಿನಗಳ ಕಾಲ ವಿಜೃಂಭಣೆಯಿಂದ ಜರಗುವುದು ಎಂದು ಶ್ರೀ ದುರ್ಗಾದೇವಿ ದೇವಸ್ಥಾನ ಸಮಿತಿಯವರು ತಿಳಿಸಿರುತ್ತಾರೆ.

ಪ್ರತಿ ಮೂರು ವರ್ಷಕ್ಕೊಮ್ಮೆ ಶ್ರೀ ದುರ್ಗಾದೇವಿ ಜಾತ್ರಾ ಮಹೋತ್ಸವ ಮೇ 21 ರಿಂದ ಬುಧವಾರ ರಾತ್ರಿ 9 ಗಂಟೆಗೆ ಶ್ರೀದೇವಿಯ ಕಂಕಣ ಕಟ್ಟುವ ಕಾರ್ಯಕ್ರಮದೊಂದಿಗೆ ಪ್ರಾರಂಭವಾಗಿ 22ನೇ 2025 ನೆಯ ಗುರುವಾರ ಶ್ರೀ ದೇವಿಯ ಪಲ್ಲಕ್ಕಿ ಉತ್ಸವ ಹಾಗೂ ಅಗ್ನಿಸ್ಪರ್ಶ ಕಾರ್ಯಕ್ರಮ ಜರುಗುವುದು. ನಂತರ 23 ಮೇ 2025ನೆಯ ಶುಕ್ರವಾರ ಬೆಳಗ್ಗೆ ನಾಲ್ಕು ಗಂಟೆಯಿಂದ 6:30 ಗಂಟೆಯವರೆಗೆ ಅಗ್ನಿಪರ್ಶ ಹಾಗೂ ಮಧ್ಯಾಹ್ನ 1 ಗಂಟೆಗೆ ಅನ್ನಸಂತರ್ಪಣೆ, ಸಾಯಂಕಾಲ ಮೂರು ಗಂಟೆಯ ನಂತರ



ಮರಿ ಹೋಳಿಗೆ ಹೋಗುವ ಕಾರ್ಯಕ್ರಮ ಜರುಗಿದಿದ್ದು ಶ್ರೀ ದುರ್ಗಾದೇವಿಯ ಸಕಲ ಸದ್ಭಕ್ತರು ಈ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಶ್ರೀದೇವಿಯ ಕೃಪೆಗೆ ಪಾತ್ರರಾಗಬೇಕು ಎಂದು ವಿನಂತಿಸಿಕೊಂಡಿರುತ್ತಾರೆ.

ಶ್ರೀ ದುರ್ಗಾದೇವಿ ಜಾತ್ರಾ ಮಹೋತ್ಸವದ ಪ್ರಯುಕ್ತ 23 ಮೇ 2025ನೇ ಶುಕ್ರವಾರ ರಾತ್ರಿ 10:00ಗೆ ಗ್ರಾಮದ ಕಲಾವಿದರಿಂದ ಅನ್ನ ಕೊಟ್ಟ ರೈತನಿಗೆ ಸಾವು ಕೊಟ್ಟ ಸರ್ಕಾರ ಎಂಬ ಸಾಮಾಜಿಕ ನಾಟಕವನ್ನು ಉಚಿತವಾಗಿ ಪ್ರದರ್ಶನ ಮಾಡಲಾಗುವುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಂಗಮರು ಜಾತಿ ಗಣತಿಯಲ್ಲಿ ಬೇಡ ಜಂಗಮ ಎಂದು ನಮೂದಿಸಿ : ರವಿ ಹಿರೇಮಠ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ಜಿಲ್ಲೆಯ ಕುಕನೂರು ಪಟ್ಟಣದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಕರ್ನಾಟಕ ರಾಜ್ಯ ಬೇಡ ಜಂಗಮ ಸಂಘಟನೆಯ ಕಾರ್ಯದರ್ಶಿ ರವಿ ಹಿರೇಮಠ ಮಾತನಾಡುತ್ತಾ ಮೂಲತಃ ಜಂಗಮರು ಭಿಕ್ಷಾಟನೆ ಮತ್ತು ಧಾರ್ಮಿಕ ಪ್ರಚಾರ ಕಾರ್ಯ ಮಾಡುತ್ತಾ ಬದುಕು ಕಟ್ಟಿಕೊಳ್ಳುತ್ತಾ ಸಾಗಿಬಂದಿದ್ದು ಇಂದಿಗೂ ಸಹ ಬಹುತೇಕರು ನಮ್ಮ ಕುಲಕಸಬನ್ನೇ ನಂಬಿ ಜೀವನ ಸಾಗಿಸುತ್ತಾ ಬಂದಿದ್ದು ಸೌಲಭ್ಯ ವಂಚಿತರಾಗಿ ಬದುಕುತ್ತಿದ್ದೇವೆ.



ಆದ್ದರಿಂದ ಬಡವರ್ಗದಿಂದ ಕೂಡಿದ ಜಂಗಮ ಸಮುದಾಯದ ಮಕ್ಕಳ ಶೈಕ್ಷಣಿಕ ಸೇರಿದಂತೆ ಇನ್ನಿತರ ಸೌಲಭ್ಯ ಪಡೆದುಕೊಳ್ಳುವ ಉದ್ದೇಶಕ್ಕಾಗಿ ಸರ್ಕಾರ ನಡೆಸುತ್ತಿರುವ ಜಾತಿಗಣಿತಿ ಸಮೀಕ್ಷೆಯಲ್ಲಿ ಕಾಲಂ 19ರಲ್ಲಿ ಜಾತಿಯನ್ನು ಬೇಡ ಜಂಗಮ ಎಂದು ನಮೂದಿಸುತ್ತ ಬಿಕ್ಷಾಟನೆ ಅಥವಾ ಕೂಲಿ ಕಾಯಕವನ್ನು ನಮೂದಿಸಬೇಕು ಎಂದು ಜಂಗಮ ಬಾಂಧವರಿಗೆ ಕರೆ ನೀಡಿದರು.

ಜನಗಣತಿ ಸಮೀಕ್ಷೆ ಕಾರ್ಯವನ್ನು ಸರಕಾರ ಮೇ 25 ರವರೆಗೆ ವಿಸ್ತರಿಸಿದ್ದು ಇದರ ಸದುಪಯೋಗವನ್ನು ಪ್ರತಿಯೊಬ್ಬರು ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಈ ವೇಳೆಯಲ್ಲಿ ಜಂಗಮ ಸಮಾಜದ ಕುಕನೂರು ತಾಲೂಕ ಅಧ್ಯಕ್ಷ ಮಹೇಶ ಕಲ್ಮಠ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

# ಸಾಧಕರಿಗೆ ಸನ್ಮಾನ

ಕಲಬುರಗಿ:ಮೇ.19: ನಗರದ ಕನ್ನಡ ಭವನದಲ್ಲಿ ಜೈ ಕನ್ನಡಿಗರ ರಕ್ಷಣಾ ವೇದಿಕೆ ರಾಜ್ಯ ಘಟಕ ಹಾಗೂ ಸನರೈಸ್ ಆಸ್ಪತ್ರೆ ವತಿಯಿಂದ ಮಹಾತ್ಮ ಗೌತಮ ಬುದ್ಧ ಮತ್ತು ವಿಶ್ವಗುರು ಬಸವಣ್ಣ ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಬುದ್ಧ ಬಸವ, ಅಂಬೇಡ್ಕರ್ ರತ್ನ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಡಾ. ಐ. ಎಸ್. ವಿದ್ಯಾಸಾಗರ, ವಿಜಯಕುಮಾರ ತೇಗಲತಿಪ್ಪಿ, ರಾಜಕುಮಾರ ಪಾಟೀಲ, ಜೈ ಕನ್ನಡಿಗರ ರಕ್ಷಣಾ ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಸಚಿನ ಫರತಾಹಾಬಾದ, ಶರಣಗೌಡ ಅಲ್ಲಮಪ್ರಭು ಪಾಟೀಲ, ವಿಜಯಕುಮಾರ ಕಟ್ಟಿಮನಿ, ಸುರೇಶ ಬಡಿಗೇರ, ಧೂಳಪ್ಪ ದೊಡ್ಡಮನಿ, ಎಮ್.ಡಿ. ಸಿದ್ದಿಕ್ಕಿ, ಸುರೇಶ ಹನಗುಡಿ, ಲಕ್ಷ್ಮಣ ಮೂಲಭಾರತಿ, ಅಕ್ಷಯ, ಗುಡುಸಿಂಗ್, ಸತಿಶ ಫರತಾಹಾಬಾದ ಮಲ್ಲಿಕಾರ್ಜುನ ನಿಲೂರೆ ಸೇರಿದಂತೆ ಇತರರು ಇದ್ದರು.

# ಯಾದಗಿರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಅಣಕು ಪ್ರದರ್ಶನ ಯಶಸ್ವಿ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ್

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ ಮೇ.19:–ಕೇಂದ್ರ ಹಾಗೂ ರಾಜ್ಯ ಗೃಹ ಸಚಿವಾಲಯದ ಸೂಚನೆ ಮೇರೆಗೆ ಹಮ್ಮಿಕೊಳ್ಳಲಾದ ಆಪರೇಷನ್ ಅಭ್ಯಾಸ ಹೆಸರಿನ ಅಣಕು ಪ್ರದರ್ಶನವನ್ನು ನಗರದಲ್ಲಿಂದು ಯಶಸ್ವಿಯಾಗಿ ಹಮ್ಮಿಕೊಳ್ಳಲಾಯಿತು ಎಂದು ನಗರ ಶಾಸಕರಾದ ಚನ್ನಾರೆಡ್ಡಿ ಪಾಟೀಲ್ ತುನ್ನೂರ್ ಅವರು ಹೇಳಿದರು.



ಯಾದಗಿರಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಇಂದು ಜಿಲ್ಲಾಡಳಿತ, ಜಿಲ್ಲಾ ಪೋಲಿಸ್ ಇಲಾಖೆ, ಆರೋಗ್ಯ ಇಲಾಖೆ, ಅಗ್ನಿಶಾಮಕ ದಳ, ಕಲ್ಬುರ್ಗಿ ಎಸ್ ಡಿ ಆರ್ ಎಫ್ ತಂಡ, ಜೆಸ್ಕಾಂ, ಲೋಕೋಪಯೋಗಿ, ಕ್ರೀಡಾ ಇಲಾಖೆ, ಎನ್.ಎಸ್. ಎಸ್ ಹಾಗೂ ,ಎನ್ ಸಿ ಸಿ ಮತ್ತು ಆಶಾ ಕಾರ್ಯಕರ್ತೆಯರ ತಂಡಗಳ ಅಣಕು ಪ್ರದರ್ಶನ ವೀಕ್ಷಿಸಿ ಅವರು ಮಾತನಾಡಿದರು.

ಇತ್ತೀಚೆಗೆ ಪಹಲ್ಗಾಮ್ದಲ್ಲಿ ಅಮಾಯಕರ ಮೇಲಾದ ದಾಳಿ ಹೇಯ ಕೃತ್ಯವಾಗಿದೆ. ಇಂತಹ ದಾಳಿಗಳು ಹಾಗೂ ಯುದ್ಧದಂತಹ ಸಂದರ್ಭದಲ್ಲಿ ನಡೆಯುವ ದಾಳಿಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಇಂತಹ ಮಾಕ್ ಡ್ರಿಲ್ ಹವಿ ್ಮಕೊಳ್ಳಲಾಗಿದ್ದು, ಸಾರ್ವಜನಿಕ 'ರು ಸದಾ ಎಚ್ಚರಿಕೆಯಿಂದ ಇರುವಂತೆ ಸಲಹೆ ನೀಡಿದರು.

ಯುದ್ಧ ಹಾಗೂ ಭಯೋತ್ಪಾದನೆ ದಾಳಿಗಳ ನಿಯಂತ್ರಣಕ್ಕೆ ನಮ್ಮ ರಕ್ಷಣಾ ಪಡೆಗಳು ಸಶಕ್ತವಾಗಿವೆ. ಭಾರತೀಯರು ಒಳ್ಳೆಯವರು. ಹೀಗಾಗಿ ದೇವರ ಕೃಪೆಯಿಂದ ಎಲ್ಲರ ರಕ್ಷಣೆಯಾಗಲಿದೆ. ಪಾಕ್ ವಿರುದ್ಧದ ಯುದ್ದದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳ ಹಾಗೂ ರಕ್ಷಣಾ ಸಚಿವರ ನಿರ್ಧಾರಕ್ಕೆ ಎಲ್ಲ ಜನಪ್ರತಿನಿಧಿಗಳು ಸೇರಿದಂತೆ ಎಲ್ಲರೂ ಒಕ್ಕೊರಲಿನ ಸಹಕಾರ ನೀಡಿದ್ದೇವೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಡಾ.ಸುಶೀಲ.ಬಿ ಅವರು ಮಾತನಾಡಿ ಯುದ್ಧ, ಯುದ್ದದಂತಹ ಸಂದರ್ಭ ಎದುರಿಸಲು, ಉಗ್ರರ ದಾಳಿ ನಿಯಂತ್ರಣ ಹಾಗೂ ದಾಳಿ ನಂತರ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಇಂದು ಜಾಗೃತಿ ಮೂಡಿಸುವಲ್ಲಿ ಅಣಕು ಪ್ರದರ್ಶನ ಯಶಸ್ವಿಯಾಗಿದೆ. ಇದಕ್ಕಾಗಿ ವಿವಿಧ ತಂಡಗಳಿಗೆ ಅಭಿನಂದನೆ ಸಲ್ಲಿಸಿದರು.

ವಿವಿಧ ಇಲಾಖೆಗಳ ತಂಡಗಳ ಮೂಲಕ ತುರ್ತು ಸಂದರ್ಭದಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಅರಿವು ಮೂಡಿಸಲಾಗಿದೆ. ನಾಗರೀಕ ರೂ ಇಂತಹ ಸ್ಥಿತಿ ನಿರ್ವಹಿಸಲು ಪೂರ್ವಭಾವಿಯಾಗಿ ಸಿದ್ದರಿರುವಂತೆ ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಅವರು ಉಗ್ರರ ದಾಳಿ ನಿಯಂತ್ರಣ ಹಾಗೂ ಯುದ್ಧ ಯುದ್ದದಂತಹ ಸಂದರ್ಭ ಎದುರಿಸಲು ತುರ್ತಾಗಿ ತಂಡಗಳು ಕಾರ್ಯಾಚರಣೆ ನಡೆಸಿ ಕಡಿಮೆ ಅವಧಿಯಲ್ಲಿ ಕಡಿಮೆ ಜೀವಹಾನಿ ಹಾಗೂ ಗಾಯಾಳುಗಳಿಗೆ ತುರ್ತು ಚಿಕಿತ್ಸೆ ಒದಗಿಸುವ ಮತ್ತು ತಪ್ಪಿತಸ್ಥ ಭಯೋತ್ಪಾದಕರನ್ನು ಸೆರೆ ಹಿಡಿಯುವ ಕಾರ್ಯಾಚರಣೆ ಮತ್ತು ಪೂರ್ವಾಭ್ಯಾಸ ಇದಾಗಿದೆ. ಸಾರ್ವಜನಿಕರೂ ಸಹ ಸದಾ ಎಚ್ಚರಿಕೆಯಿಂದ ಇರುವಂತೆ ಸಲಹೆ ನೀಡಿದರು.

ಸಂಪೂರ್ಣ ಅಣಕು ಪ್ರದರ್ಶನ ನಿರ್ವಹಣೆಯನ್ನು ಡಿ.ವೈ.ಎಸ್ಪಿ ಭಾರತ ಕುಮಾರ್ ವಹಿಸಿಕೊಂಡಿದ್ದರು. ಭಯೋತ್ಪಾನೆ ,ಡ್ರೋನ್ ದಾಳಿ, ನಂತರ ಪೋಲಿಸ್ ಇಲಾಖೆ, ಅಗ್ನಿಶಾಮಕ ಇಲಾಖೆ, ಎಸ್ ಡಿ ಆರ್, ಎಫ್ ತಂಡ, ಬಾಂಬ್ ಸ್ಕ್ವಾಡ್ ತಪಾಸಣಾ ತಂಡ, ಗಳ ಕಾರ್ಯಾಚರಣೆ ಗಮನ ಸೆಳೆದವು.

ಸೇರಿದಂತೆ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ

ಸಂಜೆ 4:30ಕ್ಕೆ ಬಾಂಬ್ ಬ್ಲಾಸ್ಟ್ ಮಾಡಿದ ನಂತರ ಮೊದಲ ತುರ್ತು ಪರಿಸ್ಥಿತಿ ಎಚ್ಚರಿಕೆ ಸೈರನ್ ಶಬ್ದ ಮೊಳಗಿಸಲಾಯಿತು. ಎರಡನೇ ಸೈರನ್ ಶಬ್ದವು ಬೆಂಕಿ ಅವಘಡ ಸಂಭವಿಸಿದ ನಂತರ ಮೊಳಗಿಸಲಾಯಿತು. ಸೈರನ್ ಮೊಳಗಿದ ಕೂಡಲೇ ನಾಗರಿಕರು ಕೈಗೊಳ್ಳಬೇಕಾದ ಎಚ್ಚರಿಕೆ ಹಾಗೂ ದುರ್ಘಟನೆಯಲ್ಲಿ ಸಿಲುಕಿರುವ ನಾಗರಿಕರನ್ನು ಸುಸಜ್ಜಿತ ಸ್ಥಳಕ್ಕೆ ಸ್ಥಳಾಂತರಿಸಲಾಯಿತು. ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಿಬ್ಬಂದಿ ಅಧಿಕಾರಿಗಳು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ರಕ್ಷಣಾ ಕಾರ್ಯಾಚರಣೆ ಕೈಗೊಂಡರು. ಆರೋಗ್ಯ ಇಲಾಖೆಯಿಂದ ತುರ್ತಾಗಿ ಅಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಗಾಯಾಳುಗಳನ್ನು ರವಾನಿಸಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಗೆ ಒಳಪಡಿಸಲಾಯಿತು. ನಂತರ ಉಗ್ರರ ರನ್ನು ಬಂಧಿಸುವುದು ಕಾನೂನು ರೀತ್ಯಾ ಪ್ರಕ್ರಿಯೆ ನಡೆಸುವ ವರದಿ ಜಿಲ್ಲಾಧಿಕಾರಿಗಳಿಗೆ ಹಾಗೂ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳ ಗಮನಕ್ಕೆ ತರುವ ಮೂಲಕ ಮುಕ್ತಾಯಗೊಳಿಸಲಾಯಿತು.

**ಅಣಕು ಪ್ರದರ್ಶನ (ಮಾಕ್ ಡ್ರಿಲ್) ಹೀಗಿತ್ತು.**

ಭಾರತ ಮತ್ತು ಪಾಕಿಸ್ತಾನ ನಡುವೆ ಯುದ್ದ ಹಿನ್ನಲೆಯಲ್ಲಿ ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ಯುದ್ಧದ ಕುರಿತು ಅಣುಕು ಪ್ರದರ್ಶನ ಕಣ್ಣಿಗೆ ಕಟ್ಟುವಂತೆಯೆ ಜಿಲ್ಲಾಡಳಿತ ಮತ್ತು ಜಿಲ್ಲಾ ಇಲಾಖೆ ಪ್ರದರ್ಶಿಸಿತು. ಎಂದಿನಂತೆಯೇ ಭಾನುವಾರ ಸಂಜೆ 4 ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ನೂರಾರು ಸಾರ್ವಜನಿಕರು ವಿವಿಧ ಆಟಗಳಲ್ಲಿ ತೊಡಗಿದರೇ ಇನ್ನೂ ಕೆಲವರು ವಾಕಿಂಗ ಮಾಡುತ್ತಿದ್ದರು.

ಅಷ್ಟರಲ್ಲಿಯೇ ಪೊಲೀಸ್ ವಾಹನಗಳು ಅಂಬುಲೆನ್ಸ್‌ಗಳು, ಅಗ್ನಿ ಶಾಮಕದ ವಾಹನಗಳು, ಗೃಹ ರಕ್ಷಕ ದಳ ಸಿಬ್ಬಂದಿಗಳು, ಎಸ್ಡಿಆರ್ ಎಫ್ ಸಿಬ್ಬಂದಿ ಎನ್ ಸಿಸಿ, ಆಶಾ ಕಾರ್ಯಕರ್ತರು ಹೀಗೆ ಎಲ್ಲರೂ ಮೈದಾನದೊಳಗೆ ಜಮಾಗೊಂಡರು. ಅಲ್ಲಿಂದ ಜನರನ್ನು ನೋಡಿದವರೇ ಜಿಲ್ಲಾ ಪೊಲೀಸ್ ಇಲಾಖೆಯಿಂದ ಮೈಕ್ ಮೂಲಕ ಸಂದೇಶ ಪ್ರಚಾರ ಮಾಡಲಾಯಿತು. ಮೈದಾನದಲ್ಲಿ ಇರುವ ಜನರೇ ಇತ್ತ ಗಮನವಿಟ್ಟು ಕೇಳಿ, ಇಲ್ಲಿ ಉಗ್ರರು ಬಾಂಬ್ ದಾಳಿಯಾಗುತ್ತದೆ ಎಂಬ ಮಾಹಿತಿ ಬಂದಿದೆ. ಕಾರಣ ಯಾರು ಗಾಬರಿಯಾಗದೇ ಎಲ್ಲರೂ ಇಲ್ಲಿನ ಸುರಕ್ಷಿತ ಜಾಗಕ್ಕೆ ಹೋಗಿ ಎಂದು ಹೇಳುತ್ತಲೇ ಪೊಲೀಸ್ ಜೀಪ್ ಗಳು ಸೈರನ್ ಮೂಲಕ ಎಚ್ಚರ ಮೂಡಿಸಿದಚು. ಅಪ್ಪಿ, ತಪ್ಪಿ ಬಾಂಬ್ ದಾಳಿಯಾದರೇ ಅದಕ್ಕೆ ಎಲ್ಲ ಸುರಕ್ಷಿತ ಕ್ರಮಗಳನ್ನು ಮಾಡಲಾಗಿದೆ ಎಂದು ಹೇಳುವಷ್ಟರಲ್ಲಿಯೇ ಉಗ್ರರು ಅಲ್ಲಿಂದ ಕಟ್ಟಡದ ಮೇಲೆ ಬಾಂಬ್ ದಾಳಿ ಆರಂಭಿಸಿದರು.

ಏನು ನಡೆಯುತ್ತಿದೆ, ಎಲ್ಲಿ ಬಾಂಬ್ ಬೀಳುತ್ತಿದೆ ಎಂಬ ವಿಚಾರಕ್ಕೂ ಆಸ್ಪದ ಕೊಡದೇ ನಿರಂತರ ಬಾಂಬ್ ದಾಳಿ ಮಾಡಲಾಯಿತು. ಅಲ್ಲಿ ಸೇರಿದ್ದ ಅನೇಕರು ನೆಲಕ್ಕೆ ಉರುಳಿದರು. ಕಿರುಚಾಟ, ಕೂಗಾಟ ಆರಂಭವಾಯಿತು. ಆದರೂ ದಾಳಿ ನಡೆದೇ ಇತ್ತು. ಸುಮಾರು ಹತ್ತು ನಿಮಿಷಕ್ಕೂ ಹೆಚ್ಚು ಕಾಲ ನಡೆಸ ದಾಳಿಯಲ್ಲಿ ಸುಮಾರು 12 ಜನರು ಗಂಭಿರವಾಗಿ ಗಾಯಗೊಂಡು ಸ್ಥಳದಲ್ಲಿಯೇ ಮೃತಪಟ್ಟರು. ಇನ್ನೂ ಅನೇಕರು ಗಾಯಗೊಂಡರು. ಕೂಡಲೇ ಅಲರ್ಟ ಆದ ಪೊಲೀಸ್ ಇಲಾಖೆ ಸೇರಿದಂತೆಯೇ ವಿವಿಧ ಇಲಾಖೆಯ ರಕ್ಷಣಾ ಸಿಬ್ಬಂದಿ ಮೈದಾನಗಳುಗೆ ನುಗ್ಗಿದ್ದರು. ಅಂಬುಲೆನ್ಸ್‌ಗಳು ದಾವಿಸಿ ಬಂದವು. ಅಲ್ಲಿಯೇ ಇದ್ದ ವೈದ್ಯಕೀಯ ತಂಡ ಗಾಯಾಗಳಿಗೆ ಚಿಕಿತ್ಸೆಗೆ ಮುಂದಾದರು. ಅಗ್ನಿಶಾಮಕ ದಳದವರು ಬಾಂಬ್ ದಾಳಿಯಿಂದ ಹಾನಿಯಾದ ಕಟ್ಟಡದಲ್ಲಿನ ಬೆಂಕಿ ನಂದಿಸಿದರು.

ನೂರಾರು ಪೊಲೀಸರು, ಪೊಲೀಸ್ ವಾಹನಗಳು ಮೈದಾನದಲ್ಲಿ ಜಮಾಗೊಂಡು ಜನರನ್ನು ಸುರಕ್ಷಿತ ಸ್ಥಳಗಳಿಗೆ ಕರೆದು–ಕೊಂಡು ಹೊದರು. ಮೈದಾನದಲ್ಲಿ ಅಸುನೀಗಿದರ ತ್ನಮ್ಮಳ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತು. ಯುವಕರು, ಮಕ್ಕಳು ಬಾಂಬ್ ದಾಳಿಗೆ ದಿಕ್ಕೆಟ್ಟು ಓಡಿಹೋಗುವ ದೃಶ್ಯ ಸಾಮಾನ್ಯವಾಗಿತ್ತು. ಹೀಗೆ 40 ನಿಮಿಷಗಳ ಒಟ್ಟಾರೆ ಈ ಕಾರ್ಯಚರಣೆ ಅಣಕು ಪ್ರದರ್ಶನ ಆಕ್ರಮಣಕಾರರ ದಾಳಿ ಹೇಗಿರುತ್ತದೆ ಎಂಬುವುದನ್ನು ಕಟ್ಟಿಗೆ ಕಟ್ಟಿಗೆ ಕಟ್ಟಿದಂತೆಯೇ ಪ್ರದರ್ಶನ ಮಾಡುವ ಮೂಲಕ ನೋಡುಗರ ಮೈ ಜುಮ್ಮೆನ್ನುಸುವಂತೆಯೇ ನಡೆಯಿತು. ಎಲ್ಲವೂ ಟೈಮಿಂಗ್ ಪ್ರಕಾರವೇ ಮಾಡಲಾಯಿತು. ಕಂದಾಯ ಇಲಾಖೆ ಈ ಕೆಲಸಕ್ಕೆ ಭಾರಿ ಸಹಾಯ ಮಾಡಿತ್ತು. ಕಳೆದ ಮೂರು ದಿನಗಳಿಂದ ಜಿಲ್ಲಾಡಳಿತ, ಜಿಲ್ಲಾ ಪೊಲಿಸ್ ಇಲಾಖೆ ಹಾಗೂ ವಿವಿಧ ಇಲಾಖೆ ಸಿಬ್ಬಂದಿ ಮಾಡಿದ ತಾಲಿಮು ಅತ್ಯಂತ ಯಶಸ್ಸಿಯಾಯಿತು.


ಇಡಿ ಈ ಅಣಕು ಪ್ರದರ್ಶನದ ಕಾರ್ಯಕ್ರಮವನ್ನು ಡಿವೈಎಸ್ ಪಿ ಭರತಕುಮಾರ ನಿರೂಪಿಸಿ, ನಿಭಾಯಿಸಿ ಎಲ್ಲವೂ ಟೈಮಿಂಗ್ ಪ್ರಕಾರ ಮಾಡಿಸಿದ್ದು ಗಮನ ಸೆಳೆಯಿತು. ಸ್ಥಳದಲ್ಲಿಯೇ ಉಗ್ರರನ್ನು ಹಿಡಿದ ಪೊಲೀಸ್ ಅಧಿಕಾರಿಗಳು. ಬಾಂಬ್ ದಾಳಿ ನಡೆಸಿ ಪರಾರಿಯಾಗಲು ಯತ್ನಿಸಿ ಮೈದಾನದ ಕಟ್ಟಡವೊಂದರಲ್ಲಿ ಅವಿತು ಕುಳಿತಿದ್ದ ಇಬ್ಬರು ಉಗ್ರರಾದ ಅಜಮೋದ್ದಿನ್ ಮತ್ತು ರುಕ್ಕಮೊದ್ದಿನ್ ಎಂಬ ಉಗ್ರರರನ್ನು ಪೊಲೀಸ್ ಅಧಿಕಾರಿಗಳಾದ ರಮೇಶ, .. ನೇತೃತ್ವದ ತಂಡ ಹುಡುಕಿ ಹೆಡೆಮುರಗಿ ಕಟ್ಟಿ ಎಳೆದು ತಂದು ಬಾಯಿ ಬಿಡಿಸಿದರು. ಆಗ ಅವರು ಜಮ್ಮು ಕಾಶ್ಮೀರದವರೆಂದು ಬಾಯಿ ಬಿಟ್ಟರು. ಅವರಲ್ಲಿ ಪಿಸ್ತೂಲ್ ಸೇರಿದಂತೆಯೇ ಇತರೆ ವಸ್ತುಗಳನ್ನು ವಶಪಡಿಸಿಕೊಂಡು ಬಂಧಿಸಿದರು. ಅಪರ ಜಿಲ್ಲಾಧಿಕಾರಿ ಶರಣಬಸಪ್ಪ ಕೋಟೆಪ್ಪಗೋಳ, ಸಹಾಯಕ ಆಯುಕ್ತ ಹಂಪಣ್ಣ ಸಜ್ಜನ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಉರ್ದು ಮಾಧ್ಯಮ;ಹೆಚ್ಚು ಅಂಕ ಪಡೆದ ನಾಜ್ಮಿನಗೆ ಸನ್ಮಾನ

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ತಾಲೂಕಿನ ಮುಸ್ತರಿ ಗ್ರಾಮದ ಕೂಲಿ ಕಾರ್ಮಿಕ ಮೌಲಾನ ಸಾಬ್ ಅವರ ಮಗಳು ನಾಜ್ಮಿನ್ 2024-25ನೇ ಸಾಲಿನ ಎಸ್ ಎಸ್ ಎಲ್ ಸಿ ವಾರ್ಷಿಕ ಪರೀಕ್ಷೆಯ ಉರ್ದು ಮಾಧ್ಯಮದಲ್ಲಿ ಶೇಕಡಾ 75% ಪ್ರತಿಶತ ಅಂಕ ಪಡೆದು ಉತ್ತೀರ್ಣಗೊಂಡಿದ್ದಾರೆ. ಪಟ್ಟಣದ ಸರ್ಕಾರಿ ಕನ್ಯಾ ಪ್ರೌಢ ಕನ್ನಡ & ಉರ್ದು ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ನಾಜ್ಮಿನ್ ತಂದೆ ಮೌಲಾನ ಸಾಬ್ ಹುಡಗಿ 625ಕ್ಕೆ 467ಶೇಕಡಾ 75 % ಅಂಕ ಗಳಿಸಿದ ವಿದ್ಯಾರ್ಥಿನಿ ತಾಲೂಕಿನ ಮುಸ್ತರಿ ಗ್ರಾಮದ ಕೂಲಿ ಕಾರ್ಮಿಕ ಮೌಲಾನಾಸಾಬ್ ಅವರ ಪುತ್ರಿ ನಾಜ್ಮಿನ್ ಮೌಲಾನ ಸಾಬ್ ದಿನ ನಿತ್ಯ ಕೂಲಿ ಕೆಲಸ ಮಾಡಿ ಮಗಳಿಗೆ ಒಳ್ಳೆಯ ಶಿಕ್ಷಣ ನೀಡಿದ್ದಾರೆ. ಬಡತನದ ಮಧ್ಯೆ ದಿನ ನಿತ್ಯ ಸುಮಾರು 6 ಕಿಲೋ ಮೀಟರಯಿಂದ ಶಾಲೆ ಬಂದು ಸತತವಾಗಿ ಅಭ್ಯಾಸ ಮಾಡಿ, ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ 625ಕ್ಕೆ 467 ಅಂಕ ಗಳಿಸಿ ಸಾಧನೆ ಮಾಡಿದ್ದಾಳೆ. ಉರ್ದು ಮಾಧ್ಯಮದಲಿಯೇ 625ಕ್ಕೆ 4 ಶೇಕಡಾ 75 % ಅಂಕಗಳು ಪಡೆದು ಶಾಲೆಗೆ ಕೀರ್ತಿ ತಂದಿದ್ದ ಪ್ರಯುಕ್ತ ಶಾಲೆಯ ಹಿರಿಯ ಶಿಕ್ಷಕ ಸಂಜೀವನ ಭೋಸ್ಲೆ, ಹಸನ್, ಸಮಾಜ ಕಾರ್ಯಕರ್ತ ಮಹಮ್ಮದ್ ಅಸ್ಲಾಂಮಿಯಾ, ಅವರು ರವಿವಾರ ವಿದ್ಯಾರ್ಥಿಯ ಮನೆಗೆ ಭೇಟಿ ನೀಡಿ ತಂದೆ ತಾಯಿಯವರ ಸಮುಖದಲ್ಲಿ ಸನ್ಮಾನಿಸಿ ಸಿಹಿ ತಿನಿಸಿ ಶುಭ ಹಾರೈಸುತ್ತಾ ಮಾತನಾಡಿದ ಅವರು, ಬಡ ಕುಟುಂಬದಲ್ಲಿ ಜನಿಸಿದರು ಕೂಡ ಕಷ್ಟ ಪಟ್ಟು ಅಭ್ಯಾಸ ಮಾಡಿ ಉತ್ತಮ ಸಾಧನೆ ಮಾಡಿದ್ದಾರೆ.

ಸರ್ಕಾರ ಬಡ ವಿದ್ಯಾರ್ಥಿಗಳಿಗೆ ಉಚಿತ ಮೇಡಿಕಲ್ ಸೀಟ್ ನೀಡಿ ಎಲ್ಲಾ ರೀತಿಯ ಸಹಕಾರ ನೀಡಿ. ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಬೇಕೆಂದು ನುಡಿದರು. ಹಿಂದಿ ಶಿಕ್ಷಕ ಸಂಜೀವನ್ ಭೋಸ್ಲೆ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಾಧನೆ ಮಾಡಬೇಕಾದರೆ ಪಠ್ಯ ಚಟುವಟಿಕೆಗಳ ಜತೆಯಲ್ಲಿ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಬೇಕು. ಅಲ್ಲದೇ ಗುರುಹಿರಿಯರನ್ನು ಗೌರವಿಸುವ ಮನೋಭಾವನೆಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು. ಪತ್ರಕರ್ತ ರಾಜಕುಮಾರ್ ಆರ್. ಹಡಪದ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಸರಕಾರಿ ಶಾಲೆ ಎಂದರೆ ಮುಗು ಮುರಿಯುತ್ತಿರುವುದು ಆತಂಕದ ಸಂಗತಿಯಾಗಿದೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ನಾಜ್ಮೀನ್ ಅವಳು ಸರಕಾರಿ ಉರ್ದು ಮಾಧ್ಯಮದಲ್ಲಿ ಕಲಿತು ಕಲಿತ ಶಾಲೆಗೆ ಹಾಗೂ ಪಟ್ಟಣಕ್ಕೆ ಕೀರ್ತಿ ತಂದಿದ್ದಾಳೆ,





ಶಾಲೆಗೆ ಪ್ರಥಮ ಬಂದಿರುವುದು ತುಂಬಾ ಖುಷಿ ತಂದಿದೆ. ನನ್ನ ಪೋಷಕರು ಮತ್ತು ಗುರುಗಳಿಗೆ ನನಗಿಂತ ಹೆಚ್ಚು ಸಂತಸವಾಗಿದೆ.

ಶಾಲೆಯಲ್ಲಿ ಕಲಿಕೆಗೆ ಪೂರಕ ವಾತಾವರಣವಿತ್ತು. ಶಿಕ್ಷಕರು ಉತ್ತಮವಾಗಿ ಬೋಧಿಸುತ್ತಿದ್ದರು. ಶೈಕ್ಷಣಿಕ ಗೊಂದಲವಿದ್ದರೆ ಬಗೆಹರಿಸಿದರು. ಪುಸ್ತಕ ಒದಗಿಸಿದರು. ಟ್ಯೂಷನಗೆ ಹೋಗಿಲ್ಲಾ ಮನೆಯಲ್ಲೇ ಓದಿದ್ದೆ. ಇಷ್ಟಪಟ್ಟು ಅಭ್ಯಾಸ ಮಾಡಿದ್ದರಿಂದ ಹೆಚ್ಚು ಅಂಕಗಳು ಸಿಕ್ಕಿವೆ. ನನ್ನ ಫಲಿತಾಂಶಕ್ಕೆ ನನ್ನ ತಂದೆ ತಾಯಿ ಮತ್ತು ಕುಟುಂಬದವರು ವಿಶೇಷವಾಗಿ ನನಗೆ ಕಲಿಸಿದ ಗುರುಗಳ ಶ್ರಮ ಬಹಳಷ್ಟು ಇದೆ ಆದರಿಂದ ಈ ಸಾಧನೆ ಮಾಡಲು ಸಾಧ್ಯವಾಗಿದೆ. ನನ್ನ ತಾಯಿಯ ಆಸೆಯಂತೆ ಮುಂದೆ ಪಿಯುಸಿ ವಿಜ್ಞಾನ ವಿಭಾಗಕ್ಕೆ ಸೇರಿ ಒಳ್ಳೆಯ ಶಿಕ್ಷಣ ಪಡೆದು. ಬಳಿಕ ಡಾಕ್ಟರ್ ಆಗಿ ಸಮಾಜದ ಬಡ ಜನರ ಸೇವೆ ಸಲ್ಲಿಸುತ್ತೇನೆ.

**-ನಾಜ್ಮಿನ್ ಹುಡಗಿವಾಲೆ**

**ವಿದ್ಯಾರ್ಥಿನಿ, ಸರಕಾರಿ ಕನ್ಯಾ ಪ್ರೌಢ ಶಾಲೆ ಚಿಟಗುಪ್ಪ**



ನಮ್ಮ ಸರ್ಕಾರಿ ಶಾಲೆಯ ಕೀರ್ತಿ ಹೆಚ್ಚಿಸಿದ ವಿದ್ಯಾರ್ಥಿನಿ ಕನಿಕಾ ಸ್ವಾಮಿ ಕನ್ನಡ ಮಾಧ್ಯಮದಲ್ಲಿ ಹೆಚ್ಚು ಅಂಕ ಪಡೆದಿದ್ದಾರೆ. ಉರ್ದು ಮಾಧ್ಯಮದಲ್ಲಿ ನಾಜ್ಮಿನ್ ಹುಡಗಿವಾಲೇ ಅವರು ಅತೀ ಹೆಚ್ಚು ಅಂಕ ಪಡೆದು ಶಾಲೆಗೆ ಪ್ರಥಮ ದರ್ಜೆಯಲ್ಲಿ ಪಾಸಾಗಿ. ಶಾಲೆಯ ಕೀರ್ತಿ ಹೆಚ್ಚಿಸಿದ್ದು ನಮ್ಮ ಶಿಕ್ಷಕರ ಬಳಗಕ್ಕೆ ಸಂತಸ ಉಂಟು ಮಾಡಿದೆ. ಅವರ ಮುಂದಿನ ಭವಿಷ್ಯ ಒಳ್ಳೆಯದಾಗಲಿ ಎಂದು ಶುಭ ಹಾರೈಸಿದರು.

**-ಹಸನ್ ಲಚ್ಚಿಕೆ**

**ಅತಿಥಿ ಶಿಕ್ಷಕ**

ಇನ್ನುಳಿದ ವಿದ್ಯಾರ್ಥಿಗಳು ಅವಳಂತೆ ನಿರಂತರ ಮತ್ತು ಸತತ ಅಭ್ಯಾಸ ಮಾಡುವ ಮುಖಾಂತರ ಮುಂಬರುವ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಬೇಕೆಂದು ಕಿವಿ ಮಾತು ಹೇಳಿದರು.

ಉತ್ತಮ ಸಾಧನೆಗೈದ ನಾಜ್ಮೀನಳ ತಂದೆ ಮೌಲಾನ ಸಾಬ್ ಹುಡಗಿವಾಲೆ ಮಾತಾನಾಡಿ, ಮಗಳ ಆಸೆಯಂತೆ ಮುಂದೆ ಶಿಕ್ಷಣ ಕಲಿಸುತ್ತೇವೆ. ಎಷ್ಟೇ ಕಷ್ಟವಾದರೂ ಸರಿ ಆಕೆಯ ಆಸೆ ಈಡೇರಿಸುತ್ತೇವೆ ಎಂದು ಹರ್ಷ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿನಿಯ ತಾಯಿ ಸಮೀನಾ ಬೇಗಂ, ರಾಜಕುಮಾರ ಆರ್. ಹಡಪದ ಉಪಸ್ಥಿತರಿದ್ದರು.

# ಬಂಡೆಯ ನಾಡು ರಾಯಚೂರ ಜಿಲ್ಲೆಯ ಜನತೆಗೆ ಶಕ್ತಿ ಯೋಜನೆ ಬಹು ಉಪಕಾರಿ

'ಬಂಡೆಯ ನಾಡು' ರಾಯಚೂರ ಜಿಲ್ಲೆಯಲ್ಲಿ ರಾಜ್ಯ ಸರ್ಕಾರದ ಶಕ್ತಿ ಯೋಜನೆಯು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ರಾಯಚೂರ ವಿಭಾಗದಿಂದ ಸಮರ್ಪಕವಾಗಿ ಅನುಷ್ಠಾನವಾಗುತ್ತ, ಜನಮಾನಸದ ಯೋಜನೆಯಾಗಿ ಹೊರಹೊಮ್ಮಿದೆ.

ರಾಯಚೂರ ಜಿಲ್ಲೆಯಲ್ಲಿ ಮಹಿಳಾ ಪ್ರಯಾಣಿಕರ ಸಂಖ್ಯೆ 2023ರ ಜೂನ ಮಾಹೆಯಲ್ಲಿ ಸರಾಸರಿ ಶೇ.18.42ರಷ್ಟು ಇದ್ದು, ಅದು ಇದೀಗ 2025ರ ಏಪ್ರೀಲ್ ಮಾಹೆಯಲ್ಲಿ ಶೇ.35.81ಕ್ಕೆ ತಲುಪಿದೆ. ಆದಾಯದ ಪ್ರಮಾಣವು 2023ರ ಜೂನ್ ಮಾಹೆಗೆ ಹೋಲಿಸಿದರೆ ದುಪ್ಪಟ್ಟಾಗಿದೆ. ಈ ಮೊದಲು 678.67 ಕೋಟಿ ರೂ.ದಷ್ಟಿದ್ದ ಆದಾಯವು 2025ರ ಏಪ್ರೀಲ್ ಮಾಹೆಯಲ್ಲಿ 1798.81 ಕೋಟಿ ರೂ.ದಷ್ಟು ಹೆಚ್ಚಾಗಿದೆ.

ಶಕ್ತಿಯೋಜನೆ ಜಾರಿಯಾದಾಗಿನಿಂದ 2025ರ ಏಪ್ರೀಲ್ ಮಾಹೆವರೆಗೆ ರಾಯಚೂರ 1ನೇ ಘಟಕ, ರಾಯಚೂರ 2ನೇ ಘಟಕ, ರಾಯಚೂರ 3ನೇ ಘಟಕ, ಲಿಂಗಸೂರ ಘಟಕ, ಸಿಂಧನೂರ, ಮಾನವಿ ಘಟಕ, ದೇವದುರ್ಗ ಘಟಕ ಮತ್ತು ಮಸ್ಕಿ ಘಟಕ ಸೇರಿ 2023ರ ಜೂನ್ ಮಾಹೆಯಲ್ಲಿ 18.42 ಲಕ್ಷ, ಜುಲೈನಲ್ಲಿ 30.81 ಲಕ್ಷ, ಆಗಸ್ಟ್ ಮಾಹೆಯಲ್ಲಿ 36.06 ಲಕ್ಷ, ಸೆಪ್ಟೆಂಬರ್ ಮಾಹೆಯಲ್ಲಿ 38.18 ಲಕ್ಷ, ಅಕ್ಟೋಬರ್ ಮಾಹೆಯಲ್ಲಿ 35.47 ಲಕ್ಷ, ನವೆಂಬರ್ ಮಾಹೆಯಲ್ಲಿ 36.07 ಲಕ್ಷ, ಡಿಸೆಂಬರ್ ಮಾಹೆಯಲ್ಲಿ 38.57 ಲಕ್ಷ ಅದೇ ರೀತಿ 2024ರ ಜನವರಿ ಮಾಹೆಯಲ್ಲಿ 39.27 ಲಕ್ಷ, ಫೆಬ್ರವರಿಯಲ್ಲಿ 38.38 ಲಕ್ಷ, ಮಾರ್ಚನಲ್ಲಿ 35.87 ಲಕ್ಷ, ಏಪ್ರೀಲ್‌ನಲ್ಲಿ 32.92 ಲಕ್ಷ, ಮೇನಲ್ಲಿ 32.63 ಲಕ್ಷ, ಜೂನ್‌ದಲ್ಲಿ 34.24 ಲಕ್ಷ, ಮೇನಲ್ಲಿ 32.63 ಲಕ್ಷ, ಜೂನದಲ್ಲಿ 34.24 ಲಕ್ಷ, ಜುಲೈನಲ್ಲಿ 36.04 ಲಕ್ಷ, ಆಗಸ್ಟನಲ್ಲಿ 37.86 ಲಕ್ಷ, ಸೆಪ್ಟೆಂಬರ್‌ನಲ್ಲಿ 34.26 ಲಕ್ಷ, ಅಕ್ಟೋಬರನಲ್ಲಿ 34.86 ಲಕ್ಷ, ನವೆಂಬರನಲ್ಲಿ 36.70 ಲಕ್ಷ, ಡಿಸೆಂಬರ್‌ನಲ್ಲಿ 37.28 ಲಕ್ಷ, ಅದೇ ರೀತಿ 2025ರ ಜನವರಿ ಮಾಹೆಯಲ್ಲಿ 34.65 ಲಕ್ಷ, ಫೆಬ್ರವರಿಯಲ್ಲಿ 34.32 ಲಕ್ಷ, ಮಾರ್ಚನಲ್ಲಿ 32.83 ಲಕ್ಷ ಮತ್ತು ಏಪ್ರೀಲನಲ್ಲಿ 35.81 ಲಕ್ಷ ಮಹಿಳಾ ಪ್ರಯಾಣಿಕರು ಸಂಚಾರ ಮಾಡಿದ್ದಾರೆ.

ಶಕ್ತಿಯೋಜನೆ ಜಾರಿಯಾದಾಗಿನಿಂದ ಇಲ್ಲಿವರೆಗೆ ದಾಖಲೆ ಪ್ರಮಾಣದಲ್ಲಿ ನಿಗಮಕ್ಕೆ ಆದಾಯವು ಹರಿದುಬಂದಿದೆ. ಯೋಜನೆ ಜಾರಿಯಿಂದ ಹಿಡಿದು 2025ರ ಏಪ್ರೀಲ್ ಮಾಹೆವರೆಗೆ ರಾಯಚೂರ 1ನೇ ಘಟಕದಿಂದ 13.05 ಕೋಟಿ ರೂ., ರಾಯಚೂರ 2ನೇ ಘಟಕದಿಂದ 43.23 ಕೋಟಿ ರೂ., ರಾಯಚೂರ 3ನೇ ಘಟಕದಿಂದ 38.39 ಕೋಟಿ ರೂ., ಲಿಂಗಸೂರ ಘಟಕದಿಂದ 66.41 ಕೋಟಿ ರೂ., ಸಿಂಧನೂರ ಘಟಕದಿಂದ 50.16 ಕೋಟಿ ರೂ.. ಮಾನವಿ ಘಟಕದಿಂದ 21.77 ಕೋಟಿ ರೂ., ದೇವದುರ್ಗ ಘಟಕದಿಂದ 42.79 ಕೋಟಿ ರೂ ಮತ್ತು ಮಸ್ಕಿ ಘಟಕದಿಂದ 44.12 ಕೋಟಿ ರೂ.ನಷ್ಟು ಆದಾಯ ಬಂದಿರುವುದು ಗಮನಾರ್ಹ ಸಾಧನೆಯಾಗಿದೆ.

ಶಕ್ತಿ ಯೋಜನೆ ಜಾರಿಯಾಗಿ 2024ರ ಏಪ್ರಿಲ್ 1 ರಿಂದ 25ರ ಏಪ್ರೀಲ್ 15ರವರೆಗೆ ರಾಯಚೂರ 1ನೇ ಘಟಕದಲ್ಲಿ 4.16 ಲಕ್ಷ, ರಾಯಚೂರ 2ನೇ ಘಟಕದಲ್ಲಿ 6.04 ಲಕ್ಷ, ರಾಯಚೂರ 3ನೇ ಘಟಕದಲ್ಲಿ 4.32 ಲಕ್ಷ, ಲಿಂಗಸೂರ ಘಟಕದಲ್ಲಿ 11.35 ಲಕ್ಷ, ಸಿಂಧನೂರದಲ್ಲಿ 7.95 ಲಕ್ಷ, ಮಾನವಿಯಲ್ಲಿ 4.76 ಲಕ್ಷ, ದೇವದುರ್ಗದಲ್ಲಿ 6.85 ಲಕ್ಷ ಮತ್ತು ಮಸ್ಕಿಯಲ್ಲಿ 7.36 ಲಕ್ಷ ಪ್ರಮಾಣದಷ್ಟು ಶಕ್ತಿಯೋಜನೆಯ ಫಲಾನುಭವಿಗಳ ಅಂಕಿ ಸಂಖ್ಯೆ ದಾಖಲಾಗಿರುತ್ತದೆ.

ಕಲ್ಯಾಣ ಕರ್ನಾಟಕ ರಸ್ತೆಸಾರಿಗೆ ನಿಗಮಕ್ಕೆ ರಾಜ್ಯ ಸರ್ಕಾರದಿಂದ 2023-24ನೇ ಸಾಲಿನಲ್ಲಿ 646.07 ಕೋಟಿ ರೂ, 2024-25ನೇ ಸಾಲಿನಲ್ಲಿ 1012.94 ಕೋಟಿ ರೂ. ಹಾಗೂ 2025-26ನೇ ಸಾಲಿನಲ್ಲಿ 84.41 ಕೋಟಿ ರೂ ಸೇರಿದಂತೆ ಜೂನ್ 2023ರಿಂದ ಇಲ್ಲಿವರೆಗೆ 1743.42 ಕೋಟಿ ರೂ.ನಷ್ಟು ಅನುದಾನ ನೀಡಲಾಗಿರುತ್ತದೆ.



ಹನುಮಂತಿ, ರಾಯಚೂರು, ಶಕ್ತಿ ಯೋಜನೆಯ ಫಲಾನುಭವಿ



ಯಶೋಧಾ, ದೇವಸಗೂರು, ಶಕ್ತಿ ಯೋಜನೆಯ ಫಲಾನುಭವಿ

ಶಕ್ತಿ ಯೋಜನೆ ಜಾರಿಯಾದ ನಂತರ ರಾಯಚೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು 98 ಹೊಸದಾದ ಅನುಸೂಚಿಗಳನ್ನು ಪ್ರಾರಂಭಿಸಲಾಗಿದೆ. ಕಾರ್ಯಚರಣೆಯಲ್ಲಿದ್ದ ಅನುಸೂಚಿಗಳ ಪೈಕಿ 188 ಅನುಸೂಚಿಗಳಿಗೆ ಪರಿಷ್ಕರಣೆ ಮಾಡಿ ಒಟ್ಟು 346 ಟ್ರಿಪ್‌ಗಳನ್ನು ಹೆಚ್ಚಿಗೆ ಸೇರ್ಪಡೆಗೊಳಿಸಲಾಗಿದೆ. ಒಟ್ಟು 159 ಹೊಸ ವಾಹನಗಳು ಸೇರ್ಪಡೆಯಾಗಿರುವುದು ವಿಶೇಷ ಸಾಧನೆಯಾಗಿದೆ ಎನ್ನುತ್ತಾರೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ರಾಯಚೂರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಗಳಾದ ಎಂ.ಎಸ್.ಚಂದ್ರಶೇಖರ.

'ನಿತ್ಯ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಂಚರಿಸಿ ಕೆಲಸ ಮಾಡುವವರಿಗೆ, ಮಹತ್ವದ ಕಾರ್ಯಕ್ಕಾಗಿ ಪ್ರತಿನಿತ್ಯ ಸಂಚರಿಸುವವರಿಗೆ ಹಾಗೂ ವಿಶೇಷವಾಗಿ ವಿದ್ಯಾರ್ಥಿನಿಯರಿಗೆ ಶಕ್ತಿ ಯೋಜನೆಯಿಂದ ಸಾಕಷ್ಟು ಅನುಕೂಲವಾಗಿದೆ. ರಾಜ್ಯ ಸರ್ಕಾರಕ್ಕೆ ನಾವು ಅನಂತ ಧನ್ಯವಾದಗಳನ್ನು ತಿಳಿಸುತ್ತೇವೆ' ಎನ್ನುತ್ತಾರೆ ರಾಯಚೂರ ಜಿಲ್ಲೆಯ ಶಕ್ತಿ ಯೋಜನೆಯ ಫಲಾನುಭವಿಗಳಾದ ರಾಯಚೂರದ ಹನುಮಂತಿ ಹಾಗೂ ದೇವಸಗೂರಿನ ಯಶೋಧ ಅವರು. ಅದೇ ರೀತಿ ಸಿಂಧನೂರ, ಮಸ್ಕಿ, ಮಾನವಿ, ಲಿಂಗಸೂರ, ದೇವದುರ್ಗ, ಹಾಗೂ ಸಿರವಾರ ತಾಲೂಕಿನಲ್ಲಿನ ಶಕ್ತಿಯೋಜನೆಯ ಫಲಾನುಭವಿಗಳು ಸಹ ಶಕ್ತಿ ಯೋಜನೆಯಿಂದಾಗಿ ನಮಗೆ ಸಾಕಷ್ಟು ಅನುಕೂಲವಾಗಿದೆ ಎಂದು ಅಭಿಪ್ರಾಯಪಡುವುದು ಈ ಯೋಜನೆಯ ಜನಪ್ರಿಯತೆಗೆ ಸಾಕ್ಷಿಯಾಗಿದೆ.

**ಗವಿಸಿದ್ದಪ್ಪ ಹೊಸಮನಿ, ವಾರ್ತಾ ಸಹಾಯಕರು, ವಾರ್ತಾ ಇಲಾಖೆ, ರಾಯಚೂರು**

# ಬಾಲಕಿ ಅಪಹರಣ: ಪ್ರಕರಣ ದಾಖಲು

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ತಾಲೂಕಿನ ಬಿ.ಹೊಸಳ್ಳಿ ಗ್ರಾಮದ ನಾಗರತ್ನ ತಂದೆ ಹನುಮಂತಪ್ಪ ಕ್ಯಾಶಪ್ಪನವರ್ ಎಂಬ 11 ವರ್ಷ ಬಾಲಕಿ ಮೇ 5 ರಂದು ಸಂಜೆ 7 ಗಂಟೆಗೆ ಸುಮಾರಿಗೆ ಅಪಹರಣಕ್ಕೊಳಗಾಗಿದ್ದು, ಕೊಪ್ಪಳ ಮಹಿಳಾ ಪೋಲಿಸ್ ಠಾಣೆಯ ಗುನ್ನೆ ನಂ: 24/2025 ಕಲಂ:137(2) ಬಿ.ಎನ್.ಎಸ್ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.



ಬಾಲಕಿಯು ಬುದ್ಧಿಮಾಂದ್ಯವಿದ್ದು, ತನ್ನ ಅಜ್ಜಿಯಾದ ಶಿವಮ್ಮ ಕುಕ್ಕೆಪ್ಪನವರ್ ಅವರು ಸಂತೆ ಮಾಡುವ ಸಲುವಾಗಿ ಮೇ. 5 ರಂದು ಮದ್ಯಾಹ್ನ 3 ಗಂಟೆಗೆ ಬಾಲಕಿಯನ್ನು ತನ್ನ ಜೊತೆ ಕರೆದುಕೊಂಡು ಕೊಪ್ಪಳಕ್ಕೆ ಬಂದಿದ್ದು, ನಂತರ ಊರಿಗೆ ಹಿಂದಿರುಗಲು ಬಸ್ ನಿಲ್ದಾಣದಲ್ಲಿ ಬಂದಿರುತ್ತಾರೆ. ಸಂಜೆ 7 ಗಂಟೆಗೆ ಅಜ್ಜಿಗೆ ಸ್ವಲ್ಪ ನಿದ್ದೆ ಬಂದಿದ್ದು, ನಂತರ ಎಚ್ಚರವಾದಾಗ ಬಾಲಕಿಯು ಕಾಣಲಿಲ್ಲ ಹಾಗೂ ಎಲ್ಲಾ ಕಡೆ ಹುಡುಕಿದರು ಸಿಕ್ಕಿರುವುದಿಲ್ಲ. ಅಪಹರಣ ಶಂಕೆ ಹಿನ್ನೆಲೆಯಲ್ಲಿ ಬಾಲಕಿಯ ತಂದೆ ಹನುಮಂತಪ್ಪ ಕುಕ್ಕೆಪ್ಪನವರ್ ಕೊಪ್ಪಳ ಮಹಿಳಾ ಪೋಲಿಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಬಾಲಕಿಯು 4 ಫಿಟ್ ಎತ್ತರ, ಗೋಧಿಮೈಬಣ್ಣ ಸಾಧಾರಣ ಮೈಕಟ್ಟು, ಹೊಂದಿದ್ದು, ಕಾಣೆಯಾದಾಗ ಕೆಂಪು ಬಣ್ಣದ ಚೂಡಿದಾರ, ಪ್ಯಾಂಟ್ ಧರಿಸಿದ್ದಳು. ಈ ಬಾಲಕಿಯು ಕಂಡುಬಂದಲ್ಲಿ ಕೊಪ್ಪಳ ಮಹಿಳಾ ಠಾಣೆ ದೂ.ಸಂ: 08539-221233, ಮಹಿಳಾ ಠಾಣೆ ಪಿ.ಐ ಮೊ.ಸಂ 8861116999, ತನಿಖಾಧಿಕಾರಿ ಶಶಿಕಲಾ ಮೊ.ಸಂ: 8217391502 ಹಾಗೂ ಕೊಪ್ಪಳ ಪೋಲೀಸ್ ಕಂಟ್ರೋಲ್ ರೂಂ ದೂ.ಸಂ: 9480803700 ಗೆ ಮಾಹಿತಿ ನೀಡುವಂತೆ ಮಹಿಳಾ ಪೋಲಿಸ್ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಷಯ ವಾಸನೆಯ ಪರಧಿ ಕಳಚಿದಾತನೇ ಶರಣ – ಡಾ. ಚನ್ನವೀರ ಶಿವಾಚಾರ್ಯರು



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ಮೆ 19- ಪ್ರಪಂಚದಲ್ಲಿಯೇ ಇದ್ದುಕೊಂಡು ವಿಷಯವಾಸನೆಯ ಪರಧಿಯಿಂದ ಹೊರಬಂದು ಸರಳ ಸಾತ್ವಿಕ ಸಮಾಜ ಮುಖಿಯಾಗಿ ಬದುಕು ಸಾಗಿಸುವವನೇ ಶರಣ ಎಂದು ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಮೈಸಲಗಾ ಗ್ರಾಮದ ಮಹಾಲಕ್ಷ್ಮಿ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ ಧರ್ಮ ಸಭೆಯ ಸಾನಿಧ್ಯ ವಹಿಸಿ ಮಾತನಾಡಿ ದೇಹ, ಮನಸ್ಸು, ಆತ್ಮಗಳಿಂದ ಕೂಡಿದ ಮಾನವ ಶರೀರಕ್ಕೆ ಅನ್ನ, ಜ್ಞಾನ, ಧ್ಯಾನ ಅವಶ್ಯವಾಗಿದ್ದು, ಸಮತೋಲನ ಜೀವನ ಸಾಗಿಸಲು ಭದ್ರಭೂಮಿಕೆಯನ್ನು ರೂಪಿಸಿಕೊಡುತ್ತದೆ.

ಸತ್ಯ ಶುದ್ಧತೆಯಿಂದ ಕೂಡಿದ ಕಾಯಕ ಮತ್ತು ದಾಸೋಹ ಗಳಿಂದ ಭಗವಂತನ ಕೃಪೆಗೆ ಪಾತ್ರರಾಗುತ್ತೇವೆ. ನಮ್ಮ ಸಂಪಾದನೆಯಲ್ಲಿ ಯೋಗ್ಯತೆಗೆ ಅನುಸಾರ ಸ್ವತ್ಪಾತ್ರರಿಗೆ ಮಾಡುವ ದಾನ ಧರ್ಮದಿಂದ ಅಧ್ಯಾತ್ಮದ ಅನುಸಂಧಾನವಾಗಿ ಎತ್ತರದ ಜೀವನ ಸಾಗಿಸಲು ಸಾಧ್ಯವಾಗುತ್ತದೆ.

ಭೌತಿಕ ಸಿರಿ ಸಂಪತ್ತು ಎಷ್ಟೇ ಇದ್ದರೂ ನೆಮ್ಮದಿ ಇರದಿದ್ದರೆ ಎಲ್ಲವೂ ವ್ಯರ್ಥ, ಹಾಗಾಗಿ ಮನೆ ಎಂದರೆ ಕೇವಲ ನಶ್ವರ ಸಂಪತ್ತಿನ ಉಗ್ರಾಣವಲ್ಲ, ತೃಪ್ತಿ, ಆನಂದ, ನಗುವಿನ ಪರಿಮಳ ಯಾವ ಮನೆಯಲ್ಲಿ ಹಸಿರಾಗಿರುತ್ತೋ ಅಂತಹ ಮನೆ ನಿಜವಾಗಿಯೂ ಶ್ರೀಮಂತಿಕೆಯಿಂದ ಕೂಡಿರುತ್ತದೆ.

ದಾನ ಧರ್ಮ ದಾಸೋಹ ಹಾಗೂ ಸಜ್ಜನರಿಂದ ಕೂಡಿದ ಮೈಸಲಗಾ ಜನತೆಗೆ ಹಾರಕೂಡಧೀಶ ಹಾಗೂ ಲಕ್ಷ್ಮೀ ಮಾತೆ ಅಂತ:ಕರಣದ ಆಶೀರ್ವಾದ ಕರುಣಿಸಲಿ ಎಂದು ಶುಭ ಹಾರೈಸಿದರು.

ಖೇಳಗಿಯ ಪೂಜ್ಯ ಶ್ರೀ ಅಭಿನವ ಶಿವಲಿಂಗ ಮಹಾಸ್ವಾಮಿಗಳು ಮಾತನಾಡಿದರು. ಸೋಪನರಾವ ಪಾಟೀಲ ಸ್ವಾಗತಿಸಿ, ಪ್ರಸ್ತಾವಿಕವಾಗಿ ಮಾತನಾಡಿದರು.

ಪೂಜ್ಯ ರತ್ನಕಾಂತ ಶಿವಯೋಗಿಗಳು, ಪೂಜ್ಯ ಶಂಕರ ಆಯಿ ಮೈಸಲಗಾ, ಸಾವಿತ್ರಿ ಶರಣು ಸಲಗರ, ತಾಲೂಕಾ ಪಂಚಾಯತ್ ಮಾಜಿ ಅಧ್ಯಕ್ಷ ಗುರುಲಿಂಗಪ್ಪ ಸೈದಾಪುರೆ, ಮಲ್ಲಿನಾಥ ಹಿರೇಮಠ ಹಾರಕೂಡ, ಶಿವಶರಣಪ್ಪ ಕಂಬಳಿಮಠ, ಗ್ರಾಮ ಪಂಚಾಯಿತಿ ಸದಸ್ಯರಾದ ಸರಸ್ವತಿ ವಡ್ಡೆ, ಜಗನ್ನಾಥ ಧೋಮೆ, ಭೀಮಾಶಂಕರ ಮಾಲಿ ಪಾಟೀಲ, ರೇಣುಕಾ ನೀಲೆ, ಶಾಂತಾಬಾಯಿ ರಾಠೋಡ್, ಸುಧಾಮ ಜಾದವ, ದೇವಸ್ಥಾನ ಕಮಿಟಿ ಅಧ್ಯಕ್ಷರಾದ ರೇವಣಸಿದ್ದಪ್ಪ ಅಟ್ಟೂರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಅಣ್ಣಾರಾವ ಶೆಳ್ಳಗಿ ಪ್ರಾರ್ಥನಾ ಗೀತೆ ಹಾಡಿದರು. ಸಿದ್ದಾರೂಢ ಪಾಟೀಲ ನಿರೂಪಣೆ ಮಾಡಿದರು.

ಸಮಾರಂಭಕ್ಕೂ ಮುನ್ನ ಹಾರಕೂಡ ಶ್ರೀಗಳ ಅದ್ದೂರಿ ಮೆರವಣಿಗೆ ಜರಗಿತು.

# ನಾಯಕತ್ವ ಬೆಳವಣಿಗೆಗೆ ಎನ್‌ಎಸ್‌ಎಸ್ ಶಿಬಿರ ಸಹಕಾರಿ:- ತಳಘಟಕ್ಕರ್




ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:-ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರ ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವನೆ, ವಿಜ್ಞಾನ ಮತ್ತು ವೈಜ್ಞಾನಿಕ ಆಸಕ್ತಿ ಬೆಳೆಸಲು ಸಹಾಯವಾಗುತ್ತದೆ ಎಂದು ಬಸವ ತೀರ್ಥ ಸಂಸ್ಥೆಯ ಕಾರ್ಯದರ್ಶಿ ಕೇಶವರಾವ ತಳಘಟಕ್ಕರ್ ಹೇಳಿದರು. ತಾಲ್ಲೂಕಿನ ಹಳ್ಳಿಖೇಡ (ಬಿ) ಪಟ್ಟಣದ ಈಶ್ವರ್ ದೇವಾಲಯ ಆವರಣದಲ್ಲಿ ಬಸವತೀರ್ಥ ವಿದ್ಯಾಪೀಠ ಪದವಿ ಮಹಾವಿದ್ಯಾಲಯದ ವತಿಯಿಂದ ಹಮ್ಮಿಕೊಂಡಿದ 2024-25ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರದಲ್ಲಿ ಮಾತನಾಡಿ ಶಿಬಿರಗಳಲ್ಲಿ ದೇಶಭಕ್ತಿ ಭಾವನೆ ಅರಿವು ಒಡಮೂಡಿಸಲು ಹಾಗೂ ಮಾಲಿನ್ಯದಿಂದಾಗುವ ದುಷ್ಪರಿಣಾಮಗಳನ್ನು ವಿದ್ಯಾರ್ಥಿಗಳಲ್ಲಿ ವಿಶೇಷ ಉಪನ್ಯಾಸಕರಿಂದ ಜಾಗೃತಿ ಒಡ ಮೂಡಿಸಲಾಗುವುದು ಎಂದರು. ವಿದ್ಯಾರ್ಥಿಗಳಿಗೆ ಮನೆಯೇ ಮೊದಲ ಪಾಠ ಶಾಲೆ ಇದಂತೆ ಮನೆಯಲ್ಲಿ ಒಳ್ಳೆಯ ಸುಸಂಸ್ಕೃತ ನಾಗರಿಕರಿದ್ದರೆ ಒಳ್ಳೆಯ ಸುಸಂಸ್ಕೃತ ನಾಯಕರಾಗಲು ಸಹಾಯವಾಗುತ್ತದೆ ಎಂದರು. ಸಮಾಜ ಸೇವಕ ರಾಹುಲ್ ಮಿಶ್ರಾ ಈ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ಪರಿಸರ ಸಂರಕ್ಷಣೆ ಪ್ರತಿಯೊಬ್ಬರೂ ಕಡ್ಡಾಯವಾಗಿ ಮರ ಗಿಡಗಳನ್ನು ಬೆಳಸಬೇಕಂದು ಮನವಿ ಮಾಡಿದರು. ಯುವಕರು ಕಡ್ಡಾಯವಾಗಿ ಗುಣಮಟ್ಟದ ಶಿಕ್ಷಣ ಪಡೆದು ಒಳ್ಳೆಯ ಸುಸಂಸ್ಕೃತ ನಾಗರಿಕರಾಗಬೇಕು ಎಂದು ತಿಳಿಸಿದರು. ಪರಿಸರವಾದಿ ಶೈಲೇಂದ್ರ ಕಾವಡಿ ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆ ಶಿಬಿರ ಪರಿಸರ ಸಂರಕ್ಷಣೆಗೆ ವರದಾನವಾಗಿದೆ ಎಂದರು. ರಾಷ್ಟ್ರೀಯ ಸೇವಾ ಯೋಜನೆ 1969 ಸೆಪ್ಟೆಂಬರ್ 24ರಂದು ಆರಂಭವಾಗಿದೆ ಅಂದು 37 ವಿಶ್ವವಿದ್ಯಾಲಯದಲ್ಲಿ ಈ ಯೋಜನೆ ಜಾರಿಗೊಳಿಸಲಾಗಿತ್ತು. ಅಂದಿನ ಕೇಂದ್ರ ಶಿಕ್ಷಣ ಸಚಿವರಾದ ದಿ.ವಿ.ಕೆ. ಆರ್. ವಿ. ರಾವ್ ಇವರನ್ನು ರಾಷ್ಟ್ರೀಯ ಸೇವಾ ಯೋಜನೆಯ ಪಿತಾಮಹ ಎಂದು ಕರೆಯುತ್ತಾರೆ. ಪರಿಸರ ಅಸಮತೋಲದಿಂದ ಜೀವ ವೈವಿಧ್ಯತೆ ಮೇಲೆ ಭಾರಿ ಪರಿಣಾಮ ಬೀರುತ್ತಿದೆ. ಪರಿಸರ ಸಮತೋಲನ ಕಾಪಾಡಿದರೆ ನಮಗೆ ಉಳಿಗಾಲವಿದೆ ಎಂದು ಹೇಳಿದರು. ಕಾಲೇಜಿನ ಪ್ರಾಂಶುಪಾಲ ಮಸ್ತಾನ ಪಟೇಲ್ ಪ್ರಾಸ್ತಾವಿಕ ಮಾತನಾಡಿ, 7ದಿವಸಗಳ ನಡೆಯುವ ಈ ಶಿಬಿರದಲ್ಲಿ ಪರಿಸರ ಸಂರಕ್ಷಣೆಗೆ ಸಸಿ ನೆಡುವ ಕಾರ್ಯಕ್ರಮ, ಸ್ವಚ್ಛತೆ ಕಾರ್ಯಕ್ರಮ, ರಕ್ತದಾನ ಶಿಬಿರ ಸೇರಿದಂತೆ ಹಲವಾರು ಜಾಗೃತಿ ಕಾರ್ಯಕ್ರಮಗಳು ಜರುಗುತ್ತವೆ ಎಂದರು. ವಿದ್ಯಾರ್ಥಿಗಳು ಶಿಬಿರದ ಸದುಪಯೋಗ ಪಡೆದುಕೊಳ್ಳಲು ಕರೆ ನೀಡಿದರು. ಹಳ್ಳಿಖೇಡ್ (ಬಿ) ಠಾಣೆಯ ಎ ಎಸ್‌ಐ ರಾಜಕುಮಾರ ಆಲಮೇಲ್ ಮಾತನಾಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಸೋಮಯ್ಯಾ ಹಿರೇಮಠ, ಕಾರ್ಯದರ್ಶಿ ರಮೇಶ್ ಮಹೇಂದ್ರಕ್ಕರ್, ಆಡಳಿತಾಧಿಕಾರಿ ಗುಂಡಯ್ಯಾ ತೀರ್ಥ, ಎನ್‌ಎಸ್‌ಎಸ್ ಅಧಿಕಾರಿ ರಮೇಶ್ ಕಾಳೆ, ನರೇಂದ್ರಪಾಟೀಲ್, ಐಶ್ವರ್ಯ ಹಡಪದ, ಭಾಗ್ಯಶ್ರೀ ಪ್ರಾರ್ಥನೆ ಗೀತೆ ಹಾಡಿದರು. ಕಾರ್ಯಕ್ರಮ ನಿರೂಪಿಸಿದರು. ಬಸವರಾಜ ಝುರಗುಂಟೆ ವಂದಿಸಿದರು. ಸೇರಿದಂತೆ ಸಿಬ್ಬಂದಿ ವರ್ಗದವರು ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

# ಒಳಮೀಸಲಾತಿ ಸಮೀಕ್ಷೆಗೆ ಎಲ್ಲರ ಸಹಕಾರ ಅಗತ್ಯ-ಜಾನಕಿ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.19-ಜಿಲ್ಲೆಯಲ್ಲಿ ನಡೆಯುತ್ತಿರುವ ಪರಿಶಿಷ್ಟ ಜಾತಿ ಒಳಮೀಸಲಾತಿ ಸಮೀಕ್ಷೆಗೆ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ತಿಳಿಸಿದರು. ಜಿಲ್ಲಾ ಪಂಚಾಯತ ಸಭಾಭವನದಲ್ಲಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಕುರಿತು ಸೋಮವಾರ ಹಮ್ಮಿಕೊಂಡ ಒಂದು ದಿನದ ಅರಿವು ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡಿದ ಅವರು, ಸಾಮಾಜಿಕ ಜವಾಬ್ದಾರಿ ಎಲ್ಲರ ಮೇಲೆ ಇದ್ದು, ಸಮೀಕ್ಷೆಯಲ್ಲಿ ನೈಜವಾದ ಮಾಹಿಯನ್ನು ಕಲೆ ಹಾಕಬೇಕಿದೆ. ಈ ಕಾರ್ಯದಲ್ಲಿ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದು ತಿಳಿಸಿದರು.



ನ್ಯಾಯಮೂರ್ತಿ ಡಾ.ಎಚ್. ಎನ್.ನಾಗಮೋಹನದಾಸ್ ಏಕಸದಸ್ಯ ವಿಚಾರಣಾ ಆಯೋಗ ಪರಿಶಿಷ್ಟ ಜಾತಿಯ ಒಳಮೀಸಲಾತಿಯ ವರ್ಗೀಕರಣಕ್ಕೆ ನೈಜವಾದ ಮಾಹಿತಿ ಸಂಗ್ರಹಿಸುವನಿಟ್ಟಿನಲ್ಲಿ ರಾಜ್ಯಾದ್ಯಂತ ಸಮೀಕ್ಷೆ ಹಮ್ಮಿಕೊಂಡಿದೆ. ಸರ್ಕಾರದ ಇಂತಹದೊಂದು ಉದ್ದೇಶ ಸಾರ್ಥಕತೆ ಆಗಬೇಕಾದರೆ ತಮ್ಮ ತಮ್ಮ ಕಾರ್ಯದಲ್ಲಿ ಜವಾಬ್ದಾರಿ ಅರಿತು ಕೆಲಸದಲ್ಲಿ ತೊಡಗಿಸಿಕೊಳ್ಳಬೇಕಾಗಿದೆ. ಸಮೀಕ್ಷೆಯಲ್ಲಿ ಯಾವುದೇ ರೀತಿಯ ತಪ್ಪು ಆಗದಂತೆ ಮುತುವರ್ಜಿ ವಹಿಸಬೇಕಾಗಿರುವದರಿಂದ ಸಮುದಾಯದ ಮುಖಂಡರುಗಳಿಗೆ ಈ ಕುರಿತು ಅರಿವು ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಜಾನಕಿ ಹೇಳಿದರು.

ಸಮೀಕ್ಷೆ ಕೈಗೊಳ್ಳಲು ಜಿಲ್ಲೆಯ ಇಬ್ಬರು ಮಾಸ್ಟರ ಟ್ರೈನರ್‌ಗಳನ್ನು ತರಬೇತಿ ಪಡೆದುಕೊಂಡಿದ್ದಾರೆ. ಮಾಸ್ಟರ ಟ್ರೈನರಗಳ ಮೂಲಕ ಆಯಾ ತಾಲೂಕಿನ ಟ್ರೈನರ್‌ಗಳಿಗೆ ತರಬೇತಿ ನೀಡಿ ಆಯಾ ತಾಲೂಕಿ ಗಣತಿದಾರರಿಗೆ ಸಂಪೂರ್ಣ ತರಬೇತಿ ನೀಡಲಾಗಿದೆ. ಸಮೀಕ್ಷೆ ಕಾರ್ಯದಲ್ಲಿಯೇ ಕೆಲವೊಂದು ಕಾಲಂ ಭರ್ತಿ ಮಾಡಲು ಮಾಹಿತಿ ದೊರಯದೇ ಇರುವುದು ಕಂಡುಬಂದಿದೆ. ಸಮೀಕ್ಷೆಯಲ್ಲಿ ಪ್ರತಿಯೊಂದು ಅಂಶಗಳನ್ನು ಗಣನೆಗೆ ತೆಗೆದು-ಕೊಂಡು ಕಾರ್ಯ ನಿರ್ವಹಿಸಲು ಗಣತಿದಾರರಿಗೆ ತಿಳಿಸಲಾಗಿದೆ. ಸಮೀಕ್ಷೆಯ ಬಗ್ಗೆ ದೂರುಗಳು ಇದ್ದಲ್ಲಿ ಜಿಲ್ಲೆಯಲ್ಲಿ ಸ್ಥಾಪಿಸಲಾದ ಸಹಾಯವಾಣಿಗಳಿಗೆ ಇಲ್ಲವೇ ರಾಜ್ಯ ಮಟ್ಟದ ಸಹಾಯವಾಣಿ ಅಥವಾ ಜಿಲ್ಲಾಧಿಕಾರಿಗಳಿಗಾದರೂ ಕರೆ ಮಾಡಬಹುದಾಗಿದೆ ಎಂದರು.

ಸಮುದಾಯದ ಮುಂಖಂಡರ ಸಲಹೆಗಳನ್ನು ಆಲಿಸಿದ ಜಿಲ್ಲಾಧಿಕಾರಿಗಳು, ಸಮೀಕ್ಷೆ ನೂರಕ್ಕೆ ನೂರರಷ್ಟು ಮಾಹಿತಿ ದೊರೆಯುವಲ್ಲಿ ತಮ್ಮ ಪಾತ್ರ ಮುಖ್ಯವಾಗಿದ್ದು, ಎಲ್ಲರೂ ಸಹಕರಿಸುವಂತೆ ಕೋರಿದರು. ಸಮೀಕ್ಷೆಯ ಅವಧಿಯನ್ನು ಮೇ 25 ವರೆಗೆ ವಿಸ್ತರಿಸಲಾಗಿದೆ. ಅಲ್ಲದೇ ಸಮೀಕ್ಷಾ ಬ್ಲಾಕ್ ವ್ಯಾಪ್ತಿಯಲ್ಲಿ ಮೇ 26 ರಿಂದ 28 ವರೆಗೆ ನಡೆಸಲಾಗುತ್ತಿದೆ. ಆನ್‌ಲೈನ್ ಮೂಲಕ ಸ್ವಯಂ ಘೋಷಣೆ ಮಾಡಿಕೊಳ್ಳಲು ಮೇ 28 ವರೆಗೆ ಅವಧಿ ನಿಗದಿಪಡಿಸಲಾಗಿದೆ. ಸಮೀಕ್ಷೆಗೆ ನೇಮಕಗೊಂಡ ನೋಡಲ್ ಅಧಿಕಾರಿ, ತಹಶೀಲ್ದಾರ ಹಾಗೂ ಉಪವಿಭಾಗಾಧಿಕಾರಿಗಳು ಸಮೀಕ್ಷೆ ಕೈಗೊಂಡ ಮನೆ ಮನೆಗಳ ತೆರಳಿ ಪರಿಶೀಲನೆ ಕೂಡಾ ಮಾಡಲಿದ್ದಾರೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಸದಾಶಿವ ಬಡಿಗೇರ, ಶಾಲಾ ಶಿಕ್ಷಣ ಇಲಾಖೆಯ ಪ್ರಭಾರಿ ಉಪನಿರ್ದೇಶಕ ಎಚ್.ಜಿ.ಮೀರ್ಜಿ, ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕ ಕಾಂಬಳೆ ಹಾಗೂ ಪರಿಶಿಷ್ಟ ಸಮುದಾಯದ ಮುಖಂಡರುಗಳು ಪಾಲ್ಗೊಂಡಿದ್ದರು.

# ಪತ್ರಕರ್ತರಿಗೆ ಉತ್ತಮ ಚಾರಿತ್ರ್ಯ ಅಗತ್ಯ-ಅರುಣಕುಮಾರ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ: ಪತ್ರಕರ್ತ ಉತ್ತಮ ಚಾರಿತ್ರ್ಯವುಳ್ಳವನಾಗಿ ಭಾಷೆ,ಬರವಣಿಗೆಹಾಗೂಸಂವಹನ ಕೌಶಲಬೆಳೆಸಿಕೊಳ್ಳಬೇಕು ಎಂದು ಆರ್‌ಎಸ್‌ಎಸ್ ಉತ್ತರ ಹಾಗೂ ದಕ್ಷಿಣ ಪ್ರಾಂತ ಪ್ರಚಾರ ಪ್ರಮುಖ ಅರುಣಕುಮಾರ ಹೇಳಿದರು.

ನಗರದ ಸಂಘಮಿತ್ರ ಆರ್‌ಎಸ್‌ಎಸ್ ಕಚೇರಿಯಲ್ಲಿ ಮಹರ್ಷಿ ನಾರದರ ಜಯಂತಿ ಕಾರ್ಯಕ್ರಮದಲ್ಲಿಮುಖ್ಯವಕ್ತಾರರಾಗಿ ಮಾತನಾಡಿದ ಅವರು, ಪತ್ರಿಕೋದ್ಯಮವನ್ನುಪತ್ರಕರ್ತ-ರೇ ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದರು.

ಪತ್ರಿಕೋದ್ಯಮ ಬಹಳ ಕಷ್ಟದ ವೃತ್ತಿ. ನಾರದ ಮುನಿಗಳು ಇದರ ಮೂಲ ಕತೃ. ಅವರು ತ್ರಿಲೋಕ ಸಂಚಾರಿಯಾಗಿ ನಡೆಯುವ ಎಲ್ಲ ವಿದ್ಯಮಾನಗಳನ್ನು ದೇವಾನುದೇವತೆಗಳಿಗೆನೀಡುತ್ತಿದ್ದರು ಎಂದ ಅರುಣಕುಮಾರ, ಸಿನಿಮಾ ಕ್ಷೇತ್ರ ನಾರದರ ವ್ಯಕ್ತಿತ್ವವನ್ನು ಅವಮಾನ ಮಾಡಿದೆ. ಹೀಗಾಗಿ ನಾರದರ ಗುಣಗಳನ್ನು ತಿಳಿಸುವ ಕೆಲಸ ಆಗಬೇಕಿದೆ ಎಂದು ಹೇಳಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಅಧ್ಯಕ್ಷ ಆನಂದ ಧಲಬಂಜನ ಮಾತನಾಡಿ, ನಾರದರು ದೇವಾನುದೇವತೆಗಳಿಗೆ ಸಂಪರ್ಕ ಸೇತುವೆಯಾಗಿದ್ದರು. ಅವರಿಂದ ಒಬ್ಬರಿಂದೊಬ್ಬರಿಗೆ ಮಾಹಿತಿ ಲಭ್ಯವಾಗುತ್ತಿತ್ತು.ಹಾಗಾಗಿ ಅವರನ್ನು ಪತ್ರಕರ್ತರಮೂಲಪುರುಷಎಂದು ಕರೆಯಲಾಗುತ್ತದೆ. ಪತ್ರಕರ್ತರು ಸಂವಹನ ಹಾಗೂ ತಂತ್ರಜ್ಞಾನ ಕೌಶಲ ಬೆಳೆಸಿಕೊಳ್ಳಬೇಕಿದೆ. ಅಂ-ದಾಗ ಉತ್ತಮ ಪತ್ರಕರ್ತರಾಗಲು ಸಾಧ್ಯ ಎಂದರು.

ಜಿಲ್ಲಾ ಸರಸಂಘ ಚಾಲಕ ಚಂದ್ರಶೇಖರ ದೊಡಮನಿ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕ ವೀರಣ್ಣ ಚರಂತಿಮಠ, ಜಿಲ್ಲಾ ಬಿಜೆಪಿ ಅಧ್ಯಕ್ಷ ಶಾಂತಗೌಡ ಪಾಟೀಲ, ಗುಂಡೂ ಶಿಂಧೆ, ಜಯಂತ ಕುರಂದವಾಡ, ಸತ್ಯನಾರಾಯಣ ಹೇಮಾದ್ರಿ, ಸುರೇಶ ಮಾಗಿ, ತಿಮ್ಮಣ್ಣ ಭಜಂತ್ರಿ, ಚಂದ್ರು ಹೂಗಾರ ಇತರರಿದ್ದರು.

# ಆನ್‌ಲೈನ್ ಮೂಲಕ ಭೂ ಸುರಕ್ಷಾ ಸೇವೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.19– ಭೂ ಸುರಕ್ಷಾ ಯೋಜನೆಯಡಿ ಜಿಲ್ಲೆಯ ಎಲ್ಲ ತಾಲ್ಲೂಕು ಕಚೇ-ರಿಯ ಅಭಿಲೇಖಾಲಯಗಳ ದಾಖಲೆಗಳು ಮತ್ತು ವಹಿಗಳನ್ನು ಗಣಕೀಕರಣಗೊಳಿಸಲಾಗುತ್ತಿದ್ದು ಮುಂದಿನತಿಂಗಳಲ್ಲಿಸಾರ್ವಜನಿಕರಿಗೆ ಈಸೇವೆಲೋಕಾರ್ಪಣೆಗೊಳ್ಳಲಿದೆ.

ಅದಕ್ಕೆಪೂರಕವಾಗಿ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಇಂದಿನಿಂದಲೇ ದಾಖಲೆಗಳನ್ನು ಆನ್‌ಲೈನ್ ಮೂಲಕ ನೀಡಲು ಅವಕಾಶ ಕಲ್ಪಿಸಲಾಗಿದೆ. ಸಾರ್ವಜನಿಕರು ಈ ಸೇವೆಯ ಸದುಪಯೋಗ ಪಡೆದುಕೊಳ್ಳಬಹುದಾಗಿದೆ.

ಭೂ ಸುರಕ್ಷಾ ಸೇವಾ ವಿತರಣೆ ಸ್ವಯಂ ಸೇವಾ ಪೋರ್ಟಲ್ http://recordroom.karnataka.gov.in/service4ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಪೋರ್ಟಲ್‌ನಲ್ಲಿ ಮೊದಲು ತಮ್ಮ ಮೊಬೈಲ್ ಸಂಖ್ಯೆಯೊಂದಿಗೆ ಲಾಗಿನ್ ಮಾಡಿಕೊಂಡು ಮೂಲ ಅರ್ಜಿದಾರರು ವಿವರಗಳನ್ನು ಒದಗಿಸಬೇಕು. ಡಾಕ್ಯೂಮೆಂಟ್ ಹುಡುಕಿ ಡಾಕ್ಯೂಮೆಂಟ್‌ನಿಂದ ಅಗ್ಯವಿರುವ ಪುಟಗಳನ್ನು ಆಯ್ಕೆ ಮಾಡಬೇಕು. ಪುಟಗಳನ್ನು ಇಚ್ಛೆ ಪಟ್ಟಿಗೆ ಸೇರಿಸಿ ದಾಖಲೆ ಪೂರ್ವ ವೀಕ್ಷಣೆ ಮಾಡಿ, ಆನ್‌ಲೈನ್ ಪಾವತಿ ಮಾಡಬೇಕು. ನಂತರ ಡಾಕ್ಯೂಮೆಂಟ್ ಡೌನ್‌ಲೋಡ ಮಾಡಿಕೊಳ್ಳಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಾಧನೆಗಳೇ ಇಲ್ಲವಾದರೂ ಸಾಧನಾ ಸಮಾವೇಶ-ಬಿಜೆಪಿ ಆರೋಪ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.19– ರಾಜ್ಯದಲ್ಲಿ ಭೃಷ್ಟಾಚಾರ ತುಂಬಿ ತುಳುಕಿದ್ದು,ಗಲಭೆ,ಅಧಿಕಾರಿಗಳ ಮೇಲೆ ದಬ್ಬಾಳಿಕೆ ಪ್ರಕರಣಗಳು ನಿತ್ಯ ನಡೆಯುತ್ತಿದ್ದು ಅರಾಜ-ಕತೆ ಉಂಟಾಗಿ ಅಭಿವೃದ್ಧಿ ಶೂನ್ಯವಾಗಿದೆ ಎಂದು ಬಿಜೆಪಿ ಮುಖಂಡರು ಆರೋಪಿಸಿದ್ದಾರೆ. ನಗರದಲ್ಲಿ ಸೋಮವಾರ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಜಂಟಿ ಸುದ್ದಿಗೋಷ್ಠಿ ನಡೆಸಿದ ಪ್ರಮುಖರು, ಎರಡು ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ರಾಜ್ಯದಲ್ಲಿ ಯಾವ ಕೆಲಸಗಳೂ ಆಗಿಲ್ಲ. ಹೀಗಿದ್ದರೂ ಸಾಧನಾ ಸಮಾವೇಶ ಮಾಡಲು ಹೊರಟಿರುವುದು ಹಾಸ್ಯಾಸ್ಪದ ಸಂಗತಿ ಎಂದರು.

ಪಕ್ಷದ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ,ಸಂಸದಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯನಾರಾಯಣಸಾ ಭಾಂಡಗೆ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿ, ಕೋಮು ಗಲಭೆಗಳು, ಕೊಲೆ ಪ್ರಕರಣಗಳನ್ನು ನಿಯಂತ್ರಿಸುವಲ್ಲಿ ವಿಫಲವಾಗಿರುವ ಆಡಳಿತಯಂತ್ರ ಯಾವುದೇ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳದೇ ಅಸಡ್ಡೆಯನ್ನು ತೋರಿಸುತ್ತಿದೆ ಎಂದು ಹೇಳಿದರು.

ಕೃಷ್ಣಾ ಮೇಲ್ದಂಡೆ ಯೋಜನೆ ವಿಷಯದಲ್ಲಿ ಸರ್ಕಾರ ಸಂಪೂರ್ಣವಾಗಿ ನಿರ್ಲಕ್ಷ್ಯ ತೋರಿದೆ. ಈತನಕ ಯೋಜನೆಗೆ ನಯಾಪೈಸೆ ಬಿಡುಗಡೆ ಮಾಡಿಲ್ಲ. ಕಾಮಗಾರಿ ಸಂಪೂರ್ಣವಾಗಿ ನಿಂತು ಹೋಗಿವೆ. ಮುಳುಗಡೆ ಸಂತ್ರಸ್ತರ ಗೋಳು ಕೇಳುವವರು ಇಲ್ಲದಾಗಿದೆ. ಸರ್ಕಾರ ಕಣ್ಣಿದ್ದು ಕುರುಡಾಗಿದ್ದು, ಕಿವಿಯಿದ್ದು ಕಿವುಡವಾಗಿದೆ ಎಂದರು. ಎರಡು ವರ್ಷಗಳ ಆಡಳಿತದ ಅವಧಿಯಲ್ಲಿ ಎಲ್ಲವೂ ವೈಫಲ್ಯಗಳೇ ಇರುವಾಗ ಹೊಸಪೇಟೆಯಲ್ಲಿಸಾಧನಾಸಮಾವೇಶ ಮಾಡಲು ಹೊರಟಿರುವುದು ನಾಚಿಕೆಗೇಡಿನ ಸಂಗತಿ ಎಂದ ಸಂಸದ ಗದ್ದಿಗೌಡರ, ಪ್ರತಿಪಕ್ಷ ಬಿಜೆಪಿ ಸದಾ ಸರ್ಕಾರವನ್ನು ಎಚ್ಚರಿಸುತ್ತಿದ್ದರೂ ದಪ್ಪ ಚರ್ಮ ಇರುವಂತೆ ವರ್ತಿಸುತ್ತಿದೆ ಎಂದು ಹೇಳಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಕುಟುಂಬದ ವಿರುದ್ಧ ಮೂಡಾ ಪ್ರಕರಣ ಸೇರಿದಂತೆ ಹಲವು ಆರೋಪಗಳು ಕೇಳಿಬಂದಿವೆ. ಪಕ್ಷದ ಸಚಿವರು, ಶಾಸಕರ ಮೇಲೆಯೂ ಆರೋಪಗಳಿವೆ. ಹೀಗಿದ್ದೂ ಏನೂ ಆಗಿಲ್ಲದ ರೀತಿಯಲ್ಲಿ ಕಾಂಗ್ರೆಸ್ಸಿಗರು ನಡೆದುಕೊಳ್ಳುತ್ತಿದ್ದಾರೆ. ಇದು ಲಜ್ಜೆಗೇಡು ಸಂಗತಿ ಎಂದ ನಾರಾಣಸಾ ಭಾಂಡಗೆ, ಸರ್ಕಾರಿ ಗುತ್ತಿಗೆಯಲ್ಲಿ ಮುಸ್ಲಿಂರಿಗೆ ಶೇ.4 ರಷ್ಟು ಮೀಸಲಾತಿ ನೀಡಿರುವುದು ತುಷ್ಟೀಕರಣವೇ ಸರಿ ಎಂದರು.

ಎಲ್ಲರಂಗಗಳಲ್ಲೂವಿಫಲವಾಗಿರುವ ರಾಜ್ಯ ಸರ್ಕಾರ ರಾಜ್ಯವನ್ನು ಆರ್ಥಿಕವಾಗಿ ದಿವಾಳಿ ಅಂಚಿಗೆ ತಲುಪಿಸಿದೆ. ಹಣಕಾಸು ಸ್ಥಿತಿ ಹದಿಗೆಟ್ಟಿದೆ.ಅಭಿವೃದ್ಧಿ ಕಾರ್ಯಗಳಿಗೆ ಹಣವಿಲ್ಲ, ಶಾಸಕರುಗಳು ತಮ್ಮ ಕ್ಷೇತ್ರದ ಅಭಿವೃದ್ಧಿಗೆ ಹಣ ನೀಡಿ ಎಂದು ಅಂಗಲಾಚುತ್ತಿದ್ದಾರೆ. ಬೆಲೆ ಏರಿಕೆಯಿಂದ ಜನ ತತ್ತರಿಸಿದ್ದಾರೆ ಎಂದ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಇದೇನಾ ಇವರ ಸಾಧನೆ ಎಂದು ಪ್ರಶ್ನಿಸಿದರು. ಸುದ್ದಿಗೋಷ್ಠಿಯಲ್ಲಿ ಸತ್ಯನಾರಾಯಣ ಹೇಮಾದ್ರಿ,ಶಿವಾನಂದ ಸುರಪುರ ಇದ್ದರು.

# ಆಪರೇಷನ್ ಸಿಂಧೂರ ಸಂಪೂರ್ಣ ಯಶಸ್ವಿ:ಮಾನಪ ವಜ್ಜಲ




ಮಲ್ಲಮ್ಮ ನುಡಿ ವಾರ್ತೆ

ಲಿಂಗಸೂಗೂರು:ಪ್ರಧಾನ ಮಂತ್ರಿ ನರೇಂದ್ರ ಮೋದಿ ದಿಟ್ಟ ನಾಯಕತ್ವದಲ್ಲಿ ನಮ್ಮ ಸೈನಿಕರು ಪಾಕಿಸ್ತಾನ ದೇಶದ ಉಗ್ರಗಾಮಿಗಳ ನೆಲೆಯನ್ನು ಧ್ವಂಸಮಾಡಿ ನಿರ್ಮೂನೆ ಮಾಡಿದ ಆಪರೇಷನ್ ಸಿಂಧೂರ ಸಂಪೂರ್ಣ ಯಶಸ್ವಿಯಾಗಿದ್ದು ಅದರ ಅಂಗವಾಗಿ ತಿರಂಗಾ ಯಾತ್ರೆಯುವಕರಲ್ಲಿದೇಶಪ್ರೇಮದ ಜಾಗೃತಿ ಮೂಡಿಸುವುದಾಗಿದೆ ಎಂದು ಶಾಸಕ ಮಾನಪ ವಜ್ಜಲ ಹೇಳಿದರು.

ಅವರು ದೊಡ್ಡ ಹನುಮಂತ ದೇವಸ್ಥಾದಿಂದಲಕ್ಷ್ಮೀದೇವಸ್ಥಾನದರಗೆ ಯಾತ್ರೆಯಲ್ಲಿ ಭಾಗಿಯಾಗಿ ದೇವಸ್ಥಾನದ ಮುಂದೆ ಬಹಿರಂಗ ಸಭೆಯನ್ನುಉದ್ದೇಶಿಸಿ ಮಾತನಾಡುತ್ತಾ ಪಾಕಿಸ್ತಾನದ ಉಗ್ರಗಾಮಿಗಳು ಕಾಶ್ಮೀರ ರಾಜ್ಯದಲ್ಲಿ ಅಮಾಯಕ 26 ಕುಟುಂಬದ ಮುಖ್ಯಸ್ಥರನ್ನು ಗುಂಡಿನಿಂದ ಹೊಡೆದು ಸಾಯಿಸಿ ನಿಯಮಿತ ನಮ್ಮ ಸೈನಿಕರು ಆಪರೇಷನ ಸಿಂಧೂರ ಮೂಲಕ ಉಗ್ರಗಾಮಿಗಳು ತಲೆ ಎತ್ತದಂತೆ ಮಾಡಿದರು,ಪಾಕಿಸ್ತಾನಯುದ್ಧದಲ್ಲಿ ಗೆದಿದ್ದೆಂದು ಸುಳ್ಳುಬೊಗಳಿಬಿಡುತ್ತಾ ಅಮೆರಿಕ ಅಧ್ಯಕ್ಷ ಟ್ರಂಪ ಕಾಲ್ಲಿಡ್ಡು ಕದನ ವಿರಾಮ ಘೋಷಿಸಿದರು ಕೆಲವಡೆ ತಮ್ಮ ಚಟುವಟಿಕೆ ನಡೆಸಿದ್ದು ಅದಕ್ಕೆ ಭಾರತ ಅಂಜುವುದಿಲ್ಲ, ನಮ್ಮ ದೇಶದ ಸೈನಿಕರು ನಡೆಸಿದ್ದು ಪಿಕ್ಚರ್ ಬಾಕಿಯಿದೆ ಎಂದು ಹೇಳಿದರು.

ಮಾಜಿ ಸೈನಿಕ ವಿರುಪಾಕ್ಷಪ್ಪ ಹಿರೆಮಠ ಮಾತನಾಡಿ ಪಾಕಿಸ್ತಾನವನ್ನು ಬಗ್ಗಿಬಡಿಯಲು ನಮ್ಮ ಸೈನಿಕರು ತಕ್ಕ ಉತ್ತರ ನೀಡಿದಾರೆ ಹಿಂದೆ ದೇಶದಿಂದ ಬ್ರಿಟೀಷರನ್ನು ಹೊಡಿಸಲು ವೀರರಾಣಿ ಕಿತ್ತೂರ ಚನ್ನಮ್ಮ, ಜಾನ್ಸಿರಾಣಿ ಲಕ್ಷ್ಮೀಬಾಯಿ ಅಂತವರು ಜನಿಸಿದ ದೇಶವಾಗಿದೆ ಪಾಕಿಸ್ತಾನದ ಮೋಸದ ಆಟ ನಮ್ಮ ದೇಶದ ಸೈನಿಕರ ಮುಂದೆ ನಡೆಯುವುದಿಲ್ಲ ಎಂದು ತಿಳಿಸಿದರು.

ತಿರಂಗ ಯಾತ್ರೆಯಲ್ಲಿ ಬಿಜೆಪಿ ಮುಖಂಡ ಶರಣಪ್ಪ ಮೇಟಿ, ಗಿರಿಮಲ್ಲಣಗೌಡ, ಜಗನಾಥ ಕುಲಕರ್ಣಿ ರಾಯಚೂರು ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಲ , ತಾಲೂಕು ಅಧ್ಯಕ್ಷ ಆಯ್ಯಪ್ಪ ಮಾಳೂರು, ಬಸನಗೌಡ ಮೇಟಿ, ಪರಮೇಶ ಯಾದವ, ಸಂತೋಷ ರಾಜಗುರು, ದ್ಯಾಮಣ್ಣ ನಾಯಕ ಹಾಗೂ ಮಾಜಿ ಸೈನಿಕ ಸಂಘದ ತಾಲೂಕು ಅಧ್ಯಕ್ಷ ವೀರನಗೌಡ ಬಯಾಪೂರ, ಅನಂತದಾಸ, ಅಮರೇಶ ಹೆಸರೂರು, ಮಾಜಿ ಸೈನಿಕರು, ಶಾಲಾ ಕಾಲೇಜು ವಿದ್ಯಾರ್ಥಿಗಳು ಹಾಗೂ ನಾಗರಿಕರು ಭಾಗವಹಿಸಿದರು.

# ಪತ್ರಕರ್ತರ ಜಿಲ್ಲಾಮಟ್ಟದ ಕ್ರಿಕೆಟ್ ಪಂದ್ಯಾವಳಿ ಬಾಗಲಕೋಟೆ ಲಯನ್ ಪ್ರೆಸ್ ತಂಡಕ್ಕೆ ಪ್ರಶಸ್ತಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.19–ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಜಿಲ್ಲೆಯಪತ್ರಕರ್ತರಿಗೆ ಏರ್ಪಡಿಸಿದ್ದ ಜಿಲ್ಲಾಮಟ್ಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಬಾಗಲಕೋಟೆ ಲಯನ್ ಪ್ರೆಸ್ ತಂಡ ಸತತ 6 ನೇ ಬಾರಿಗೆ ಚಾಂಪಿಯನ್ಸ್ ಟ್ರೋಪಿ ಪಡೆದುಕೊಂಡಿತು.

ರವಿವಾರ ಸಂಜೆ ನಡೆದ ಅಂತಿಮ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಅಶೋಕ ಶೆಟ್ಟರ ನಾಯಕತ್ವದ ಬಾಗಲಕೋಟೆ ಲಯನ್ ಪ್ರೆಸ್ ತಂಡ, ಎದುರಾಳಿ ಸಿದ್ದು ದುತ್ತರಗಾವಿ ನಾಯಕತ್ವದ ರಾಯಲ್ ರಾಕರ್ಸ್ ತಂಡದ ವಿರುದ್ಧ 35 ರನ್‌ಗಳ ಭರ್ಜರಿ ಗೆಲುವು ಸಾಧಿಸಿ ಸಂಭ್ರಮಿಸಿತು.

ಆರಂಭಿಕ ಆಟಗಾರ ಮಲ್ಲು ಹೊಸಮನಿ 44 ರನ್ ಹಾಗೂ ನಾಯಕ ಅಶೋಕ ಶೆಟ್ಟರ ಅವರ 28ರನ್ ನೆರವಿನಿಂದ ಬಾಗಲಕೋಟೆ ಲಯನ್ ತಂಡ ಎರಡು ವಿಕೆಟ್‌ಗೆ 91 ರನ್ ಗಳಿಸಿತು. ಎದುರಾಳಿ ರಾಯಲ್ ರಾಕರ್ಸ್ ತಂಡದ ಶ್ರೀಧರ ಚಂದರಗಿ ಹಾಗೂ ಚಂದ್ರಶೇಖರ ತಲಾ ಒಂದು ವಿಕೆಟ್ ಪಡೆದರು.

92 ರನ್ ಗುರಿ ಬೆನ್ನತ್ತಿದ ರಾಯಲ್ ರಾಕರ್ಸ್ ತಂಡವು ನಿಗದಿತ 6 ಓವರ್‌ಗಳಲ್ಲಿ ಒಂದು ವಿಕೆಟ್ ಕಳೆದುಕೊಂಡು ಕೇವಲ 56 ರನ್ ಮಾತ್ರ ಗಳಿಸಿ ಸೋಲನುಭವಿಸಿ ರನ್ನರ ಆಫ್ ಪ್ರಶಸ್ತಿ ಪಡೆಯಿತು. ತಂಡದ ಮಂಜುನಾಥ ಗಾಣಿಗೇರ 38 ಶ್ರೀಧರ 10 ರನ್ ಗಳಿಸಿದರು. ಲಯನ್ ಪ್ರೆಸ್ ತಂಡದ ಮಂಜು ಶಿಂಧೆ ಒಂದು ವಿಕೆಟ್ ಪಡೆದರು.

ಬಾಗಲಕೋಟೆ ಲಯನ್ ಪ್ರೆಸ್ ತಂಡದ ಮಲ್ಲು ಹೊಸಮನಿ ಪಂದ್ಯ ಪುರುಷೋತ್ತಮ ಹಾಗೂ ರಾಯಲ್ ರಾಕರ್ಸ ತಂಡದ ಮಂಜು ಗಾಣಿಗೇರ ಸರಣಿ ಶ್ರೇಷ್ಠಹಾಗೂ ಉತ್ತಮ ಬ್ಯಾಟಿಂಗ್ ಪ್ರಶಸ್ತಿ ಪಡೆದುಕೊಂಡರು. ಉತ್ತಮ ಬಾಲರ್ ಪ್ರಶಸ್ತಿಯನ್ನು ಶ್ರೀಧರ ಚಂದರಗಿ, ಉತ್ತಮ ಫಿಲ್ಡರ್ ಪ್ರಶಸ್ತಿಯನ್ನು ಸೋಮಶೇಖರ ಪೂಜಾರ ಹಾಗೂ ಉತ್ತಮ ಕ್ಯಾಚರ್ ಪ್ರಶಸ್ತಿಯನ್ನು ಶಿವರಾಜ್ ಬೆಣ್ಣೂರ ಪಡೆದುಕೊಂಡರು.

ಪಂದ್ಯಾವಳಿಯಲ್ಲಿ 12 ತಂಡಗಳು ಭಾಗವಹಿಸಿದ್ದವು. ಬೆಳಿಗ್ಗೆ ಪಂದ್ಯಾವಳಿಯನ್ನು ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಕಾಲೇಜು ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ ಉದ್ಘಾಟಿಸಿದರು. ಸಂಗ್ಯ ಸರಗಣಾಚಾರಿ, ಪ್ರಾಚಾರ್ಯ ಎನ್.ಜಿ.ಬೇವಿನಹಳ್ಳಿ,ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಅಧ್ಯಕ್ಷ ಆನಂದ ಧಲಬಂಜನ, ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಮಹೇಶ ಅಂಗಡಿ ಇದ್ದರು.

ಸಂಜೆ ಜಿಲ್ಲಾಧಿಕಾರಿ ಜಾನಕಿ ಕೆ.ಎಂ. ವಿಜೇತ ತಂಡಗಳಿಗೆ ಬಹುಮಾನ ಹಾಗೂ ಟ್ರೋಫಿ ವಿತರಿಸಿದರು. ಜಿಲ್ಲಾ ಪಂಚಾಯತ ಸಿಇಓ ಶಶಿಧರ ಕುರೇರ ಇದ್ದರು.

ಜಾಹೀರಾತಿಗಾಗಿ ಇಂದೆ
ಸಂಪರ್ಕಿಸಿ:9449732000

# ಸಾಧನೆಯ ಕನಸು ಕಾಣಲು ಹಣ ಬೇಕಿಲ್ಲ-ಮೂಗನೂರಮಠ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.19– ಸಾಧನೆಯ ಕನಸು ಕಾಣಲು ಹಣ ಬೇಕಾಗಿಲ್ಲ, ಕನಸು ನನಸಾಗಲು ಪಣ ಬೇಕು. ಅಂದಾಗ ಮಾತ್ರ ಸಾಧನೆ ನಮ್ಮದಾಗುತ್ತದೆ ಎಂದು ಬಸವೇಶ್ವರ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಎಸ್.ಆರ್. ಮೂಗನೂರಮಠ ಹೇಳಿದರು.

ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಮತ್ತು ಹಾಗೂ ಬಿ.ಕಾಂ. ಬಿ.ಬಿ.ಎ ಎ.ಕಾಂ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ಮನುಷ್ಯರಿಗೆ ಮಾತ್ರ ಕನಸುಕಾಣುವ ಗುಣವಿರುವದಿಲ್ಲ, ಪ್ರಕೃತಿಯಲ್ಲೂ ಕನಸು ಕಾಣುವ ಗುಣವಿದೆ ಎಂದರು.

ಪ್ರತಿಯೊಬ್ಬ ವಿದ್ಯಾರ್ಥಿಗಳು ಕನಸನ್ನು ಕಾಣಲೇಬೇಕು. ಕನಸುಗಳು ಅಂದರೆ ನಿದ್ದೆ ಹಾಳಾಗುವಂತೆ ಇರಬೇಕು. ಅಂತಹ ಕನಸುಗಳು ಇರಬೇಕು. ನಿದ್ದೆ ಹಾಳಾಗುವುದೆಂದರೆ ಎಚ್ಚರಗೊಳ್ಳವದಕ್ಕೆ ಮಾತ್ರ ಸೀಮಿತವಾಗಬಾರದು. ಎಚ್ಚರವಿದ್ದಾಗಲೂ ನಮ್ಮ ಎಲ್ಲ ಚಟುವಟಿಕೆಗಳು ನಮ್ಮ ಸಾಧನೆ ಕಡೆಗೆ ದಾಪುಗಾಲು ಹಾಕಬೇಕು ಎಂದು ಮೂಗನೂರಮಠ ಹೇಳಿದರು.

ಇದೇ ಸಂದರ್ಭದಲ್ಲಿ ವಾಣಿಜ್ಯ ಚಂದನ ವಾರ್ಷಿಕ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಸಾಹಿತ್ಯ ರತ್ನ ಪ್ರಶಸ್ತಿ ಪಡೆದ ಪ್ರಾಧ್ಯಾಪಕ ಬಸವರಾಜ ಖೋತ ಹಾಗೂ ಕೆಸೆಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಎಸ್.ಆಯ್.ಪತ್ತಾರ ಅವರನ್ನು ಸತ್ಕರಿಸಲಾಯಿತು.

ವಿವಿಧ ವಿಭಾಗಗಳಲ್ಲಿ ರ‍್ಯಾಂಕ ಪಡೆದ, ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಜಗನ್ನಾಥ ಚವ್ಹಾಣ ವಹಿಸಿದ್ದರು.

ರಾಜು ಮೇಲಿನಮನಿ ಸ್ವಾಗತಿಸಿದರು. ಬಿ.ವ್ಹಿ.ಖೋತ ಪರಿಚಯಿಸಿದರು. ಕೆ.ಜಿ.ಮಳಜಿ ವರದಿ ವಾಚಿಸಿದರು. ಎಸ್.ಎಸ್.ಕೋಟ್ಯಾಳ ವಂದಿಸಿದರು.

# ಭ್ರಷ್ಟಾಚಾರದ ಆರೋಪ ಮುಚ್ಚಿ ಹಾಕಲು ಸರ್ಕಾರದ ದುಡ್ಡಿನಲ್ಲಿ ಸಾಧನಾ ಸಮಾವೇಶ ವೀರನಗೌಡ ಲೆಕ್ಕಿಹಾಳ



ಮಲ್ಲಮ್ಮ ನುಡಿ ವಾರ್ತೆ

ಲಿಂಗಸೂಗೂರು ಪಟ್ಟಣದಲ್ಲಿ ಸೋಮವಾರಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿಯ ರಾಯಚೂರು ಜಿಲ್ಲಾ ಅದ್ಯೆಕ್ಷ ರಾದ ವೀರನಗೌಡ ಲೆಕ್ಕಿಹಾಳ 'ರಾಜ್ಯ ಸರ್ಕಾರವು ತನ್ನ ವೈಫಲ್ಯ ಹಾಗೂ ಭ್ರಷ್ಟಾಚಾರದ ಆರೋಪ ಮುಚ್ಚಿ ಹಾಕಲು ಸರ್ಕಾರದ ದುಡ್ಡಿನಲ್ಲಿ ಸಾಧನಾ ಸಮಾವೇಶ ಮಾಡುತ್ತಿದೆ. ಯಾವ ಪುರುಷರ್ಥಾಕ್ಕಾಗಿ ಸಮಾವೇಶ ಹಮ್ಮಿಕೊಳ್ಳುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಲಿಕಾಪ್ಟರ್‌ನಲ್ಲಿ ಓಡಾಡಿರುವುದೇ ಸಾಧನೆಯೇ? ಎಂದು ಪ್ರಶ್ನಿಸಿದರು.

ಇದೇ ವೇಳೆ ಆಪರೇಷನ್ ಸಿಂಧೂರ ಕುರಿತು ಮಾತನಾಡಿದ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ ದಿನಕ್ಕೊಂದು ಹೇಳಿಕೆ ನೀಡುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ಎಲ್ಲರೂ ಒಗ್ಗಟ್ಟಾಗಿರಬೇಕು. ಪಕ್ಷಕ್ಕಿಂತ ದೇಶ ದೊಡ್ಡದು, ದೇಶ ಇದ್ದರೆ ನಾವು ಎಂಬುದನ್ನು ಅರಿಯಬೇಕು' ಎಂದು

ರಾಜ್ಯ ಸರ್ಕಾರವು ತನ್ನ ವೈಫಲ್ಯ ಹಾಗೂ ಭ್ರಷ್ಟಾಚಾರದ ಆರೋಪ ಮುಚ್ಚಿ ಹಾಕಲು ಸರ್ಕಾರದ ದುಡ್ಡಿನಲ್ಲಿ ಸಾಧನಾ ಸಮಾವೇಶ ಮಾಡುತ್ತಿದೆ. ಯಾವ ಸಾಧನೆ ಮಾಡಿದ್ದಕ್ಕಾಗಿ ಸಮಾವೇಶ ಹಮ್ಮಿಕೊಳ್ಳುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಲಿಕಾಪ್ಟರ್‌ನಲ್ಲಿ ಓಡಾಡಿರುವುದೇ ಸಾಧನೆಯೇ ?.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 2 ವರ್ಷಗಳನ್ನು ಪೂರೈತಿಸಿದ ಹಿನ್ನಲೆಯಲ್ಲಿ ಕಾಂಗ್ರೆಸ್ ಸಾಧನಾ ಸಮಾವೇಶವನ್ನು ಹಮ್ನಿಕೊಂಡಿದ್ದು, ಇದೇ ಸಮಾವೇಶದ ವಿರುದ್ಧ ಬಿಜೆಪಿಯ ರಾಯಚೂರು ಜಿಲ್ಲಾ ಅಧ್ಯಕ್ಷರಾದ ವೀರನಗೌಡ ಲೆಕ್ಕಿಹಾಳ ಟೀಕಾ ಪ್ರಹಾರವನ್ನೇ ನಡೆಸಿದ್ದಾರೆ.

ಅಭಿವೃದ್ಧಿಗೆ ಏನು ಅನುದಾನ ನೀಡಿದ್ದಾರೆ ?

ಹೆಲಿಕಾಪ್ಟರ್‌ನಲ್ಲಿ ಓಡಾಡಲು ಎಷ್ಟು ಖರ್ಚು ಮಾಡಿದ್ದೀರಿ? ಮುಡಾ ಹಗರಣದಲ್ಲಿ ನಿಮ್ಮ ಕುಟುಂಬದ ಪಾತ್ರವೇನು? ನಿಮ್ಮ ಕಟು ನುಡಿಗಳಿಂದ ಎಷ್ಟು ಸರ್ಕಾರಿ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದನ್ನೂ ತಿಳಿಸಬೇಕು ಎಂದು ಕಿಡಿ-ಕಾರಿದರು. ಈ ಸಂದರ್ಭದಲ್ಲಿ

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂತೋಷ ರಾಜಗುರು, ತಾಲೂಕು ಅಧ್ಯಕ್ಷ ಅಯ್ಯಪ್ಪ ಮಾಳೂರು, ಚನ್ನಬಸವ ಹಿರೇಮಠ, ಅಂಬಣ್ಣ, ಪರಮೇಶ ಯಾದವ್, ಅನಂತದಾಸ್, ಬಸನಗೌಡ ಚಿತ್ತಾಪೂರು. ಉಪಸ್ಥಿತರಿದ್ದರು.

# ಏಸು ಸ್ವಾಮಿ ಮಾನವ ಜನಾಂಗದ ಉದ್ಧಾರಕ್ಕೆ ಶ್ರಮಿಸಿದರು



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ: ಏಸು ಸ್ವಾಮಿ ಮಾನವಜನಾಂಗದಉದ್ಧಾರಕ್ಕೆ ಶ್ರಮಿಸಿದರು. ಪ್ರತಿ ಮನುಷ್ಯ ಪ್ರೀತಿ, ವಿಶ್ವಾಸ, ಸಹೋದರತ್ವ, ಸೌಹಾರ್ದದಿಂದ ಬದುಕಲು ಹಾಗೂ ಯೇಸು ಸ್ವಾಮಿ ಪಟ್ಟ ಶ್ರಮಸಾರ್ಥಕಗೊಳಿಸಲುನಾವೆಲ್ಲ ಅವರ ತತ್ವಸಂದೇಶಗಳನ್ನು ಪಾಲಿಸಬೇಕಾಗಿದೆ ಎಂದು ಮುಂಬೈನ್ ಪಾಸ್ಟರ್ ಸುನೀಲ ಶರ್ಮಾ ಹೇಳಿದರು.

ಪಟ್ಟಣದಮೆಥೋಡಿಸ್ಟಚರ್ಚನಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮೂರು ದಿವಸದ ಏಸುಕ್ರೀಸ್ತ ಜಾತ್ರಾಮಹೋತ್ಸವದಲ್ಲಿ ಅವರು ಮಾತನಾಡಿದರು.

ಸ್ವಾರ್ಥ, ದ್ವೇಷ ತುಂಬಿದ ವಿಶ್ವಕ್ಕೆ ನಿಸ್ವಾರ್ಥ ಸೇವೆ ಮತ್ತು ಶಾಂತಿಯು ಶಾಂತಿಧೂತ ಏಸು ಕ್ರಿಸ್ತನ ಸಂದೇಶದಲ್ಲಿ ಇದೆ. ಏಸು ಕ್ರಿಸ್ತನ ಬೋಧನೆಗಳು ಸರ್ವಕಾಲಿಕವಾಗಿವೆ ಎಂದರು.

ಈಶ್ವರ್ ಚೈತನ್ಯವು ನಮ್ಮಲ್ಲಿ ಪ್ರತಿಯೊಬ್ಬರಿಗೂ ಸಾಮರಸ್ಯವನ್ನು ಹುಡುಕಲು, ದಯೆಯಿಂದ ಪರಸ್ಪರ ಉನ್ನತೀಕರಿಸಲು ಮತ್ತು ನಮ್ಮ ಜಗತ್ತನ್ನು ಅನನ್ಯವಾಗಿ ಪರಸ್ಪರ ಸಂಪರ್ಕಪಡಿಸುವ ಸುಂದರ ವೈವಿಧ್ಯತೆಯನ್ನು ಪಾಲಿಸಲು ಸ್ಪೂರ್ತಿ ನೀಡಲಿ ಎಂದು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

ರೇವರೆಂಟ್ ಪ್ರಮೋದ ಪ್ರೇಜರ್ ಮಾತನಾಡಿದರು.

ರೇವರೆಂಟ್ ಶರದ ಘಾಗರೆ, ರೇಂವರೆಂಟ ಜಾಧವ, ರೇವರೆಂಟ್ ಸುಧೀರ, ರೇವರೆಂಟ್ ಆತ್ಮಾರಾಮ, ರೇವರೆಂಟ್ ರಾಜೇಂದ್ರ, ಪಾಸ್ಟರ ಅಮೀತಕುಮಾರ, ಪಾಸ್ಟರ ಡ್ಯಾನಿವೇಲ್, ಸುಶೀಲ ಘಾಗರೆ, ನಿಲೇಶ ಘಾಗರೆ, ದಯಾನಂದ ಗಹುಕಾಂಬಳೆ ಹಾಗೂ ಇನ್ನಿತರರಿದ್ದರು.

